Government to defray the charges which will come in course of payment during the financial year ending 31st day of March 1983 in respect of "Miscellaneous General Service."

MR. SPEAKER.—Now the House stands adjourned to meet at 3-30 P.M.

(The House adjourned at Five minutes past Two of the clock to meet again in the afternoon a Thirty Minutes past Three of the clock)

The House reassembled at Fourty Minutes past Three of the Clock.

(MR. DEPUTY SPEAKER In the Chair.)

FINANCIAL BUSINESS

Discussion and Voting of Demand for Grants for 1982-83

SRI M. VEERAPPA MOILY (Minister for Finance and Tourism).—Sir, on behalf of the Chief Minister on the recommendation of the Governor, I beg to move.—

DEMAND No. 5

"That a sum not exceeding Rs. 5,30,19,000 on Revenue Account and Rs. 13,50 00,000 on Capital Account inclusive of the sum granted on account be granted to the Goverement to defray the charges which will come in course of payment during the financial year ending 31st day of March 1983 in respect of "Industries (Excluding Small Scale Industries and Sericulture)".

DEMAND No. 7

"That a sum not exceeding Rs.11,88,40,000 on Revenue Account and Rs. 3,57,76,000 on Capital Account inclusive of the sum granted 'on account' be granted to theGovernment to defray the charges which will come in course of payment during the financial year ending 31st day of March 1983 in respect of 'Small Scale Industries".

DEMAND No. 42

"That a sum not exceeding Rs. 13.58,33,000 on Revenue Account and Rs. 10,00,000 on Capital Account inclusive of the sum granted 'on account' be granted to the Government to defray the charges which will come in course

of payment during the financial year ending 31st day of March 1983 in respect of "Area Development and other Items of Planning Department."

DEMAND No. 22

"That a sum not exceeding Rs. 9,22.85,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "State Excise".

DEMAND No. 41

"That a sum not exceeding Rs. 4,58.14,000 on Revenue Account and Rs. 1.12,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Miscellaneous Demands of Chief Minister".

The question was proposed

SRI Y. RAMAKRISHNA (Minister for Law and parliamentary Affairs including Animal Husbandary).—Sir on behalf of the Chief Minister, on the recommendation of the Governor, I beg to move,—

DEMAND No. 8

"That a sum not exceeding Rs. 14,86.61,000 on Revenue account and Rs. 6,32,25,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Sericulture".

The question was proposed

SRI A. K. ABDUL SAMAD (Minister for Health and Famil Welfare).—Sir, on behalf of the Chief Minister, on the recommenday tion of the Governor, I beg to move.—

DEMAND No. 53

"That a sum not exceeding Rs. 38,47,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of Wakfs"

The question was proposed

MR. DEPUTY SPEAKER.—All the Demands are before the House for discussion. The hon. Member Sri H. D. Devegowda to initiate the debate.

ಶ್ರೀ ಎಚ್.ಡಿ. ದೇವೇಗೌಡ (ಹೊಳೆನರಸೀಪುರ).—

ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಕೈಗಾರಿಕೆ ಸಣ್ಣ ರೇಷ್ಮೆ ಇಲಾಖೆ, ಸ್ಟೇಟ್ ಎಕ್ಸೈಸ್ ಇಲಾಖೆ ಮತ್ತಿತರ ಇಲಾಖೆಗಳ ಬೇಡಿಕೆ ಬಗ್ಗೆ ನನ್ನ ಅಭಿಪ್ರಾಯ ವನ್ನು ವ್ಯಕ್ತಪಡಿಸತಕ್ಕಂಥ ಕಾಲದಲ್ಲಿ ಕೇವಲ ರಾಜ್ಯದ ಕೈಗಾರಿಕೆ ಬೆಳವಣಿಗೆಯ ಬಗ್ಗೆ ಪ್ರಮುಖವಾಗಿ ಎಲ್ಲ ಕಾರ್ಯಗಳನ್ನು ತೆಗೆದುಕೊಂಡು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಇಚ್ಛಿಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ ಕಳೆದಸಾರಿ ಈ ಸದನದಲ್ಲಿ ಕೈಗಾರಿಕಾ ಇಲಾಖೆಯ ಮೇಲೆ ಚರ್ಚೆ ನಡೆಯುತಕ್ಕಂಥ ಕಾಲದಲ್ಲಿ ಮಾನ್ಯ ಅರ್ಥ ಸಚಿವರು ಆ ದಿವಸ ಅವರ ಇಲಾಖೆಯ ಬೇಡಿಕೆ ಮೇಲೆ ಚರ್ಚೆಗೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ಕೈಗಾರಿಕೆ ಬೆಳವಣಿಗೆ ೧೯೮೦-೮೧ರಲ್ಲಿ ಮಾಡಿದಂಥ ಸಾಧನೆಯ ಬಗ್ಗೆ ತುಂಬಾ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ, On any account, I do not think that we can beat the development which has perhaps awakaned the Kannadigas who are coming even from Bombay. ಹೇಳಿಕೊಂಡು ಮಲೆನಾಡು ತುಂಬಾ ಬದಲಾವಣೆಯಾಗಿದೆ ಎಂದು ಹೇಳಿ ತಮ್ಮ ಭುಜವನ್ನು ತಾವೇ ತಟ್ಟಿಕೊಳ್ಳಲಿಕ್ಕೆ ಹೋಗಿದ್ದಾರೆ. In terms of availing finances from IDBI, we have availed more finances I need not compare with Tamilnadu. ಎಲ್ಲ ಮಾತುಗಳನ್ನು ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ.

ಮಾನ್ಯ ಸಭಾಧ್ಯಕ್ಷರೇ ರಾಜ್ಯದ ಕೈಗಾರಿಕಾ ಬದಲಾವಣೆ ಈವತ್ತು ಅಷ್ಟೊಂದು ತೃಪ್ತಿಕರವಾಗಿ ಆಗಿಲ್ಲವೆಂದು ಹೇಳತಕ್ಕಂಥ ಕಾಲದಲ್ಲಿ ಬಹುಶಃ ಯಾವುದೇ ನನ್ನ ಮನಸ್ಸಿನಲ್ಲಿ ಕೇವಲ ವಿರೋಧ ಮಾಡಬೇಕು, ವಿರೋಧ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು ಎನ್ನುವ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿಲ್ಲವೆಂದು ಪೂರ್ವಭಾವಿ ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛಿಪಡುತ್ತೇನೆ. ನಾನು ಕೈಗಾರಿಕಾ ಬೆಳವಣಿಗೆಯ ಬಗ್ಗೆ ನಮ್ಮ ರಾಜ್ಯದ ಪರಿಸ್ಥಿತಿಯನ್ನು ವಿಡಂಬನೆ ಮಾಡುವುದಕ್ಕೆ ಮುಂಚೆ ಈ ಇಲಾಖೆಯ ಆಡಳಿತದಲ್ಲಿ ಇರತಕ್ಕಂಥ ಕೆಲವು ದೋಷಗಳನ್ನು ವ್ಯಕ್ತಪಡಿಸುತ್ತಾ ನಾನು ತಮ್ಮಲ್ಲಿ ಅದಕ್ಕೆ ಕೆಲವು ಸೂಚನೆಗಳನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಮಾನ್ಯ ಅಧ್ಯಕ್ಷರೇ ಕಳೆದಸಾರಿ ಈ ಮಾತನ್ನು ಹೇಳಿದ್ದೆ. ಈ ಸಾರಿಯೂ ಕೂಡ ಅದೇ ವಿಚಾರವನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ ಬಹುಶಃ ಈ ಸರ್ಕಾರ ಇನ್ನು ೬-೭ ತಿಂಗಳು ಮಾತ್ರ ಇರಬಹುದು ಎಂದು ಭಾವಿಸಿಕೊಂಡರೆ ಈ ಇಲಾಖೆಗಳ ಮೇಲೆ ಚರ್ಚೆ ಮಾಡತಕ್ಕಂಥದ್ದು ಬಹುಶಃ ಇದೇ ಕೊನೆಯಾಗಬಹುದು. ಈ ಸದನವು ಕೂಡ ಮತ್ತೆ ಮತ್ತೆ ಅಂದರೆ ೧೮೦ ದಿವಸಗಳಿಗಿಂತ ಮುಂಚಿತವಾಗಿ ಸೇರಿ ನಿಯಮಾವಳಿಗಳನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯತೆಯಿರಬಹುದು. ಈ ರಾಜ್ಯದಲ್ಲಿ ಕೈಗಾರಿಕಾ ಇಲಾಖೆಗೆ ಮಂತ್ರಿಯವರೇ ಇಲ್ಲವೆಂದು ಹೇಳಿದ್ದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳೇ ನೋಡಿಕೊಳ್ಳುತ್ತಿದ್ದಾರೆ. ಅವರು ಎಲ್ಲ ಖಾತೆಗಳನ್ನು ಇಟ್ಟುಕೊಳ್ಳುವುದಕ್ಕೆ ಅಧಿಕಾರವಿದೆ. ಆದರೆ ಕೆಲಸದ

ಒತ್ತಡ ಸನ್ನಿವೇಶಗಳ ಹಿನ್ನೆಲೆಯಲ್ಲಿ ಕೈಗಾರಿಕಾ ಬೆಳವಣಿಗೆಗೆ ಹೆಚ್ಚು ಗಮನವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ದೃಷ್ಟಿಯಿಂದ ನನಗೆ ಆದಂತ ಅನುಭವದ ಆಧಾರದ ಮೇಲೆ ಹೇಳುವುದಾದರೆ, ಕೈಗಾರಿಕಾ ಇಲಾಖೆಯನ್ನು ನೋಡಿಕೊಳ್ಳುವುದಕ್ಕೆ ಸಚಿವ ಸಂಪುಟದ ಒಬ್ಬ ಮಂತ್ರಿಯವರಿಗೆ ಹಂಗಾಮಿಯಾಗಿ ಅಧಿಕಾರ ನೀಡಿದ್ದಾರೆ. ಅಧಿಕೃತವಾಗಿ ಮುಖ್ಯಮಂತ್ರಿಗಳು ಸಚಿವಾಲಯದ ಕಾರ್ಯಗಳನ್ನು ನೋಡಿಕೊಳ್ಳುವುದಾದರೂ ಅನಧಿಕೃತವಾಗಿ ನೋಡಿಕೊಳ್ಳುವುದಕ್ಕೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿದ್ದಾರೆ. ಅದು ಸಭೆಯಲ್ಲಿ ಉತ್ತರ ಕೊಡುವುದಕ್ಕೆ ಮಾತ್ರ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಕೈಗಾರಿಕಾ ಕೆಲಸ ಕಾರ್ಯಗಳಿಗೆ ಸಾಕಷ್ಟು ಕಾಲವನ್ನು ವಿನಿಯೋಗ ಮಾಡತಕ್ಕಂಥದ್ದಕ್ಕೆ ರಾಜ್ಯದ ಮುಖ್ಯಮಂತ್ರಿಗಳಿಗೆ ಸಾಧ್ಯವಾಗಲಿಲ್ಲವೆಂದು ಪೂರ್ವಭಾವಿಯಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ ಕೈಗಾರಿಕೆ ಇಲಾಖೆ ವಿಧಾನಸೌಧದಿಂದ ಹಿಡಿದು ಕೂಲಿ ಮಾಡುವವರುವರೆಗೂ ಇಲಾಖೆಯ ಅಧಿಕಾರ ವಿಕೇಂದ್ರೀಕರಣ ಮಾಡತಕ್ಕಂಥದ್ದು ಬಹಳ ಅವಶ್ಯಕತೆ ಇದೆ ಎಂದು ನಾನು ಕಳೆದಸಾರಿಯೇ ಪ್ರಸ್ತಾಪ ಮಾಡಿದ್ದೆ. ಈವತ್ತು ರಾಜ್ಯಮಟ್ಟದಲ್ಲಿ, ಅದರಲ್ಲಿ ಇರತಕ್ಕಂಥ ಹಲವಾರು ಸರ್ಕಾರಿ ಸಂಸ್ಥೆಗಳು ಕೈಗಾರಿಕಾ ಸಂಸ್ಥೆಗಳು ಇದರ ಆಡಳಿತ ಮೇಲ್ವಿಚಾರಣೆಯನ್ನು ಒಳಗೊಂಡು ಕೈಗಾರಿಕಾ ಇಲಾಖೆಯ ಮೇಲೆ ವಿಚಾರಣೆಯನ್ನು ನೋಡತಕ್ಕಂಥ ಹೊಣೆಗಾರಿಕೆ ರಾಜ್ಯದ ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಗಳಿಗೆ ಇರುತ್ತದೆಂದು ಹೇಳತಕ್ಕಂಥ ಸಂದರ್ಭದಲ್ಲಿ ಪೂರ್ವಭಾವಿಯಾಗಿ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದು ಆಕಸ್ಮಿಕ, ಉದ್ದೇಶಪೂರ್ವಕವಾಗಿ ಹೇಳುತ್ತಿಲ್ಲ. ಈವತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಗಳು ಕಳೆದ ೪-೫ ವರ್ಷಗಳಿಂದ ಆಡಳಿತವನ್ನು ನಡೆಸುತ್ತಿರುವುದನ್ನು ನೋಡಿದಾಗ ಒಬ್ಬ ಕಾರ್ಯದರ್ಶಿ ಎರಡು ವರ್ಷಗಳ ಕಾಲ ಸೇವೆಯಲ್ಲಿ ಉಳಿಯಲಿಕ್ಕೆ ಸಾಧ್ಯವಾಗಿಲ್ಲ. ಒಂದು ವರ್ಷ, ಒಂದೂಕಾಲ ವರ್ಷ, ಎಂಟು ತಿಂಗಳು, ಒಂಬತ್ತು ತಿಂಗಳು ಹೀಗೆ ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಗಳಾಗಿದ್ದರೂ ಕೂಡ ಸರ್ವೆ ಸಾಮಾನ್ಯವಾಗಿ ಬದಲಾವಣೆ ಮಾಡತಕ್ಕಂಥದ್ದನ್ನು ನಾವು ನೋಡಿದ್ದೇವೆ. ಈ ಹಿನ್ನೆಲೆಯಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಯಾರೇ ಅಧಿಕಾರಿ ಎಷ್ಟೇ ದಕ್ಷತೆ ಬುದ್ಧಿವಂತಿಕೆ ಇದ್ದರೂ ಕೂಡ ತನ್ನ ಕೆಲಸವನ್ನು ಆ ಒಂದು ಸ್ಥಾನದಲ್ಲಿ ಅರ್ಥ ಮಾಡಿಕೊಳ್ಳಲಿಕ್ಕೆ ಸಾಕಷ್ಟು ಕಾಲ ಹಿಡಿಯುತ್ತದೆ ಕೊನೆಪಕ್ಷ ಆ ಇಲಾಖೆ ಒಟ್ಟು ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಒಂದು ವರ್ಷ ಹಿಡಿದರೆ ಆತನನ್ನು ಮಧ್ಯೆ ಬದಲಾವಣೆ ಮಾಡಿದರೆ ಅವರಿಂದ ಕೆಲಸ ಸಾಕಷ್ಟು ಸುಗಮವಾಗಿ ನಡೆಸಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಗಳು ಅವರಿಗೆ ಬಹಳ ಗುರುತರವಾದ ಜವಾಬ್ದಾರಿ ಇರುತ್ತದೆ. ಸುಮಾರು ೧೨-೧೩-೧೪ ಸಂಸ್ಥೆಗಳಿಗೆ ಅವರು ಅಧ್ಯಕ್ಷರಾಗಿ ಕೆಲಸ ಮಾಡಬೇಕಾಗಿದೆ. ಕರ್ನಾಟಕ ಸ್ಮಾಲ್‌ಸ್ಕೇಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅಧ್ಯಕ್ಷರಾಗಿ ಕೆಲಸ ಮಾಡಬೇಕು. ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಅಧ್ಯಕ್ಷರಾಗಿ ಕೆಲಸ ಮಾಡಬೇಕು. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಅಧ್ಯಕ್ಷರಾಗಿ ಕೆಲಸ ಮಾಡಬೇಕು. ಎಸ್.ಜಿ.ಇ.ಎಫ್ ಅಧ್ಯಕ್ಷರಾಗಿ ಕೆಲಸ ಮಾಡಬೇಕು, ಮೈಸೂರು ಲ್ಯಾಂಪ್ಸ್ ವರ್ಕ್ಸ್ ಅಧ್ಯಕ್ಷರಾಗಿ ಕೆಲಸ ಮಾಡಬೇಕು, ಕರ್ನಾಟಕ ಇಂಡಸ್ಟ್ರಿಯಲ್ ಡೆವಲಪ್ ಬೋರ್ಡ್ ಅಧ್ಯಕ್ಷರಾಗಿ ಕೆಲಸ ಮಾಡಬೇಕು. ಹೀಗೆ ಹಲವಾರು ಸಂಸ್ಥೆಗಳ ಅಧ್ಯಕ್ಷರಾಗಿ ಕೆಲಸ ಮಾಡಬೇಕಾಗಿದೆ. ಹಲವಾರು ಸಂಸ್ಥೆಗಳ ಡೈರೆಕ್ಟರಾಗಿ ಕೆಲಸ ಮಾಡಬೇಕಾಗಿದೆ, ಈ ಎಲ್ಲ ಕೆಲಸಗಳನ್ನು ಒಬ್ಬ ವ್ಯಕ್ತಿಯ ಮೇಲೆ ಹೊರಿಸತಕ್ಕಂಥ ಸನ್ನಿವೇಶದ ಹಿನ್ನೆಲೆಯಲ್ಲಿ ಕೈಗಾರಿಕಾ ಇಲಾಖೆಯ ಬೆಳವಣಿಗೆಗೆ ಎಷ್ಟು ಕಾಲವನ್ನು ವಿನಿಯೋಗ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲವೆಂದರೆ ಇದು ಒಂದು ದುರ್ದೈವದ ಸಂಗತಿ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಕಳೆದಸಾರಿ ಈ ಸದನದಲ್ಲಿ ಚರ್ಚೆ ಮಾಡಿದ್ದೇನೆ ಸದನದಲ್ಲಿ ಮಾಡತಕ್ಕಂಥ ಚರ್ಚೆ ಕೇವಲ ಆರೋಪ ಪ್ರತ್ಯಾರೋಪ ಮಾಡತಕ್ಕಂಥದ್ದು ಸದ್ಯಕ್ಕೆ ಸಾಧ್ಯವಿಲ್ಲ. ಆದರೆ ಸದನದಲ್ಲಿ ಆಗತಕ್ಕಂಥ ಚರ್ಚೆಯ ಮೇಲೆ ಸರ್ಕಾರ ಕೆಲವೊಂದು ನಿರ್ಣಯಗಳನ್ನು ತೆಗೆದುಕೊಳ್ಳದೆ ಹೋದರೆ ಸದನದ ಔಚಿತ್ಯದ ಪ್ರಶ್ನೆಯನ್ನು ಮಾಡಬೇಕಾಗುತ್ತದೆ. ನಾವು ಮೊನ್ನೆ ಬಿ.ಎ.ಡಿ. ವಿಷಯದ ಬಗ್ಗೆ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಹಲವಾರು ಪ್ರಮುಖವಾದ ವಿಷಯಗಳನ್ನು ಸರ್ಕಾರಕ್ಕೆ ಸೂಚನೆ ಕೊಡತಕ್ಕಂಥ ರೀತಿಯಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಡಿ.ಪಿ.ಎ.ಆರ್. ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡತಕ್ಕ ಸಂದರ್ಭದಲ್ಲಿ ಹಲವಾರು ಸೂಚನೆಗಳನ್ನು ಕೊಟ್ಟು ಚರ್ಚೆ ಮಾಡಿದ್ದಾರೆ. ಮುಖ್ಯ ಮಂತ್ರಿಗಳು ೨ ಗಂಟೆಗಳ ಕಾಲ ಉತ್ತರ ಕೊಡತಕ್ಕ

ಸಂದರ್ಭದಲ್ಲಿ ನಾನು ಪೂರ್ವಾರ್ಧದಲ್ಲಿದ್ದ ಕೊನೆಯ ವೇಳೆಯಲ್ಲಿ ಈ ಸಭೆಯನ್ನು ೭-೩೫ ನಿಮಿಷಕ್ಕೆ ಬಿಟ್ಟೆ. ಸರ್ಕಾರ ಅಭಿಪ್ರಾಯ ವ್ಯಕ್ತಪಡಿಸುವುದರಲ್ಲಿ ಚರ್ಚೆ ಮಾಡಿರತಕ್ಕ ವಿಷಯಗಳಿಗೆ ಉತ್ತರ ಕೊಡಲಿಕ್ಕೆ ಸಾಧ್ಯವಾಗಿಲ್ಲ. ಸದನದಲ್ಲಿ ನಡೆಯುತಕ್ಕ ಚರ್ಚೆಗೆ ಸರಿಯಾದ ರೀತಿಯಲ್ಲಿ ಸರ್ಕಾರ ಉತ್ತರ ಕೊಡಬೇಕು. ಸದನದ ಚರ್ಚೆಯ ಔಚಿತ್ಯವನ್ನು ಪ್ರಶ್ನೆ ಮಾಡಲಿಕ್ಕೆ ಇಷ್ಟಪಡುತ್ತೇನೆ. ಜೊತೆಗೆ ವಿರೋಧಪಕ್ಷದವರು ಹೇಳುವ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಇಲ್ಲಿ ಯಾವ ವಿಷಯಗಳನ್ನು ತೆಗೆದುಕೊಳ್ಳಬೇಕು? ಒಂದು ವೇಳೆ ಅದರ ಬಗ್ಗೆ ಚರ್ಚೆ ಇದ್ದರೆ ಮಾತ್ರ. ನಮ್ಮ ಸರ್ಕಾರದ ಕಾರ್ಯದರ್ಶಿಗಳಿಗೆ ಇರತಕ್ಕ ಹೊಣೆಗಾರಿಕೆಯ ಬಗ್ಗೆ ಹೇಳಬೇಕಾಗುತ್ತದೆ. ಅವರು ಅಧ್ಯಯನ ಮಾಡಲು ಅನೇಕ ಹೊರದೇಶಗಳಿಗೆ ಹೋಗಬೇಕಾಗುತ್ತದೆ. ಕಾರ್ಯದರ್ಶಿಗಳಾಗಲಿ ಡೈರೆಕ್ಟರುಗಳಾಗಲಿ ಕೈಗಾರಿಕೆಗಳ ಬೆಳವಣಿಗೆಯ ದೃಷ್ಟಿಯಿಂದ ಬೇರೆ ಬೇರೆ ದೇಶಗಳಲ್ಲಿ ಕೈಗಾರಿಕೆಗಳ ಬೆಳವಣಿಗೆ ಯಾವ ಪ್ರಮಾಣದಲ್ಲಿ ಇವೆ, ಬೇರೆ ಬೇರೆ ದೇಶಗಳಿಂದ ಏನು ನೆರವು ಪಡೆದುಕೊಳ್ಳಬಹುದು ಎನ್ನುವುದರ ಬಗ್ಗೆ ಹಲವಾರು ಕಡೆ ಪ್ರವಾಸ ಮಾಡಬೇಕಾಗುತ್ತದೆ. ಇಲಾಖೆಯ ಮುಖ್ಯಸ್ಥರು ಯಾರು ಇದ್ದಾರೆ ಇದನ್ನೆಲ್ಲಾ ನೋಡಿಕೊಳ್ಳಬೇಕಾಗಿರುತ್ತದೆ. ದುರ್ದೈವದ ಸಂಗತಿ ಕೆಲವು ನಿಗಮಗಳಿಗೆ ಖಾಸಗೀ ಅಧ್ಯಕ್ಷರುಗಳನ್ನು ಈ ಸರ್ಕಾರ ಬಂದಮೇಲೆ ತೆಗೆದರು. ಒಂದು ದೃಷ್ಟಿ ಕೋನವನ್ನು ಇಟ್ಟುಕೊಂಡು ನಾನು ಕೂಡ ಆರೋಪ ಮಾಡಿದ್ದೇನೆ. ಕೇವಲ ರಾಜಕೀಯಕ್ಕೋಸ್ಕರ ಹಲವಾರು ಕಾರ್ಪೊರೇಷನ್‌ಗಳನ್ನು ರಚನೆ ಮಾಡಿಕೊಂಡು ತಮ್ಮ ರಾಜಕೀಯ ಭದ್ರತೆಯನ್ನು ಇಟ್ಟುಕೊಳ್ಳಲು ಈ ಸಂಸ್ಥೆಗಳಿಗೆ ಖಾಸಗೀ ಅಧ್ಯಕ್ಷರುಗಳನ್ನು ಇಟ್ಟಿದ್ದೀರಿ ಎಂದು ಆರೋಪ ಮಾಡಿದ್ದೇನೆ. ಅದರ ಹಿನ್ನೆಲೆಯಲ್ಲಿ ಇವತ್ತು ಹೇಳಬೇಕಾಗುತ್ತದೆ, ಕೆಲವು ಪ್ರಮುಖವಾದ ಸಂಸ್ಥೆಗಳ ಬಗ್ಗೆ ನಾನು ಹೇಳಿಲ್ಲ. ನೀವು ಬಂದಮೇಲೆ ೩೨-೩೪ ಕಾರ್ಪೊರೇಷನ್‌ಗಳನ್ನು ರದ್ದು ಮಾಡಿರುವ ಬಗ್ಗೆ ಸ್ಪಷ್ಟೀಕರಣ ಮಾಡಲಿಕ್ಕೆ ಇಷ್ಟಪಡುತ್ತೇನೆ. ಖಾಸಗೀ ಅಧ್ಯಕ್ಷರುಗಳಿಗೆ ತಾಂತ್ರಿಕ ಅನುಭವವಿರುವುದಿಲ್ಲ, ಕೆಲವೊಂದು ಪ್ರಮುಖ ಸಂಸ್ಥೆಗಳಿಗೆ ಅನುಭವ ಇರತಕ್ಕವರನ್ನು ಹಾಕಬೇಕು ಎನ್ನುವುದನ್ನು ಸರ್ಕಾರ ತಿಳಿಸಿತು. ಈ ಕೆಲಸವನ್ನು ಮಾಡಲು ಕೇವಲ ಅಧಿಕಾರಿಗಳಿಂದಲೇ ಸಾಧ್ಯವೆಂದು ಹೇಳಿದರೆ ಕೈಗಾರಿಕೆಗಳ ಬೆಳವಣಿಗೆ ಕುಂಠಿತವಾಗುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟ್ ಕೇಡರ್ ತಯಾರುಮಾಡಿ, ನಾನು ವಿರೋಧಪಕ್ಷದ ನಾಯಕನಾಗಿ ಇದೇ ಮಾತನ್ನು ಹೇಳಿದ್ದೇನೆ. ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದೇನೆ. ಇಂತಹ ಒಂದು ಪ್ರತ್ಯೇಕವಾದ ಕಾನೂನನ್ನು ನಿರ್ಣಯವನ್ನು ನಿರ್ಮಾಣ ಮಾಡುವುದಕ್ಕೆ ವಿಫಲರಾಗಿದ್ದೀರಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಡೈರೆಕ್ಟರ್ ಜನರಲ್, ಒಬ್ಬರು ಹಿರಿಯ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ಮುಖ್ಯ ಕಾರ್ಯದರ್ಶಿಗಳು ಇದ್ದಾರೆ, ನಾಲ್ಕೈದು ಜನ ಹಿರಿಯ ಅಧಿಕಾರಿಗಳು ಇವರುಗಳೆಲ್ಲಾ ಒಂದು ಕಡೆ ಕುಳಿತುಕೊಳ್ಳಬೇಕು. ರಾಜ್ಯ ಸರ್ಕಾರದ ಅಡಿಯಲ್ಲಿರತಕ್ಕ ಕೈಗಾರಿಕಾ ಸಂಸ್ಥೆಗಳಿಗೆ ಯಾರ್ಯಾರನ್ನು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕ ಮಾಡಬೇಕು ಯಾರ್ಯಾರನ್ನು ಪ್ರಮುಖ ಸಂಸ್ಥೆಗಳಿಗೆ ಹಾಕಬೇಕು ಇಂತಹ ಪ್ರಮುಖ ನಿರ್ಣಯವನ್ನು ತೆಗೆದುಕೊಳ್ಳಲಿಕ್ಕೆ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಇದರ ಅಧ್ಯಕ್ಷರಾಗಿ ಒಬ್ಬ ಹಿರಿಯ ಅಧಿಕಾರಿಗಳನ್ನು ನೇಮಿಸಿದಾರೆ. ಈ ಅಧಿಕಾರಿ ರೆವಿನ್ಯೂ ಕಮೀಷನರ ಆಗಿ ಕೆಲಸ ಮಾಡುತ್ತಿದ್ದಾರೆ. ರೆವಿನ್ಯೂ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿರತಕ್ಕವರು ಈ ಕೆಲಸ ಮಾಡಲು ಪ್ರಯತ್ನ ಮಾಡುವುದಕ್ಕೆ ಸಾಧ್ಯವಾಗುತ್ತದೆಯೆ? ಇವರಿಗೆ ಹಲವಾರು ಸಂಸ್ಥೆಗಳ ಮತ್ತು ಕೈಗಾರಿಕೆ ಸಂಸ್ಥೆಗಳ ಬಗ್ಗೆ ಸಾಕಷ್ಟು ಅನುಭವ ಮತ್ತು ನಿರ್ಣಯ ಮಾಡಲಿಕ್ಕೆ ಅವರಲ್ಲಿ ಮಾಹಿತಿ ಇದೆಯೆ? ಈಗಾಗಲೇ ಅವರು ನಾಲ್ಕಾರು ಸಂಸ್ಥೆಗಳ ಅಧ್ಯಕ್ಷರುಗಳಾಗಿ ಡೈರೆಕ್ಟರುಗಳಾಗಿ ಕೆಲಸ ಮಾಡುತ್ತಿದ್ದಾರೆ. ಅವರು ರೆವಿನ್ಯೂ ಇಲಾಖೆಯಲ್ಲಿಯೇ ಹೆಚ್ಚು ಕಾಲವನ್ನು ತೊಡಗಿಸಬೇಕಾಗಿದೆ ಅವರು ಮಾಡಿದ್ದನ್ನು ಸರ್ಕಾರ ಒಳಿತು ಎಂದು ಒಪ್ಪಿಕೊಳ್ಳುವುದಾದರೆ, ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟ್ ಕೇಡರ್ ಮಾಡುವಲ್ಲಿ ಒಂದು ತಪ್ಪು ಕಲ್ಪನೆ ಇದೆ. ಕೈಗಾರಿಕಾ ಸಂಸ್ಥೆಗಳಿಗೆ ಮೇಲ್ವಿಚಾರಣೆಗಾಗಿ ಕೇವಲ ಐ.ಎ.ಎಸ್. ಅಧಿಕಾರಿಗಳನ್ನು ಹಾಕುವುದರಿಂದ ಮಾತ್ರ ದಕ್ಷತೆ ಪ್ರಾಮಾಣಿಕತೆ ಮತ್ತು ಸಂಸ್ಥೆಯ ಉತ್ಪಾದನೆ, ಅವರುಗಳನ್ನು ಹಾಕುವುದರಿಂದ ಕೈಗಾರಿಕೆಗಳನ್ನು ಸರಿದೂಗಿಸಬೇಕು ಎಂದು ತಪ್ಪು ಕಲ್ಪನೆ ಇದ್ದರೆ, ನಿಮ್ಮ ರಾಜಕೀಯ ಸರ್ಕಾರದಲ್ಲಿ ಈ ಭಾವನೆ ಇದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಬಹುಶಃ ಕಹಿ ಅನುಭವದಿಂದ ಈ ಮಾತನ್ನು ಹೇಳಬೇಕಾಗಿದೆ, ಈ ಒಂದು ಪದ್ಧತಿಯನ್ನು ನಿಮ್ಮ ಮನಸ್ಸಿನಿಂದ ದೂರ ಇಡಿ. ಹಲವಾರು ಟೆಕ್ನೊಕ್ರಟ್ಸ್ ಇಂಜಿನೀ

ಯರ್ಸ್‌ಗಳು ಇದ್ದಾರೆ. ಅಟ್ಟಿಟ್ಯೂಡ್ ಇರತಕ್ಕ ಐ.ಎ.ಎಸ್. ಅಧಿಕಾರಿಗಳಿರಬಹುದು ಅಂತಹ ಕೈಗಾರಿಕಾ ಸಂಸ್ಥೆಗಳಿಗೆ ಅಧ್ಯಕ್ಷರನ್ನಾಗಿ ಮಾಡತಕ್ಕಂತಹ ಪೂರ್ವ ಹಿನ್ನೆಲೆಯುಳ್ಳ ಪ್ರಾವೀಣ್ಯತೆಯು ಇದು ಅಲ್ಲಿ ಕೆಲಸ ಮಾಡಬೇಕಾಗುತ್ತದೆ. ನಮ್ಮಲ್ಲಿ ಟೆಕ್ನೋಕ್ರಟ್ಸ್, ಇಂಜಿನೀಯರ್ಸ್‌ಗಳು ತಾಂತ್ರಿಕ ಪರಿಣತರು ಇದ್ದಾರೆ. ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟ್ ಕೇಡರ್ ಮಾಡತಕ್ಕ ಒಂದು ಫಲಪ್ರದ ಕಾರ್ಯವನ್ನು ನಿರ್ವಹಣೆ ಮಾಡುವುದಾದರೆ ರಚನೆ ಮಾಡುವುದಾದರೆ ಅವರುಗಳಿಂದ ಇಲಾಖೆಗೆ ಬೆಳವಣಿಗೆಗೆ ಸಾಕಷ್ಟು ಒಳ್ಳೆಯದು ಆಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ತಮಗೆ ಸೂಚನೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ನಾನು ಮೊದಲೇ ಹೇಳಿದ್ದೇನೆ ನಮ್ಮ ರಾಜ್ಯದ ಕೈಗಾರಿಕೆ ದೃಷ್ಟಿಯಿಂದ ಇಲಾಖೆಯನ್ನು ಪುನರ್ ರಚನೆ ಮಾಡಬೇಕಾಗಿದೆ. ಸಹಕಾರ ಇಲಾಖೆಯಲ್ಲಿ ನಾಲ್ಕೈದು ಜನ ಆಡಿಶನಲ್ ರಿಜಿಸ್ಟ್ರಾರ್‌ಗಳನ್ನು ನೋಡುತ್ತಿದ್ದೇವೆ. ಅದೇ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನಲ್ಲಿ ನಾಲ್ಕೈದು ಜನ ವಿವಿಧ ಅಡಿಶನಲ್ ಡೈರೆಕ್ಟರ್‌ಗಳನ್ನು ನೋಡುತ್ತಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲೂ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್ ಎಂದು ಮಾಡಬೇಕು. ರಾಜಧಾನಿಯಲ್ಲಿ ಒಬ್ಬ ಜಾಯಿಂಟ್ ಡೈರೆಕ್ಟರ್ ಕುಳಿತುಕೊಂಡು ನಾಲ್ಕೈದು ಜಿಲ್ಲೆಗಳ ಮೇಲ್ವಿಚಾರಣೆ ನೋಡಿಕೊಳ್ಳಬೇಕಾಗಿದೆ. ಈ ರೀತಿ ಆದರೆ ಎಷ್ಟರ ಮಟ್ಟಿಗೆ ಅವರು ಎಲ್ಲವನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಕೆಲವು ಹುದ್ದೆಗಳನ್ನು ಕ್ರಿಯೇಟ್ ಮಾಡಬೇಕಾಗುತ್ತದೆ. ಕನಿಷ್ಟ ಪಕ್ಷ ಎರಡು ಅಡಿಶನಲ್ ಡೈರೆಕ್ಟರ್‌ಗಳನ್ನು ಕ್ರಿಯೇಟ್ ಮಾಡಬೇಕು. ಅಡಿಶನಲ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇನ್ನೊಂದು ಅಡಿಶನಲ್ ಡೈರೆಕ್ಟರ್ ಆಫ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಅಥವಾ ಸ್ಮಾಲ್ ಸ್ಕೇಲ್ ಇಂಡಸ್ಟ್ರಿ, ಇದು ಅವಶ್ಯಕ ಎನ್ನತಕ್ಕದ್ದನ್ನು ನಾನು ತಮಗೆ ಸೂಚನೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ನಾನು ಪೂರ್ವದಲ್ಲಿಯೇ ಹೇಳಿದ್ದೇನೆ ಕರ್ನಾಟಕ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಯ ದೃಷ್ಟಿಯಿಂದ, ರಾಷ್ಟ್ರದ ದೃಷ್ಟಿಯಿಂದ ನೋಡುವುದಾದರೆ, ವಿವಿಧ ರಾಜ್ಯಗಳ ಬೆಳವಣಿಗೆ ದೃಷ್ಟಿಯಿಂದ ನಾವು ನೋಡುವುದಾದರೆ ನಾವು ಇಂಡಸ್ಟ್ರಿ ಬೆಳವಣಿಗೆಯಲ್ಲಿ ೭ನೇ ಸ್ಥಾನದಲ್ಲಿದ್ದೇವೆ. ನಾನು ಮೊದಲೇ ತಿಳಿಸಿದಹಾಗೆ ನಮ್ಮಲ್ಲಿ ಸಾಕಷ್ಟು ಕೈಗಾರಿಕಾ ಬೆಳವಣಿಗೆಗೆ ಆಸಕ್ತಿಯನ್ನು ವಹಿಸಿಲ್ಲ. ಹಲವಾರು ಕಾರಣಗಳಿಂದ ಸಾಬೀತು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ರಾಜ್ಯದ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನನ್ನು ರಾಜ್ಯ ಸರ್ಕಾರದ ಬಂಡವಾಳವನ್ನು ಹಾಕಿ ನಾವು ಆ ಸಂಸ್ಥೆಯನ್ನು ಮಾಡಿದ್ದೇವೆ. ಅದು ಇವತ್ತು ರಾಜ್ಯದ ಕೈಗಾರಿಕಾ ಬೆಳವಣಿಗೆಯಲ್ಲಿ ಎಷ್ಟರಮಟ್ಟಿಗೆ ಫಲಕಾರಿಯಾಗಿದೆ ಎಂಬುದನ್ನು ಬೇರೆ ರಾಜ್ಯಗಳಿಗೆ ಹೋಲಿಸಿ ನೋಡುವುದಾದರೆ ನಾವು ತುಂಬಾ ಹಿಂದೆ ಬಿದ್ದಿದ್ದೇವೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಕರ್ನಾಟಕ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಅಧ್ಯಕ್ಷರು ಇಲ್ಲ. ನಮ್ಮ ಕಾರ್ಯದರ್ಶಿಗಳು ಹೋಗಿ ಸಾಕಷ್ಟು ಕಾಲವನ್ನು ವಿನಿಯೋಗ ಮಾಡಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ, ಇದನ್ನು ಸರ್ಕಾರ ಅರ್ಥಮಾಡಿಕೊಳ್ಳುವುದು ಸೂಕ್ತವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

೪-೦೦ ಪಿ.ಎಂ.

ಇವೊತ್ತು ನಾವು ಐ. ಡಿ. ಬಿ. ಐ. ನಿಂದ ಹಾಗೂ ಐ. ಎಫ್. ಸಿ. ಐ. ನಿಂದ ಎಷ್ಟು ಸಹಾಯ ಪಡೆದಿದ್ದೇವೆ ಮತ್ತು ಎಷ್ಟು ಸಮರ್ಥರಾಗಿದ್ದೇವೆಂಬುದನ್ನು ಸಹ ನೋಡಬೇಕಾಗುತ್ತದೆ. ಇದರ ಜೊತೆಗೆ ಫೈನಾನ್ಸ್ ಕಾರ್ಪೊರೇಷನ್ ಮೂಲಕ ಎಷ್ಟು ಹಣವನ್ನು ಈ ರಾಜ್ಯದಲ್ಲಿ ಕೈಗಾರಿಕೆಗಳ ಒಂದು ಬೆಳವಣಿಗೆಗೆ ತೊಡಗಿಸಲು ಹೊರಟಿದ್ದೇವೆಂಬುದನ್ನು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದಾಗ ನಾವು ಹಿಂದೆ ಬಿದ್ದಿದ್ದೇವೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಫೈನಾನ್ಸ್ ಕಾರ್ಪೊರೇಷನ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಮುದ್ದಪ್ಪನವರು ಈ ಒಂದು ಸ್ಥಾನಕ್ಕೆ ಹೋದಮೇಲೆ ಉತ್ತಮವಾದಂಥ ಸೇವೆ ಸಲ್ಲಿಸಿದ್ದಾರೆಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಇವರ ಕಾಲದಲ್ಲಿ ೯ ರೀಜನಲ್ ಬ್ರಾಂಚ್ ಆಫೀಸ್‌ಗಳನ್ನು ತೆಗೆದಿದ್ದಾರೆ. ಸಾಕಷ್ಟು ಅಧಿಕಾರ ವಿಕೇಂದ್ರೀಕರಣ ಮಾಡಿ ರೀಜನಲ್ ಬ್ರಾಂಚ್ ಕಚೇರಿಗಳಿಗೆ ಸಾಕಷ್ಟು ಅಧಿಕಾರವನ್ನು ಹಾಗೂ ಫೈನಾನ್ಸಿಯಲ್ ಪವರ್‌ನ್ನು ಕೊಟ್ಟು ಇವುಗಳ ಒಂದು ವ್ಯಾಪ್ತಿಯಲ್ಲಿ ಹಣಕಾಸಿನ ನೆರವು ಒದಗಿಸುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ತಮ್ಮದೇ ಆದಂಥ ಟೈಮ್ಸ್ ಆಫ್ ಡೆಕ್ಕನ್ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಬಂದಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದು ನಮ್ಮದಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ತಪ್ಪಾಗಿದ್ದರೆ ತಿದ್ದಿಕೊಳ್ಳೋಣ. ಶ್ರೀ ನರಸಿಂಹನ್ ಎಂಬುವರು ಈ ಪತ್ರಿಕೆಯಲ್ಲಿ ಕೆ.ಎಸ್.ಎಫ್.ಸಿ. ನಿಂದ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಸಾಕಷ್ಟು ಹಣದ ಸಹಾಯ ಅತಿ ಶೀಘ್ರಗತಿಯಿಂದ ಸಿಗುತ್ತಿದೆ ಎಂದು ಈ ಪತ್ರಿಕೆಯಲ್ಲಿ ಹೇಳಿದ್ದಾರೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕೈಕೊಂಡ ಒಂದು ನಿರ್ಣಯದ ಪ್ರಕಾರ ವಿಧಾನಸೌಧದಲ್ಲಿ ಕೆಲಸ ಮಾಡುತ್ತಿದ್ದ ದೊಡ್ಡ ದೊಡ್ಡ ಅಧಿಕಾರಿಗಳನ್ನು ಬದಲಾವಣೆ ಮಾಡಿದ ಮೇಲೆ ಮತ್ತು ಇವರನ್ನು ಅಲ್ಲಿಗೆ ನೇಮಕ ಮಾಡಿದ ಮೇಲೆ ಅಲ್ಲಿ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಅಲ್ಲಿ ಆಗಿರುವಂತಹ ಬೆಳವಣಿಗೆ ದೃಷ್ಟಿಯಿಂದ ಮತ್ತು ಹಿಂದಿನ ವರ್ಷಗಳಿಗೆ ಇದನ್ನು ಹೋಲಿಸಿದಾಗ ಇತ್ತೀಚೆಗೆ ಸಾಕಷ್ಟು ಬೆಳವಣಿಗೆ ಆಗಿದೆ ಎಂಬುದನ್ನು ಒಪ್ಪಿಕೊಂಡರೂ ಸಹ ಬೇರೆ ರಾಜ್ಯಗಳಲ್ಲಿ ಆಗಿರುವಂತಹ ಒಂದು ಬೆಳವಣಿಗೆಯನ್ನು ಹಿನ್ನೆಲೆಯನ್ನಾಗಿಟ್ಟುಕೊಂಡು ನೋಡಿದಾಗ ಮಾತ್ರ ನಾವು ಇನ್ನೂ ಬಹಳ ದೂರ ಹೋಗಬೇಕಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಇದೇ ಸಂದರ್ಭದಲ್ಲಿ ನಾನು ಕೆಲವು ರಾಜ್ಯಗಳ ಅಂಕಿ ಅಂಶಗಳನ್ನು ಕೊಡ ಬಯಸುತ್ತೇನೆ.—

ಫೈನಾನ್ಸ್ ಕಾರ್ಪೊರೇಷನ್	ಮಂಜೂರಾದ ಹಣ	ಕೇಸ್‌ಗಳ ಸಂಖ್ಯೆ	ಹಂಚಿಕೆ ಮಾಡಿರುವ ಹಣ	ವಸೂಲಾದ ಹಣ
ಕರ್ನಾಟಕ ೧೯೮೧-೮೨ ರಲ್ಲಿ	೩೨.೯೯	೧೨೯೨	೨೧.೬೪	೧೨.೯
ಆಂಧ್ರ ಡಿಟ್ಟೋ	೬೧.೮೬	—	೩೭.೪೧	—
ಗುಜರಾತ್ ಡಿಟ್ಟೋ	೫೯.೧೦	—	೩೩.೫	—
ಉತ್ತರ ಪ್ರದೇಶ ಡಿಟ್ಟೋ	೫೨.೪೨	—	೩೧.೬೨	—
ತಮಿಳುನಾಡು ಡಿಟ್ಟೋ	೫೨.೦೦	—	೩೪.೦೦	—

ಈ ಒಂದು ದೃಷ್ಟಿಕೋನದಿಂದ ನೋಡುವುದಾದರೆ ನಾವು ೯ನೇ ಸ್ಥಾನದಲ್ಲಿದ್ದೇವೆಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂಬ ವಿಷಯವನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇರೀತಿ ಐ.ಡಿ.ಬಿ.ಐ.ನಿಂದ ಬೇರೆ ಬೇರೆ ರಾಜ್ಯಗಳು ಆರ್ಥಿಕ ನೆರವು ಪಡೆದಿರುವುದನ್ನು ೧೯೬೪ ರಿಂದ ೧೯೮೨ ರವರೆಗೆ ಹೇಳಲು ಸಮಯವಿಲ್ಲವಾದ ಕಾರಣ ೧೯೮೧-೮೨ರ ಅಂಕಿ ಅಂಶಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ.—

State	Amount sanctioned (Rs. in Lakhs)	Amount disbursed (Rs. in Lakhs)
Gujarat	15,893	12,563
Karnataka	6,499	5,200
Madhya Pradesh	20,371	12,326
Tamilnadu	10,299	9,261

ಈ ಒಂದು ದೃಷ್ಟಿಕೋನದಿಂದ ನೋಡುವುದಾದರೆ ನಮ್ಮ ಕರ್ನಾಟಕ ೬ನೇ ಸ್ಥಾನದಲ್ಲಿದ್ದೇನೆಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೈಗಾರಿಕಾ ಬೆಳವಣಿಗೆಗೆ ಆರ್ಥಿಕ ನೆರವು ಪಡೆಯುವುದರಲ್ಲಿ ನಾವು ರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ರೀತಿಯಲ್ಲಿ ಯಶಸ್ವಿಯಾಗಿಲ್ಲವೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್ ವರದಿ ಪ್ರಕಾರ ನಾವು ತೆಗೆದುಕೊಂಡಿರುವ ಆರ್ಥಿಕ ನೆರವು ೧೦೭.೧೮ ಕೋಟಿಯಾದರೆ ಮಹಾರಾಷ್ಟ್ರ ೨೫೯.೬೫ ಕೋಟಿ ರೂ. ಗಳನ್ನು. ಉತ್ತರ ಪ್ರದೇಶ ೧೩೭.೩೭ ಕೋಟಿ ರೂ ಗಳನ್ನು, ತಮಿಳುನಾಡು ೧೨೮.೯೮ ಕೋಟಿ ರೂ. ಗಳನ್ನು ಪಡೆದಿವೆ. ನಮ್ಮ ರಾಜ್ಯದ ಒಂದು ಕೈಗಾರಿಕಾ ಬೆಳವಣಿಗೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಹೋಲಿಕೆ ಮಾಡಿ ನೋಡಿದಾಗ ಈ ಅಂಕಿ ಅಂಶಗಳ ಪ್ರಕಾರ ೭ನೇ ಸ್ಥಾನದಲ್ಲಿದ್ದೇವೆ. ಈ ಒಂದು ಹಿನ್ನೆಲೆಯಲ್ಲಿ ನಾವು ಇನ್ನೂ ಸಾಕಷ್ಟು

ದೂರ ಶ್ರಮಿಸಬೇಕಾಗುತ್ತದೆ. ಈ ರಾಜ್ಯದ ಕೈಗಾರಿಕಾ ಬೆಳವಣಿಗೆ ದೃಷ್ಟಿಯಿಂದ ಕೆಲಸ ಮಾಡಬೇಕಾದರೆ ನಾವು ತುಂಬಾ ಶ್ರಮಪಡಬೇಕಾಗುತ್ತದೆಂದು ಸರ್ಕಾರಕ್ಕೆ ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಆಂಧ್ರದಲ್ಲಿ ಈ ದಿಶೆಯಲ್ಲಿ ತುಂಬಾ ಕೆಲಸ ಮಾಡಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹಿಂದಿನ ವರ್ಷಗಳಿಗಿಂತ ಹೆಚ್ಚು ಸಾಧನೆ ಮಾಡಿದ್ದೇವೆಂದು ವಾದ ಮಂಡನೆ ಮಾಡುವುದಕ್ಕೆ ಬದಲು ಬೇರೆ ರಾಜ್ಯಗಳಿಗೆ ಸಹ ಹೋಲಿಸಿ ನೋಡುವುದು ಒಳ್ಳೆಯದು. ತಮ್ಮ ಒಂದು ವಿಫಲತೆಯನ್ನು ಮುಚ್ಚಿಕೊಳ್ಳುವುದಕ್ಕೆ ಬದಲು ನೆರೆ ರಾಜ್ಯಗಳಿಗಿಂತ ನಾವು ಇನ್ನೂ ಸಾಧಿಸಬೇಕಾಗಿದೆ ಎಂಬುದನ್ನು ಅರ್ಥ ಮಾಡಿಕೊಂಡರೆ ಒಳ್ಳೆಯದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಂಧ್ರದಲ್ಲಿ ಮೇಜರ್ ಮತ್ತು ಮೀಡಿಯಂ ಕೈಗಾರಿಕೆಗಳನ್ನು ವಾರಕ್ಕೆ ಒಂದರಂತೆ ಸ್ಥಾಪನೆ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆಂಬುದಕ್ಕೆ ಅವರೇ ಹೊರಡಿಸಿರುವಂತಹ ಪತ್ರಿಕೆಯನ್ನು ತಾವು ನೋಡಬೇಕು. ನಮ್ಮ ರಾಜ್ಯದಲ್ಲಿ ಇಂತಹ ಹೇಳಿಕೊಳ್ಳುವಂತಹ ರೀತಿಯಲ್ಲಿ ಸಾಧನೆ ಆಗಿಲ್ಲವೆಂಬುದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಇಲ್ಲಿ ಅವರು ೧೯೮೧-೮೨ಕ್ಕೆ ಸಂಬಂಧಪಟ್ಟಂತೆ ಒಂದು ಮಾತನ್ನು ಹೇಳಿದ್ದಾರೆ.

"During the year under review the Corporation has promoted as many as 70 medium and large scale industries in different parts of the State generating industrial investment of the order of 2,200 lakhs with employment opportunity to about 16,538 persons". ನಮ್ಮ ರಾಜ್ಯದಲ್ಲಿ ಎಷ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದೀರಿ ಮತ್ತು ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದೀರಿ ಎಂಬುದರ ಬಗ್ಗೆ ನಾನು ಮುಂದೆ ಹೇಳುತ್ತೇನೆ. joint ventures concept ನಲ್ಲಿ Karnataka Industrial Investment Development Corporation ಏನೇನು ಮಾಡಿದೆ ಎಂಬುದರ ಬಗ್ಗೆ ಪೂರ್ಣ ವಿವರಗಳನ್ನು ಕಳೆದ ಸಲ ನಾನು ಈ ಸಭೆಯ ಮುಂದಿಟ್ಟಿದ್ದೇನೆ.

Andhra Pradesh Industrial Development Corporation is a single organisation in the whole country which has promoted as many as 106 joint ventures so far. ತಾವು ಉತ್ತರ ಕೊಡತಕ್ಕಂಥಾ ಕಾಲದಲ್ಲಿ ಇದರ ಬಗ್ಗೆ ಏನು ಮಾಡಿದ್ದೀರಿ ಅನ್ನುವುದನ್ನು ತಿಳಿಸಬೇಕು. ಈವೊತ್ತಿನ ದಿವಸ ರಾಜ್ಯದ ಕೈಗಾರಿಕೆಯ ಬೆಳವಣಿಗೆಗೆ ನೋಡಿದರೆ ಸಾಕಷ್ಟು ಹಿಂದೆ ಬಿದ್ದಿವೆ ಎನ್ನತಕ್ಕಂಥಾ ತಾವು ಅರ್ಥಮಾಡಿಕೊಂಡರೆ ಒಳ್ಳೆಯದು. ಅದಕ್ಕಾಗಿ ಕೆಲವು ವಿವರಗಳನ್ನು ನಾನು ಈ ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಕಳೆದ ಸಾರಿ ಈ ಸದನದಲ್ಲಿ ಈ ಕೈಗಾರಿಕೆಗಳ ಬೆಳವಣಿಗೆ ಬಗ್ಗೆ ಹೇಳಿದ್ದೇನೆ. ಅದಕ್ಕೆ ಬೇಕಾದಂಥಾ ಪೂರ್ವ ಸಿದ್ಧತೆಗಳು infrastructure ಈ ಎಲ್ಲ ಅವಶ್ಯಕತೆಗಳನ್ನೂ ನಿವಾರಣೆ ಮಾಡತಕ್ಕಂಥಾ ಕಾಲದಲ್ಲಿ ತಾವು ಎಷ್ಟರಮಟ್ಟಿಗೆ ಈ ಕೈಗಾರಿಕೆಗಳ ಬಗ್ಗೆ ಕೆಲಸ ಮಾಡಬೇಕಾಗಿತ್ತೋ ಅಷ್ಟರಮಟ್ಟಿಗೆ ಕೆಲಸ ಮಾಡಲಿಲ್ಲಾ ಅದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಾನು ಹೀಗೆ ಹೇಳಿದ ಮಾತ್ರಕ್ಕೆ ನನ್ನನ್ನು ಟೀಕೆ ಮಾಡುತ್ತಾರೆಂದು ತಾವು ಅಲ್ಲಗಳೆಯಬಾರದು. ಇರತಕ್ಕಂಥಾ ವಿಷಯಗಳನ್ನು ಹೇಳಿದರೆ ತಾವು ಒಪ್ಪಿಕೊಳ್ಳಲೇಬೇಕು. ಕಳೆದ ಸಾರಿ ತಾವೇ ಹೇಳಿದ್ದೀರಿ. ಸಿಂಗಲ್ ವಿಂಡೋ ಏಜೆನ್ಸಿಯನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದೀರಿ. ತಮಿಳ್‌ನಾಡಿನಲ್ಲಿ ೩೦-೪೦ ಮೈಲಿ ದೂರದಲ್ಲಿ ಈ ಕೈಗಾರಿಕೆಗಳ ಬಗ್ಗೆ ಏನು ಪ್ರಗತಿಯಾಗಿದೆ ಅದರ ಒಂದು ಹಿನ್ನೆಲೆಯಲ್ಲಿ ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಹಾಗೇನೆ ಬಾಂಬೆಯಲ್ಲಿ ಉದ್ಯೋಗ ಮಿತ್ರ ಆರ್ಗನೈಸೇಷನ್ ಒಂದನ್ನು ಸ್ಥಾಪನೆ ಮಾಡಿದ್ದಾರೆ. ನಮ್ಮ ಅರ್ಥಮಂತ್ರಿಗಳು ಇದರಲ್ಲಿ ಬಹಳ ಚಾಣಾಕ್ಷರು ಎಂದು ಹೇಳಿದರೆ ತಪ್ಪಾಗಲಾರದು. ಈಗ್ಗೆ ೮-೧೦ ದಿವಸದ ಹಿಂದೆಯೋ ಅಥವಾ ಒಂದು ತಿಂಗಳ ಹಿಂದೆಯೋ ಸಿಂಗಲ್ ವಿಂಡೋ ಏಜೆನ್ಸಿಯನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅಲ್ಲಿ ಇನ್ನೂ ಯಾವ ಫರ್ನಿಚರ್‌ನ್ನೂ ಹಾಕುವುದಕ್ಕೆ ಸಾಧ್ಯವಿಲ್ಲ ಅಲ್ಲಿ ಒಂದು ಬೋರ್ಡ್ ಬರೆಸುವುದಕ್ಕೆ ಸಾಧ್ಯವಿಲ್ಲಾ. ಒಂದು ವಾರದಿಂದ ಈಚೆಗೆ ಈ ಪ್ರಯತ್ನ ನಡೆಸಿದ್ದಾರೆ. There is not a single window agency to assist enterprenuers to set up industries. Consequently the entrepreneurs have to run from pillar to post for completing each of the formalities that they have to comply with to start an industry. ಸ್ವಾಮಿ ತಮಿಳ್‌ನಾಡಿನಲ್ಲಿ, ಅಥವಾ ಮಹಾರಾಷ್ಟ್ರದಲ್ಲಿ ಅಥವಾ ಆಂಧ್ರದಲ್ಲಿ ಯಾವರೀತಿ ಇದೆ ನೋಡಿ. ಗುಜರಾತ್‌ನಲ್ಲಿ ಅಲ್ಲಿಯ ಕೈಗಾರಿಕಾ

ಬೆಳವಣಿಗೆ ಬಗ್ಗೆ ಹೇಳಿದರೆ ತಾವು ಅದನ್ನು ಮೂದಲಿಸುವುದಕ್ಕೆ ಹೋಗಬೇಡಿ, ತಪ್ಪಾಗಿ ತಿಳಿದುಕೊಳ್ಳಬೇಡಿ ಅಲ್ಲಿ ಅಧಿಕಾರಿಗಳು ಈ ಬಗ್ಗೆ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟು ಯಾವರೀತಿಯಾಗಿ ಕೆಲಸ ಮಾಡುತ್ತಾರೆ, ಇಲ್ಲಿ ನಮ್ಮ ಕರ್ನಾಟಕದಲ್ಲಿರುವ ಅಧಿಕಾರಿಗಳು ಈ ಕೈಗಾರಿಕೆಗಳ ಬೆಳವಣಿಗೆ ಬಗ್ಗೆ ಯಾವ ರೀತಿ ಕೆಲಸ ಮಾಡುತ್ತಾರೆ ಅನ್ನುವುದನ್ನು ನೋಡಿದಾಗ ಇಲ್ಲಿ ಹಾಗಾಗದೇ ಇರುವುದಕ್ಕೆ ಕಾರಣ ಏನು ಈ ಬಗ್ಗೆ ಆಲೋಚಿಸಿದಾಗ ರಾಜ್ಯದಲ್ಲಿರುವ ಅಧಿಕಾರಿಗಳ ಅಸಡ್ಡೆಯೇ ಕಾರಣ ಅನ್ನುವ ಭಾವನೆ ಬರುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ತೀವ್ರ ಗಮನಕೊಟ್ಟರೆ ಒಳ್ಳೆಯದು ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಗುಜರಾತಿನಲ್ಲಿ ಆ ರೀತಿಯಾಗಿ ಕೈಗಾರಿಕೆಗಳು ಬೆಳೆಯುವುದಕ್ಕೆ ಕಾರಣ ಏನು ಅಂದರೆ ಅವರು ಯಾವ ರೀತಿಯಾಗಿ ಸಾಧನೆ ಮಾಡುತ್ತಾರೆ ಎಂದರೆ ಅವರು ಅಲ್ಲಿಯ ಅಧಿಕಾರಿಗಳನ್ನು ಹೊರಗೆ ಕಳುಹಿಸಿ ಅಲ್ಲಿಯ ಕೈಗಾರಿಕಾ ಕಮೀಷನರನ್ನೂ ಮತ್ತು ಇತರೆ ಅಧಿಕಾರಿಗಳನ್ನೂ ಮತ್ತು ಇತರ ಪರಿಣತರನ್ನೂ ಭೇಟಿ ಮಾಡಿ ಅವರು ಮಾರ್ಗದರ್ಶನ ಪಡೆಯುತ್ತಾರೆ. ಆ ತರಹವಾಗಿ ಇಲ್ಲೂ ಆಗಬೇಕು, ತಾವೇನಾದರೂ ಆರೀತಿಯಾಗಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ? ಮೂರು ವರ್ಷದ ಮುಂಚೆ ಈ ವಿಷಯ ಎಲ್ಲ ಪತ್ರಿಕೆಗಳಲ್ಲೂ ಬಂದಿದೆ. ಗುಜರಾತಿನಲ್ಲಿ ಕೈಗಾರಿಕೆಗಳನ್ನು ತೆರೆಯುವುದಕ್ಕೆ ಒಳ್ಳೆಯ ಉತ್ತಮವಾದ ವಾತಾವರಣ ಇರುವುದರಿಂದ ಯಾರ್ಯಾರು ಕೈಗಾರಿಕೆಗಳನ್ನು ಗುಜರಾತ್‌ನಲ್ಲಿ ಓಪನ್ ಮಾಡುವುದಕ್ಕೆ ಬರುತ್ತಾರೋ ಅವರಿಗೆ ಎಲ್ಲ ವಿಧವಾದ ಸವಲತ್ತುಗಳನ್ನೂ ಕೊಡುತ್ತೇವೆ, ಎಂದು ಪತ್ರಿಕೆಗಳಲ್ಲಿ ಬಂದಿದೆ. ಅಲ್ಲಿ ಕೈಗಾರಿಕೆಗಳನ್ನು ತೆರೆಯುವವರು ಅವರು ಯಾರೇ ಆಗಲಿ ಮುಂದೆ ಬಂದರೆ ಸಕಲ ಸೌಲಭ್ಯಗಳನ್ನೂ ಮಾಡಿಕೊಡುತ್ತೇವೆ, ನೀವು ನಮ್ಮಲ್ಲಿಗೆ ಬನ್ನಿ ಎಂದು ಬಹುದೊಡ್ಡದಾಗಿ ಅಡ್ವರ್ಟೈಸ್‌ಮೆಂಟ್ ಮಾಡಿದ್ದಾರೆ. ಈ ವಿಚಾರವನ್ನು ನಾನು ಮೊದಲೂ ಹೇಳಿದ್ದೇನೆ. ಬಹುಶಃ ಈ ಒಂದು ಅಡ್ವರ್ಟೈಸ್‌ಮೆಂಟ್ ಅನ್ನು ಅಲ್ಲಿಯ ಕೈಗಾರಿಕಾ ಕಮೀಷನರ್ ಎಲ್ಲಾ ಪತ್ರಿಕೆಗಳಲ್ಲೂ ಹಾಕಿಸಿರಬೇಕು. ಗುಜರಾತ್‌ನ ಹಾಗೆ ತಾವೇನಾದರೂ ಕೂಡ ಇಲ್ಲಿಯ ರಾಜ್ಯದ ಕೈಗಾರಿಕಾ ಕಮೀಷನರ್ ಅನ್ನೂ ಜೊತೆಗೆ ಇನ್ನೂ ಇತರೇ ಬೇರೆ ಬೇರೆ ಅಧಿಕಾರಿಗಳನ್ನೂ ಹೊರಗಡೆ ಕರೆದುಕೊಂಡು ಹೋಗಿ ನಮ್ಮ ರಾಜ್ಯದಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆ ಬೆಳೆಯುವುದಕ್ಕೆ ಆರೀತಿಯಾಗಿ ಏನಾದರೂ ತಾವು ಪ್ರಯತ್ನ ಮಾಡಿದ್ದೀರಾ ? ಈರೀತಿಯಾಗಿ ಮಾಡದೇ ಹೋಗಿದ್ದ ಪಕ್ಷದಲ್ಲಿ ನಮ್ಮ ರಾಜ್ಯದಲ್ಲಿರುವ ಅಧಿಕಾರಿಗಳ ಒಂದು ಅಸಡ್ಡೆ ಮತ್ತು ಅವರ ಆಸಕ್ತಿ ಎಷ್ಟರಮಟ್ಟಿಗೆ ಇದೆ ಅನ್ನುವುದು ತೋರಿಸುತ್ತದೆ. ಅವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಯಾವರೀತಿಯಾಗಿ ಕೆಲಸ ಮಾಡಬೇಕಾಗಿತ್ತೋ ಆ ರೀತಿ ಮಾಡದೇ ಇರುವುದರಿಂದ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಮುಂದುವರೆಯುವುದಕ್ಕೆ ಆಗಿಲ್ಲಾ. ಮಹಾರಾಷ್ಟ್ರದಲ್ಲಿ ಹೋಗಿ ನೋಡಿ ಅಲ್ಲಿಯ ಮಂತ್ರಿಗಳು ಇದರ ಬಗ್ಗೆ ಎಷ್ಟು ಆಸಕ್ತಿ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ ಅನ್ನುವುದು ಗೊತ್ತಾಗುತ್ತದೆ. ಚುನಾವಣೆಯ ಸಮಯದಲ್ಲಿ ಮಾತ್ರ ಆ ಜನರ ಹತ್ತಿರ ಹೋಗುತ್ತೀರಿ. ಏತಕ್ಕೆಂದರೆ ಆವಾಗ ತಮಗೆ ಹಣದ ಅವಶ್ಯಕತೆ ಇರುವುದರಿಂದ ಚುನಾವಣೆಗೆ ಹಣವನ್ನು ಸಂಗ್ರಹಿಸುವುದಕ್ಕೋಸ್ಕರವಾಗಿ ಹೋಗುತ್ತೀರಿ, ಈ ಒಂದು ಪರಿಪಾಠವನ್ನು ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದೀರಿ. ಆದುದರಿಂದ ಮಾನ್ಯ ಅರ್ಥಮಂತ್ರಿಗಳನ್ನು ನಾನು ಈ ಸಂದರ್ಭದಲ್ಲಿ ಕೇಳುವುದೇನೆಂದರೆ ಈಪೊತ್ತು ನಮ್ಮ ರಾಜ್ಯ ಸರ್ಕಾರದ ಈ ಕೈಗಾರಿಕೆಗೆ ಸಂಬಂಧಪಟ್ಟಂಥಾ ಅಧಿಕಾರಿಗಳು ಬೇರೆ ಬೇರೆ ರಾಜ್ಯಗಳಿಗೆ ಹೋಗಿ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಬೆಳೆಸುವುದಕ್ಕಾಗಿ ಗುಜರಾತ್ ತರಹ ಒಂದು ವಾತಾವರಣವನ್ನು ನೀವು ನಿರ್ಮಾಣ ಮಾಡಿದ್ದೀರಾ? ನಮ್ಮ ರಾಜ್ಯದಲ್ಲಿ ಅದಕ್ಕೆ ಬೇಕಾದಂಥಾ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡುತ್ತೇವೆ, ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನೂ ಮಾಡಿಕೊಡುತ್ತೇವೆ ನೀವು ನಮ್ಮ ರಾಜ್ಯಕ್ಕೆ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆನ್ನುವ ದಿಶೆಯಲ್ಲಿ ತಾವು ಪ್ರಯತ್ನ ಮಾಡಿದ್ದೀರಾ ? ಹಾಗೆ ಮಾಡಿದ್ದರೆ ಯಾವಾಗ ಮಾಡಿದ್ದೀರಾ ಅನ್ನುವುದನ್ನು ತಾವು ಈ ಸಭೆಗೆ ತಿಳಿಸಬೇಕು, ಎಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಈ ಕೈಗಾರಿಕೆಯ ಅಭಿವೃದ್ಧಿಯ ಗುರಿಹೊಂದಿರುವ ಈ ಆರು ಸಂಸ್ಥೆಗಳು ಏನು ಇವೆ ಇವು ಆರು ದಿಕ್ಕಿನಲ್ಲಿ ಕೆಲಸ ಮಾಡುವುದಾದರೆ ಕೈಗಾರಿಕೆ ಬೆಳವಣಿಗೆ ಆಗುತ್ತದೆಯೇ ? ಈ ಆರು ಸಂಸ್ಥೆಗಳೂ ಆರು ಕುದುರೆಗಳು ಇದ್ದ ಹಾಗೆ. ಆ ಕುದುರೆಗಳು ಯಾವ್ಯಾವ ದಿಕ್ಕಿನಲ್ಲಿ ಓಡುತ್ತದೆಯೋ ಆ ದಿಕ್ಕಿನಲ್ಲಿ ಅವು ಓಡುತ್ತವೆ. ಈ ಬಗ್ಗೆ ಉತ್ತರವನ್ನು ಸರ್ಕಾರದವರೇ ಹೇಳಬೇಕು. ಸರ್ಕಾರದ ಅಡ್ವರ್ಟೈಸ್‌ಮೆಂಟ್‌ನಲ್ಲಿ ಟೆಕ್ನಿಕಲ್ ಕನ್‌ಸಲ್ಟೆಂಟ್ ಸರ್ವಿಸಸ್ ಕರ್ನಾಟಕದಲ್ಲಿ ಯಾವ್ಯಾವುದು ಇದೆ ಅನ್ನುವುದನ್ನು ಹೇಳಿದ್ದಾರೆ. ಕರ್ನಾಟಕ ಸ್ಟೇಟ್ ಫೈನಾನ್ಷಿಯಲ್ ಕಾರ್ಪೊರೇಷನ್

ಬಗ್ಗೆ ಅವರು ಏನು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ ಅದನ್ನು ಅವರೇ ತಿಳಿಸಬೇಕು. ಇನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಬಗ್ಗೆ ಹೇಳಿದ್ದಾರೆ. Karnataka also affords opportunity for marketing unit. ಅಂತ ಹೇಳಿದ್ದಾರೆ ಅದರ ಬಗ್ಗೆ ನಾನು ಈಗ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಕಾಲ ಇಲ್ಲ. ಆ ಒಂದು ಸಂಸ್ಥೆಗೆ ಲಾಟರಿ ಮತ್ತು ಲೇಖಕ್ ಪುಸ್ತಕ ಮತ್ತು ಸ್ಯಾಂಡಲ್ ಸೋಪ್ ಬಿಟ್ಟರೆ ಬೇರೆ ಇನ್ನಾವುದೂ ಕೆಲಸ ಇಲ್ಲ. ಇನ್ನು ಕರ್ನಾಟಕ ಸ್ಟೇಟ್ ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಇದರ ಜೊತೆಗೆ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಇವುಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಾರೊ ಗೊತ್ತಿಲ್ಲ ಇದರ ಜೊತೆಗೆ ಕರ್ನಾಟಕ ಇಂಡಸ್ಟ್ರಿಯಲ್ ಡೆವಲಪ್ ಮೆಂಟ್ ಬೋರ್ಡ್ ಇದೆ. ಹೀಗೆ ಒಟ್ಟು ೬ ಸಂಸ್ಥೆಗಳು ಇವೆ. ನಮ್ಮ ರಾಜ್ಯದಲ್ಲಿ ಹೊಸ ಉದ್ದಿಮೆ ಗಳನ್ನು ಪ್ರಾರಂಭ ಮಾಡುವುದಕ್ಕೆ ನಿಮ್ಮ ನೆರವಿಗೆ ನಾವು ನಿಂತಿದ್ದೇವೆ ನಿಮಗೆ ಬೇಕಾದ ಸವಲತ್ತುಗಳನ್ನು ಕೊಡುತ್ತೇವೆ ಅಂತ ಹೇಳುವುದಕ್ಕೆ ಈ ಆರು ಸಂಸ್ಥೆಗಳು ಇವೆ. ಇವು ಇದರ ಬಗ್ಗೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತವೆ ಅನ್ನುವುದನ್ನು ಈಗ ತಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಈಗ ಸಿಂಗಲ್ ವಿಂಡೋ ಏಜೆನ್ಸಿ ಬೇರೆ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ ಒಬ್ಬ ಕೆ.ಇ.ಬಿ. ಅಸಿಸ್ಟೆಂಟ್ ಇಂಜನೀಯರ್ ಅನ್ನೂ ಅಥವಾ ಜೂನಿಯರ್ ಇಂಜನೀಯರ್ ಅನ್ನೋ, ಎರಡನೇ ದರ್ಜೆಯ ಅಧಿಕಾರಿಯನ್ನೋ ಅಥವಾ ಮೂರನೇ ದರ್ಜೆಯ ಅಧಿಕಾರಿಯನ್ನೋ ಆ ಫೈನಾನ್ಸ್ ಕಾರ್ಪೊರೇಷನ್ನಿಗೆ ಹಾಕುತ್ತಾರೆ. ಅಂಥಾ ಅಧಿಕಾರಿ ಅಲ್ಲಿ ಏನು ಕೆಲಸ ಮಾಡಬಹುದು. ಈಗ ತಾವು ಸಿಂಗಲ್ ವಿಂಡೋ ಏಜೆನ್ಸಿಯನ್ನು ಬೇರೆ ಓಪನ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಅಲ್ಲೂ ಸಹ ಯಾವನೋ ಒಬ್ಬ ಅಧಿಕಾರಿಯನ್ನು ಹಾಕಿದರೆ, ಅಲ್ಲಿ ಜವಾಬ್ದಾರಿಯುತವಾದ ಕೆಲಸಗಳನ್ನು ತೆಗೆದುಕೊಂಡು ನಿರ್ವಹಣೆ ಮಾಡಬಲ್ಲನೇ ? ಯಾವ ಅಧಿಕಾರಿ ಅಲ್ಲಿರುತ್ತಾರೋ ಆತನು ತೆಗೆದುಕೊಂಡಂಥಾ ನಿರ್ಣಯವನ್ನು ಜವಾಬ್ದಾರಿಯಾಗಿ ನಿರ್ವಹಿಸಬೇಕಾಗುತ್ತದೆ, ಆದುದರಿಂದ ತಾವು ಜವಾಬ್ದಾರಿಯುತವಾದ ಅಧಿಕಾರಿ ಯನ್ನು ಅಲ್ಲಿಗೆ ನೇಮಕ ಮಾಡಬೇಕು ಎಂದು ಹೇಳುತ್ತೇನೆ. ಯಾರೋ ಒಬ್ಬ ಎರಡನೇ ದರ್ಜೆಯವನನ್ನೋ ಅಥವಾ ಮೂರನೇ ದರ್ಜೆಯವನನ್ನೋ ಹಾಕಿದರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಯಾರಾದರೂ ಅದಕ್ಕೆ ಬೇಕಾದಂಥಾ ಲ್ಯಾಂಡ್ ಬೇಕು ಪವರ್ ಬೇಕು ಎಂದರೆ ಅದರ ಬಗ್ಗೆ ಆ ಅಧಿಕಾರಿ ಏನು ನಿರ್ಣಯ ತೆಗೆದು ಕೊಂಡಿರುತ್ತಾನೋ ಅದನ್ನು ಕಾರ್ಯಗತ ಮಾಡುವ ಹಾಗೆ ಆತ ಅಧಿಕಾರ ಹೊಂದಿರಬೇಕು. ಈ ಪ್ರಮೋಟಿಂಗ್ ಏಜನ್ಸಿ ಇರುವುದು ಈ ಬಗ್ಗೆ ಮಹತ್ತರವಾದ ನಿರ್ಣಯ ತೆಗೆದುಕೊಂಡರೆ ಅದನ್ನು ತಾನೇ ಖುದ್ದಾಗಿ ಪರಿಶೀಲಿಸಿ ಕಾರ್ಯಗತ ಮಾಡುವುದಕ್ಕೇ ವಿನಾ ಇನ್ನಾವುದಕ್ಕೂ ಅಲ್ಲ. ಯಾರಾದರೂ ಜಮೀನು ಬೇಕು, ಪವರ್ ಬೇಕು ಎಂದರೆ ಅದರ ಅವಶ್ಯಕತೆಗಳನ್ನು ತಾನು ಪೂರೈಸಿಕೊಡಬೇಕೇ ವಿನಾ ಪವರ್ ಬೇಕಾದರೆ ಕೆ. ಇ. ಬಿ. ಹತ್ತಿರ ಹೋಗಿ ಎಂದು ಹೇಳುವುದಾಗಲಿ ಅಥವಾ ಜಮೀನು ಬೇಕು ಎಂದರೆ ಕಂದಾಯ ಇಲಾಖೆಗೆ ಹೋಗಿ ಎನ್ನುವುದಾಗಲಿ ಇರಕೂಡದು. ಹಾಗೆ ಮಾಡಿದರೆ ಕೈಗಾರಿಕೆ ಬೆಳವಣಿಗೆ ಆಗುವುದಿಲ್ಲ. ಇವರೇ ಅದನ್ನೆಲ್ಲಾ ಮಾಡಿಕೊಡಬೇಕು. ಈಗ್ಗೆ ೧೦ ದಿನಗಳ ಹಿಂದೆಯೋ ಅಥವಾ ಒಂದು ತಿಂಗಳ ಹಿಂದೆಯೋ ಈ ಸದನದಲ್ಲಿ ಕೈಗಾರಿಕೆ ಇಲಾಖೆ ಬಗ್ಗೆ ಚರ್ಚೆಯಾಗುವ ಪೂರ್ವದಲ್ಲಿ ಈ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ತಾವೇ ಹೇಳಿದಿರಿ. ಈ ಬಗ್ಗೆ ತಾತ್ಕಾಲಿಕವಾಗಿ ನಿರ್ಣಯ ಆದರೂ ಕೂಡ ಮುಂದೆ ಅದು ವ್ಯವಸ್ಥಿತವಾಗಿ ಮಾಡುವುದಕ್ಕೆ ನಮ್ಮ ರಾಜ್ಯದಲ್ಲಿ ಕೈಗಾರಿಕೆ ಹೆಚ್ಚು ಬೆಳೆಯುವುದಕ್ಕೆ ಅದಕ್ಕೆ ಬೇಕಾದಂಥಾ ಹಣಕಾಸಿನ ವ್ಯವಸ್ಥೆಯನ್ನು ಬಜೆಟ್‌ನಲ್ಲಿ ಮಾಡಿಕೊಡಬೇಕು. ಮತ್ತು ಅವರು ಈ ಬಗ್ಗೆ ತೆಗೆದುಕೊಂಡಂಥಾ ನಿರ್ಣಯಗಳನ್ನು ಸರಿಯಾದ ರೀತಿಯಲ್ಲಿ, ಯಾವ ಉದ್ದೇಶದಿಂದ ನಿರ್ಣಯವನ್ನು ತೆಗೆದುಕೊಂಡಿರುತ್ತಾರೋ ಆ ಉದ್ದೇಶ ಸಫಲವಾಗುವಂತೆ ಮಾಡಿ ಕೊಡಬೇಕು ಎಂದು ಹೇಳುತ್ತೇನೆ.

ಮುಖ್ಯವಾದಂಥ ನಿರ್ಣಯವನ್ನು ತೆಗೆದುಕೊಳ್ಳತಕ್ಕ ಹಿರಿಯರ ತಂಡ ಅಲ್ಲಿರಬೇಕು, ಮತ್ತು ನಿರ್ಣಯ ತೆಗೆದುಕೊಳ್ಳತಕ್ಕದ್ದು ಅಷ್ಟೆಲ್ಲ ಅದನ್ನು ಕಾರ್ಯರೂಪಕ್ಕೆ ತರತಕ್ಕ ವ್ಯವಸ್ಥೆ ಮಾಡತಕ್ಕದ್ದರಲ್ಲಿ ಒಂದು ವಾತಾವರಣವನ್ನು ನಿರ್ಮಾಣ ಮಾಡಬೇಕು ಎಂದು ನಾನು ತಮಗೆ ಸೂಚನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಕೈಗಾರಿಕೆಯ ದೃಷ್ಟಿಯಿಂದ ಕೇವಲ ಬೆಂಗಳೂರು ಒಂದೇ ಒಂದು ಮುಖ್ಯವಾದ ಕೇಂದ್ರ ಆಗಬಾರದು. ರಾಜ್ಯದ ಎಲ್ಲಾ ಪ್ರದೇಶಗಳಲ್ಲಿಯೂ ಕೂಡ ಕೈಗಾರಿಕೆಯ ಬೆಳವಣಿಗೆ ಮಟ್ಟಿಗೆ ಸಮತೋಲನ ಇರಬೇಕಾಗುತ್ತದೆ. ಹಿಂದುಳಿದಿರತಕ್ಕ ಪ್ರದೇಶಗಳು ಮುಂದೆಬರು

ವುದಕ್ಕೆ ತಕ್ಕ ವಾತಾವರಣವನ್ನು ನಿರ್ಮಾಣಮಾಡಬೇಕು ಎಂದು ನಾನುಹೇಳುತ್ತೇನೆ. ಬಹುಶಃ ಈ ಸದನದಲ್ಲಿ ಈ ವಿಷಯವನ್ನು ನಾವು ಹಲವಾರು ಬಾರಿ ಚರ್ಚೆ ಮಾಡಿದ್ದೇವೆ. ಜನತಾ ಸರ್ಕಾರ ಇದ್ದಾಗ ಇದರ ಬಗ್ಗೆ ಅತ್ಯಂತ ಮಹತ್ತರವಾದ ಒಂದು ನಿರ್ಣಯವನ್ನು ಅವರು ತೆಗೆದುಕೊಂಡಿದ್ದರು. ಅದರ ಪ್ರಕಾರ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್ ಎಂದು ಮಾಡಿ ಜಿಲ್ಲೆಯ ಕೈಗಾರಿಕಾ ಬೆಳವಣಿಗೆಗೆ ಸಹಾಯ ಮಾಡಬೇಕು ಎನ್ನುವಂಥ ಉದ್ದೇಶ ಇತ್ತು. ಇದಕ್ಕೆ ಬಹುಶಃ ತಾವು ಯಾವುದೇ ಒಂದು ಸಂಕುಚಿತ ಮನೋಭಾವನೆಯನ್ನು ಬಿಟ್ಟು ಇದು ಅತಿ ಪ್ರಾಮುಖ್ಯವಾದ ಅಭಿಪ್ರಾಯದೆಂದು ಎಂದು ತಮ್ಮ ಅಭಿಪ್ರಾಯವನ್ನು ಯಾರೂ ಅಲ್ಲಗಳೆಯುವುದಕ್ಕಾಗುವುದಿಲ್ಲ. ಅವರು ಅಧಿಕಾರದಲ್ಲಿಲ್ಲ ಎಂದು ಅದನ್ನು ಬದಲಾವಣೆ ಮಾಡಿಕೊಂಡು ಹೋದರೆ ಅದಕ್ಕೆ ನನ್ನ ಅಭ್ಯಂತರ ವಿಲ್ಲ. ಆದರೆ ಅವರು ತೆಗೆದುಕೊಂಡಂಥ ನಿರ್ಣಯ ಏನು ಇದೆ ಅದು ಕೈಗಾರಿಕಾ ನೀತಿಯನ್ನು ಅದರ ಬೆಳವಣಿಗೆಗೆ ಸಹಾಯ ಮಾಡುತ್ತದೆಂದು ಹಲವಾರು ವರ್ಷಗಳವರೆಗೆ ಚರ್ಚೆಮಾಡಿ ಅದನ್ನು ಉಳಿಸಿ ಕೊಂಡು ಬರಬಾರದು ಎನ್ನುವ ಅಭಿಪ್ರಾಯಕ್ಕೆ ಬಂದರು. ಆ ಒಂದು ನೀತಿಯಲ್ಲಿ ಒಂದು ರಚನಾತ್ಮಕ ಉದ್ದೇಶ ಇತ್ತು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಅಲ್ಲಿ ಸಿಕ್ಕತಕ್ಕ ಸಂಪನ್ಮೂಲ ಅಥವಾ ಕಚ್ಚಾ ಪದಾರ್ಥ ಏನು ಇದೆ ಅದರ ಉಪಯುಕ್ತತೆಯನ್ನು ಪಡೆಯುವುದರ ಮಟ್ಟಿಗೆ ಜಿಲ್ಲೆಯ ಸನ್ನಿವೇಶಕ್ಕೆ ಹೊಂದಿಕೊಂಡು ಉದ್ದಿಮೆಗಳನ್ನು ಪ್ರಾರಂಭ ಮಾಡಬೇಕು. ಈ ದೃಷ್ಟಿಯಿಂದ ಇಂಡಸ್ಟ್ರಿಯಲ್ ಸೆಂಟರ್‌ನ್ನು ಪ್ರಾರಂಭ ಮಾಡಿದರೆ ಒಳ್ಳೆಯದು. ಇದಕ್ಕೆ ಕೇಂದ್ರ ಸರ್ಕಾರದವರು ಯಾವ ಒಂದು ತೀರ್ಮಾನ ಮಾಡಿದ್ದರೂ ಸರಿ ಜಿಲ್ಲಾ ಇಂಡಸ್ಟ್ರಿಯಲ್ ಸೆಂಟರ್ ಕೆಲಸ ಮಾಡತಕ್ಕ ರೀತಿಯನ್ನು ನೋಡಿ ಕೊಂಡಾಗ ಇವುಗಳನ್ನು ಮುಂದುವರಿಸಿಕೊಂಡು ಹೋಗತಕ್ಕ ರೀತಿಯನ್ನು ನೋಡಿಕೊಂಡಾಗ ಇವು ಗಳನ್ನು ಮುಂದುವರಿಸಿಕೊಂಡು ಹೋಗತಕ್ಕ ಪ್ರಯತ್ನವನ್ನು ಸರ್ಕಾರ ನಡೆಸಿಲ್ಲ ಎಂದು ಹೇಳಿದರೆ ಅದು ತಪ್ಪಾಗಲಕ್ಕಿಲ್ಲ. ಒಬ್ಬ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್‌ನ ಜನರಲ್ ಮ್ಯಾನೇಜರ್, ಇದರ ಮುಖ್ಯ ಅಧಿಕಾರಿ ಅಲ್ಲಿ ನಾಲ್ಕು ವರ್ಷವಾದರೂ ಕೆಲಸ ಮಾಡಬೇಕು, ಮತ್ತು ಅಲ್ಲಿ ಅವನು ಕೈಗಾರಿಕೆಯ ಬೆಳವಣಿಗೆಯ ದೃಷ್ಟಿಯಿಂದ ಎಲ್ಲಾ ವ್ಯವಸ್ಥೆಯನ್ನು ಮಾಡತಕ್ಕದ್ದು ಅವನ ಕರ್ತವ್ಯ, ಮತ್ತು ಇದರ ಬಗ್ಗೆ ಒಂದು ಬ್ಲ್ಯೂ ಪ್ರಿಂಟ್ ಎಂದು ನಾವು ಏನು ಹೇಳುತ್ತೇವೆಯೋ ಅದನ್ನು ತಯಾರು ಮಾಡಬೇಕು ಈ ವ್ಯವಸ್ಥೆಯನ್ನು ಮಾಡತಕ್ಕ ಕಾಲದಲ್ಲಿ ಅವನು ಜಿಲ್ಲೆಯಲ್ಲಿರತಕ್ಕ ಬೇರೆ ಇಲಾಖೆಯ ಅಧಿಕಾರಿಗಳನ್ನು ಅಂದರೆ ಫೈನಾನ್ಸಿಯಲ್ ಏಜೆನ್ಸೀಸ್ ಅವರನ್ನು, ಉದ್ದಿಮೆದಾರರನ್ನು ಇವರ ಜೊತೆಯಲ್ಲಿ ವಿದ್ಯುಚ್ಛಕ್ತಿ ಇಲಾಖೆಯವರನ್ನು ಹೀಗೆ ವಿವಿಧ ರೀತಿಯ ಅಧಿಕಾರಿಗಳನ್ನು ಸೇರಿಸಿ ಇವರೆಲ್ಲರ ನೆರವನ್ನು ಪಡೆದು ಕೊಂಡು ಜಿಲ್ಲಾ ಕೈಗಾರಿಕೆಯ ಬೆಳವಣಿಗೆಗೆ ಪ್ರಯತ್ನ ಮಾಡಬೇಕು. ಇಂಥ ಪ್ರಯತ್ನವನ್ನು ತಾವು ನಡೆಸಿಲ್ಲ್ಲೇರಾ ಎಂದು ನಾನು ತಮ್ಮನ್ನು ಹೇಳುವುದಕ್ಕೆ ಇಷ್ಟಪಡುತ್ತೆನೆ. ನನಗೆ ತಿಳಿದಹಾಗೆ ಒಬ್ಬೊಬ್ಬ ಅಧಿಕಾರಿಯನ್ನು ತಾವು ಒಂದುವರ್ಷವೂ ಇರಲಿಕ್ಕೆ ಬಿಡದೆ ಆರು ತಿಂಗಳಿಗೆ, ಎಂಟು ತಿಂಗಳಿಗೆ ವರ್ಗಾವಣೆ ಮಾಡಿಕೊಂಡು ಹೋಗಿ ಇದರಲ್ಲಿ ಒಂದು ರೀತಿಯ ರಾಜಕೀಯ ನಡೆದಿದೆ ಎಂದು ನಾವು ನಿರೀಕ್ಷಣೆ ಮಾಡುವ ಮಟ್ಟಿಗೆ ಹೋಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಯಾವ ಉದ್ದೇಶದಿಂದ ಈ ಸಂಸ್ಥೆಯನ್ನು ಪ್ರಾರಂಭ ಮಾಡಿದ್ದರೋ ಅದು ಈಡೇರದೆ, ಇವತ್ತು ಇವುಗಳ ವೈಫಲ್ಯತೆಯ ಹೊಣೆಯನ್ನು ಸರ್ಕಾರವೇ ಪೂರ್ಣವಾಗಿ ಹೊತ್ತುಕೊಳ್ಳಬೇಕು. ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂಡಸ್ಟ್ರಿಯಲ್ ಸೆಂಟರ್ಸ್ ಇವು ಒಳ್ಳೆಯ single windows to the State level. ಈ ಸಿಂಗಲ್ ವಿಂಡೋ ಏಜೆನ್ಸಿ ಯಾವ ಕೆಲಸಗಳನ್ನು ಮಾಡತಕ್ಕದ್ದರಲ್ಲಿಯೂ ಸಹ ಸ್ವಾತಂತ್ರ್ಯತೆ ಇರದೆ ಇವತ್ತು ಸರಿಯಾದ ರೀತಿಯಲ್ಲಿ ಇವು ನಡೆದುಕೊಂಡು ಹೋಗುವುದಕ್ಕೆ ಸರ್ಕಾರದ ನಿರ್ಣಯ ಗಳು ಒಂದು ಮಾರಕವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇವು ನಡೆದುಕೊಂಡು ಹೋಗವುದಕ್ಕೆ ಸರ್ಕಾರದ ನಿರ್ಣಯಗಳು ತಪ್ಪು ಒಂದು ಮಾರಕವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೆ ಕೇಂದ್ರ ಸರ್ಕಾರದವರು ಕರ್ನಾಟಕದಲ್ಲಿ ೧೦ ಜಿಲ್ಲೆಗಳನ್ನು ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಎಂದು ಡಿಕ್ಲೇರ್ ಮಾಡಿದ್ದಾರೆ. ಬೆಳಗಾಂ, ಬೀದರ್; ಧಾರವಾಡ, ಗುಲ್ಬರ್ಗ, ಮೈಸೂರು, ನಾರ್ತ್ ಕೆನರಾ, ಮತ್ತು ಸೌತ್ ಕೆನರಾ. ಮೈಸೂರಿನಲ್ಲಿ ನಾವು ಓಡಾಡತಕ್ಕ ರಸ್ತೆಯಲ್ಲಿ ಕೆಲವು ಕೈಗಾರಿಕೆ ಗಳನ್ನು ನಾವು ನೋಡಬಹುದು. ಅದನ್ನು ಬಿಟ್ಟರೆ ಮಂಗಳೂರಿನಲ್ಲಿ ಬಂದರು ಇರುವುದರಿಂದ ಮತ್ತು ಅದರ ಪರಿಸರದಿಂದ ಅಲ್ಲಿ ಕೆಲವು ಕೈಗಾರಿಕೆಗಳು ಬಂದಿವೆ. ಬೆಳಗಾಂ, ಇಲ್ಲಿ ಸಂಚಾರಕ್ಕೆ ಒಳ್ಳೆಯ ಸೌಲಭ್ಯದ

ವ್ಯವಸ್ಥೆ ಬಗುವುದರಿಂದ ಮತ್ತು ಅನೇಕ ಜನ ಉದ್ದಿಮೆದಾರರು ಇರುವುದರಿಂದ ಇಲ್ಲಿಯೂ ಸ್ವಲ್ಪ ಬೆಳವಣಿಗೆಯನ್ನು ನಾವು ಕಾಣಬಹುದು ಇದನ್ನು ಬಿಟ್ಟರೆ, ತುಮಕೂರು, ಇಲ್ಲಿ ಹೆಚ್. ಎಂ. ಟಿ. ಯು ಅನ್ಸಿಲರಿ ಯೂನಿಟ್ ಬರದಿದ್ದರಿಂದ ಕೆಲವು ಕೈಗಾರಿಕೆಗಳನ್ನು ನಾವು ಕಾಣಬಹುದು. ಇವುಗಳನ್ನು ಬಿಟ್ಟರೆ ಇನ್ನು ಯಾವುದೇ ಕ್ಷೇತ್ರಗಳಲ್ಲಿ ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಏನು ಎಂದು ಡಿಕ್ಲೇರ್ ಮಾಡಿದ್ದಾರೋ ಅಲ್ಲಿ ಕೈಗಾರಿಕೆ ಬೆಳವಣಿಗೆಯಾಗಿಲ್ಲ ಎನ್ನುವುದನ್ನು ಸರ್ಕಾರ ತಿಳಿದುಕೊಳ್ಳಬೇಕಾಗುತ್ತದೆ. ಆದ್ದರಿಂದ ತಾವು ಇದನ್ನು ಪುನಃ ಪರಿಶೀಲನೆ ಮಾಡಿ ಬೀದರ್ ಜಿಲ್ಲೆಯನ್ನು ನೋ ಇಂಡಸ್ಟ್ರೀಸ್ ಡಿಸ್ಟ್ರಿಕ್ಟ್ ಎಂದು ಹೇಳಿ ಘೋಷಣೆ ಮಾಡಿದ್ದಾರೆ. ಘೋಷಣೆ ಮಾಡಿ ಆರು ತಿಂಗಳಾಯಿತು, ಅಲ್ಲಿಯೂ ಕೂಡ ಯಾವ ಪರಿಸರವನ್ನೂ ನಿರ್ಮಾಣ ಮಾಡತಕ್ಕ ಕಾರ್ಯವನ್ನು ಸರ್ಕಾರ ತೆಗೆದುಕೊಳ್ಳಲಿಲ್ಲ. ಇದು ಪ್ರತ್ಯಕ್ಷವಾಗಿಯೂ ನಡೆಯಲಿಲ್ಲ. ಕೇಂದ್ರ ಸರ್ಕಾರ ಬೀದರ್ ಜಿಲ್ಲೆಯನ್ನು ನೋ ಇಂಡಸ್ಟ್ರೀಸ್ ಡಿಸ್ಟ್ರಿಕ್ಟ್ ಎಂದು ಘೋಷಣೆ ಮಾಡಿದ ಮೇಲೂ ಮನೋಪಲಿಸ್ಟ್‌ಗೆ ಎಲ್ಲಾ ಸೌಲಭ್ಯಗಳನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದಾರೆ. ನಾನು ಇದರ ಬಗ್ಗೆ ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇಂಥ ಒಂದು ಹಿಂದುಳಿದ ಪ್ರದೇಶದಲ್ಲಿಯೂ ಕೂಡ ಕೈಗಾರಿಕಾ ಬೆಳವಣಿಗೆಗೆ ರಾಜ್ಯ ಸರ್ಕಾರ ಯಾವುದೇ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದು ನಿಮ್ಮ ವೈಫಲ್ಯತೆಯೆಂದು ತಾವು ಒಪ್ಪಿಕೊಳ್ಳಬೇಕಾಗುತ್ತದೆ,

ಸುಮಾರು ೫೩ ತಾಲ್ಲೂಕುಗಳನ್ನು ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಏರಿಯಾ ಎಂದು ಘೋಷಣೆ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರಿ ಆಜ್ಞೆಯು ಬಂದಮೇಲೆಯಾದರೂ ಸರ್ಕಾರ ಯಾವುದೇ ಕಾರ್ಯ ಚಟುವಟಿಕೆಯನ್ನು ಇದರ ಬಗ್ಗೆ ತೆಗೆದುಕೊಂಡಿದೆಯೇ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಭೂಮಿಯನ್ನು ತೆಗೆದುಕೊಳ್ಳತಕ್ಕದ್ದಾಗಲೀ, ಅಲ್ಲಿ ಬೇಕಾದಂಥ ಪರಿಸರವನ್ನು ನಿರ್ಮಾಣ ಮಾಡತಕ್ಕದ್ದಾಗಲೀ ಅಥವಾ ನಾನು ಪ್ರಶ್ನೆ ಮಾಡಬೇಕಾಗಿದೆ. ಹಿಂದುಳಿದ ತಾಲ್ಲೂಕುಗಳು ಎಂದು ಘೋಷಣೆ ಮಾಡಿದಮೇಲೂ ಸಂಬಂಧಪಟ್ಟ ತಾಲ್ಲೂಕುಗಳಲ್ಲಿ ಏನಾದರೂ ಬೆಳವಣಿಗೆಯಾಗಿದೆಯೇ ? ಭದ್ರಾವತಿ ತಾಲ್ಲೂಕು ಇಂಡಸ್ಟ್ರಿಯಲ್ ಬ್ಯಾಕ್‌ವಡ್ ತಾಲ್ಲೂಕು ಎಂದು ಹೇಳಿದ್ದೀರಿ. ಬೆಂಗಳೂರು ಮತ್ತು ಮೈಸೂರು ತಾಲ್ಲೂಕುಗಳನ್ನು ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಎಂದು ತಾವು ಡಿಕ್ಲೇರ್ ಮಾಡಿರಬಹುದು. ಶ್ರೀಮಾನ್ ಶೀರನಾಳಿ ಚಂದ್ರಶೇಖರ್ ಅವರ ಪ್ರಶ್ನೆಗೆ ತಾವು ಉತ್ತರ ಕೊಡಂತ್ತಾ ಇದ್ದಂಥ ಕಾಲದಲ್ಲಿ ಭದ್ರಾವತಿ ತಾಲ್ಲೂಕ ಡೆವಲಪ್ ಆಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ಬಿಟ್ಟು ಉಳಿದ ತಾಲ್ಲೂಕುಗಳು ಡೆವಲಪ್ ಆಗಿವೆಯೇ ಎಂದರೆ ಇದನ್ನು ತಾವೇ ಹೇಳಬೇಕು. ಆದರೆ ಬೇರೆ ತಾಲ್ಲೂಕುಗಳನ್ನು ನಾವು ನೋಡಿದಾಗ ತಮ್ಮ ಭುಜವನ್ನು ತಾವೇ ತಟ್ಟಿಕೊಳ್ಳಬೇಕಾಗುತ್ತದೆ. ಯಾವುದೇ ಒಂದು ರೀತಿಯ ಸಾಧನೆ ನಡೆದಿಲ್ಲ, ಸಾರ್ಥಕವಾಗಿಲ್ಲ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವ ತಾಲ್ಲೂಕಿನಲ್ಲಿಯೂ ಯಾವುವೇ ರೀತಿಯಲ್ಲಿ ಕೈಗಾರಿಕಾ ಬೆಳವಣಿಗೆಯಾಗಿಲ್ಲ. ರಾಜ್ಯದಲ್ಲಿ ೫೩ ತಾಲ್ಲೂಕುಗಳನ್ನು ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಏರಿಯಾಸ್ ಎಂದು ಡಿಕ್ಲೇರ್ ಮಾಡಿದ ಮೇಲೆ ಯಾವ ರೀತಿಯಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎನ್ನತಕ್ಕದ್ದನ್ನು ನಾನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

೪–೩೦ ಪಿ. ಎಂ.

ಇವತ್ತು ನಿಮ್ಮ ಘೋಷಣೆ ಬರೀ ಕಾಗದದಲ್ಲಿಯೇ ಉಳಿದುಕೊಂಡಿದೆ ಎನ್ನತಕ್ಕಂಥಾದ್ದನ್ನು ನೀವು ತಿಳಿದುಕೊಂಡರೆ ಒಳ್ಳೆಯದು ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಮ್ಮ ನೆರೆಯ ರಾಜ್ಯವಾದ ಆಂಧ್ರದಲ್ಲಿ ನ್ಯೂ ಡೈಮೆನ್‌ಷನ್ಸ್ ಇನ್ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್‌ನಲ್ಲಿ ಅವರು ಎಷ್ಟರ ಮಟ್ಟಿಗೆ ಮುಂದೆ ಹೋಗಿದ್ದಾರೆ ಎನ್ನುವುದಕ್ಕಾಗಿ ನಾನು ಈ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. 'The Corporation has made a systematic approach for reducing the regional inbalance amongst various parts of the State by locating suitable large and medium industrial units in each of the districts of the State. While doing so the Corporation also have achieved regional dispersal of industries in the various regions of the State. 265 industrial units were provided by the Corporation, 145

units were established in Telangana, 75 units in Coastal Andhra Region, 46 units in Rayalseema region. Out of 265 as many as 165 units are located in the backward areas of the State.' ಈ ದಿಕ್ಕಿನಲ್ಲಿ ನಿಮ್ಮ ಸಾಧನೆ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ನೀವು ದಯಮಾಡಿ ಈ ಸಭೆಗೆ ಉತ್ತರ ಕೊಡುವಾಗ ಹೇಳಬೇಕು. ಕಳೆದ ಸಲ ಇಲ್ಲಿ ನಾನು ತಮಿಳುನಾಡಿನಲ್ಲಿ ಆಗಿರತಕ್ಕಂಥ ಸಾಧನೆಯ ಬಗ್ಗೆ ಉದಾಹರಣೆಯನ್ನು ಕೊಟ್ಟಾಗ ಅದರ ಬಗ್ಗೆ ನೀವು ಒಂದು ರೀತಿಯ ಮೂದಲಿಕೆಯ ಮಾತನ್ನು ಹೇಳಿದ್ದೀರಿ. ಹಿಂದೆ ತಮ್ಮ ಭಾಷಣದಲ್ಲಿ ಆ ಮಾತನ್ನು ಹೇಳಿರುವುದನ್ನು ನಾನು ಇಲ್ಲಿ ಈಗ ಓದಿ ಹೇಳುವುದಕ್ಕೆ ಹೋಗುವುದಿಲ್ಲ. ಹಿತ್ತಲಗಿಡ ಮದ್ದಲ್ಲ ಎಂದು ಹೇಳತಕ್ಕಂಥ ಕಾಲದಲ್ಲಿ ಶ್ರೀಮಾನ್ ದೇವೇಗೌಡರು ಬೇರೆ ರಾಜ್ಯಗಳನ್ನು ಗಮನದಲ್ಲಿಟ್ಟುಕೊಂಡು ರಾಜಕೀಯವಾಗಿ ಹೇಳಿದ್ದಾರೆ ಎಂದು ನೀವು ಹೇಳಿದ್ದೀರಿ, ಈ ವಿಚಾರದಲ್ಲಿ ನೀವು ಬೇರೆ ರಾಜ್ಯಗಳಿಂದ ಸ್ಫೂರ್ತಿಯನ್ನು ಪಡೆಯತಕ್ಕಂಥಾದಕ್ಕೆ ಪ್ರಯತ್ನ ಮಾಡಬೇಕು ಎನ್ನುವ ದೃಷ್ಟಿಯಿಂದ ಈ ವಿಷಯವನ್ನು ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ನಾನು ಇಚ್ಛಿಸುತ್ತೇನೆ. ಈ ಗುಜರಾತ್ ರಾಜ್ಯದಲ್ಲಿ It has set up 136 strategically located industrial sheds. In these sheds the Gujarat Industries Development Corporation has provided all basic infrastructure sheds, plans, roads, water, power, drainage. Supporting infrastructural facilities are also provided wherever necessary telecommunications, banks, post office, all types of facilities.' ಸ್ವಾಮಿ, ಇವತ್ತು ನಾವು ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್‌ಗೆ ಹೋಗೋಣ. ಅಲ್ಲಿಯ ಪರಿಸ್ಥಿತಿ ಏನಾಗಿದೆ ಎಂದರೆ. ಈ ಸಂದರ್ಭದಲ್ಲಿ ನಾನು ಒಂದು ಪತ್ರಿಕೆಯಲ್ಲಿ ಬಂದಿರತಕ್ಕಂಥ ಒಂದು ಲೇಖನವನ್ನು ಉದಾಹರಣಾರ್ಥವಾಗಿ ತೆಗೆದುಕೊಂಡು ಹೇಳುತ್ತೇನೆ. 50% of the units are almost closed to day ; ಎಂದು ಅವರು ಈ ಲೇಖನದಲ್ಲಿ ಬರೆಯುತ್ತಾರೆ. ಹಾಗೆ ಇವತ್ತು 50 ಪರ್ಸೆಂಟ್ ಆಫ್ ಯೂನಿಟ್ಸ್ ಕ್ಲೋಸ್ ಆಗಿದೆ ಎಂದರೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು ಎಂದು ನಾನು ಹೇಳಬಯಸುತ್ತೇನೆ. ಇದರ ಬಗ್ಗೆ ಸರ್ಕಾರ ಅತ್ಯಂತ ತೀವ್ರವಾದ ಗಮನವನ್ನು ಹರಿಸದಿದ್ದರೆ, ಈ ಬಗ್ಗೆ ಇದನ್ನು ಸರ್ಕಾರ ಇಷ್ಟೊಂದು ಉಡಾಫೆಯಿಂದ ಅಥವಾ ಅಲಕ್ಷ್ಯದಿಂದ ನೋಡಿಕೊಳ್ಳುವುದಾದರೆ ಬಹುಶಃ ಇದು ನಿಜವಾಗಿಯೂ ಕೂಡ ಘೋರ ಅಪರಾಧ ಮಾಡಿದಂತಾಗುತ್ತದೆ ಎಂದು ನಾನು ಈ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ನೀವು ಈ ಗ್ರೋತ್ ಸೆಂಟರ್ಸ್ ಬಗ್ಗೆ ಕಳೆದ ಸಾರಿ ಹೇಳಿದ್ದೀರಿ. ಹಾಸನದಲ್ಲಿ ಇದನ್ನು ಮಾಡಬೇಕಾದರೆ ಇನ್ನೂ 5 ವರ್ಷ ಬೇಕು. ಆದರೆ ಈಗಿರತಕ್ಕಂಥ ಸೆಂಟರ್‌ಗಳ ವಿಚಾರದಲ್ಲಿ ಒಂದೊಂದು ಸೆಂಟರ್ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಯಾವ್ಯಾವ ಲೊಕೇಷನ್‌ನಲ್ಲಿ ಯಾರ್‍ಯಾರು ಅದನ್ನು ಮಾಡಿದ್ದಾರೆ, ಇದರಲ್ಲಿ ಸರ್ಕಾರದ ತಪ್ಪು ನಡವಳಿಕೆ ಏನಾಗಿದೆ ಎನ್ನುವುದರ ಬಗ್ಗೆ ನೀವೇ ಬಹುಶಃ ಮತ್ತೊಂದು ಸಾರಿ ಪರಿಶೀಲನೆ ಮಾಡಿದರೆ ಒಳ್ಳೆಯದೆಂದು ನಾನು ಹೇಳುತ್ತೇನೆ. ಅಲ್ಲಿ ಗ್ರೋತ್ ಸೆಂಟರ್ಸ್‌ನ್ನು ಮಾಡತಕ್ಕಂಥ ಜಾಗವನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ಮತ್ತು ಯಾವುದೇ ಪೂರ್ವಭಾವಿ ವ್ಯವಸ್ಥೆಗಳನ್ನು ಮಾಡುವುದಕ್ಕೆ ಅತ್ಯಂತ ಅನುಕೂಲವಾದ ಜಾಗವನ್ನು ಪಡೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ಅದರಲ್ಲಿ ನೀವು ಜಾಗ್ರತೆ ವಹಿಸಬೇಕೆಂದು ಹೇಳುತ್ತಿದ್ದೇನೆ. ಇವತ್ತು ಅಲ್ಲಿ ಸಣ್ಣ ಯೂನಿಟ್ಸ್‌ನ್ನು ಹಾಕತಕ್ಕಂಥಾದ್ದರ ಬಗ್ಗೆ ಮತ್ತು ಟ್ರೈನಿಂಗ್ ಕೊಡತಕ್ಕಂಥಾದ್ದರ ಬಗ್ಗೆ ಮತ್ತು ಸೆಲ್ಫ್ ಇಂಪ್ಲಾಯ್‌ಮೆಂಟ್ ಸ್ಕೀಮ್ ಬಗ್ಗೆ ಹೇಳಿದ್ದೀರಿ. ಇದನ್ನೆಲ್ಲಾ ಮಾಡಿ ದೇಶದಲ್ಲಿ ಅವರ ಒಂದು 'ಉದ್ಧಾರ ಮಾಡುತ್ತೇವೆಂದು' ಹೇಳಿದ್ದೀರಿ. ಹಾಗೆಯೇ ಈ ಸ್ಟೈಪೆಂಡರಿ ಸ್ಕೀಮನ್ನು ತೆಗೆದುಕೊಂಡು ಬಂದಿರಿ. ಮತ್ತೇ ನಾನು ಅದನ್ನು ವಿರೋಧ ಮಾಡಿದ್ದೆ. ಜನತಾ ಸರ್ಕಾರ ಇದ್ದಾಗ ಹಿಂದಿನ ಪ್ರಧಾನ ಮಂತ್ರಿಯವರೂ ಕೂಡ ಆ ಸಿಸ್ಟಂನ್ನು ತರತಕ್ಕಂಥಾದ್ದು ಯೋಗ್ಯವಲ್ಲವೆಂದು ಹೇಳಿದ್ದರು. ಇವತ್ತು ಸರ್ಕಾರ ಅದರಲ್ಲಿ ಬಹಳ ಇಕ್ಕಟ್ಟಿಗೆ ಸಿಕ್ಕಿದೆ. ಈ ಸ್ಟೈಫೆಂಡರಿ ಯೋಜನೆಯನ್ನು ತರುವುದರ ಮೂಲಕ 15 ಸಾವಿರ ಹುಡುಗರಿಗೆ ಇವತ್ತು ಸರ್ಕಾರದಲ್ಲಿ ವ್ಯವಸ್ಥೆ ಮಾಡತಕ್ಕಂಥಾದ್ದಕ್ಕೆ ಅದು ಇವತ್ತು ಬಹಳ ಜಟಿಲವಾದ ಸಮಸ್ಯೆಯಾಗಿ ಉಳಿದಿದೆ. ಅದರ ಹಿನ್ನೆಲೆಯಲ್ಲಿ ನಾನು ಹೇಳುತ್ತಿದ್ದೇನೆ, ಈ ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮನ್ನು ಗುಜರಾತ್‌ನಲ್ಲಿ ಎಷ್ಟರಮಟ್ಟಿಗೆ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನತಕ್ಕಂಥಾದ್ದರ ಬಗ್ಗೆ ಸಾಕಷ್ಟು ಲಿಟರೇಚರ್ ನನ್ನ ಹತ್ತಿರ ಇದೆ.

ಅದನ್ನು ಓದಿ ಹೇಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಇವತ್ತು ನಾನು ನಿಮ್ಮ ಹತ್ತಿರ ಒಂದೇ ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ನಮ್ಮಲ್ಲಿ ಇವತ್ತು ಟ್ರೈನಿಂಗ್ ವ್ಯವಸ್ಥೆ ಇದೆ, ಆರ್ಟಿಸಾನ್ ಟ್ರೈನಿಂಗ್ ಸೆಂಟರ್ಸ್ ಇದೆ, ಮಾಡರ್ನ್ ಕಾರ್ಪೆಂಟರ್ ಟ್ರೈನಿಂಗ್ ಸೆಂಟರ್ಸ್ ಇದೆ, ಅಗ್ರಿಕಲ್ಚರಲ್ ಮಿಷಿನರಿ ಸೆಂಟರ್ಸ್ ಇದೆ, ಶೀಟ್ ಮೆಟಲ್ಸ್ ಟ್ರೈನಿಂಗ್ ಸರ್ವೀಸ್ ಸೆಂಟರ್ಸ್ ಇದೆ, ಲೆದರ್ ಸರ್ವೀಸ್ ಸೆಂಟರ್ಸ್ ಇದೆ, ಜನರಲ್ ಪರ್ಪಸ್ ವರ್ಕ್‌ಷಾಪ್ ಟ್ರೈನಿಂಗ್ ಸೆಂಟರ್ಸ್ ಇದೆ. ಹೀಗಿರುವಾಗ ಯಾವುದಾದರೂ ಒಂದು ಸೆಂಟರ್‌ಗೆ ಇವತ್ತು ತನ್ನದೇ ಆದ ಸ್ವಂತ ಕಟ್ಟಡ ಇದೆಯೋ ? ಇಲ್ಲ. ಯಾವುದೇ ಒಂದು ಸೆಂಟರ್‌ನಲ್ಲಿ ಕೂಡ ೮–೧೦ ಮಕ್ಕಳು ತರಬೇತಿ ಹೊಂದತಕ್ಕಂಥಾದ್ದಕ್ಕೆ ವ್ಯವಸ್ಥೆ ಇಲ್ಲ. ಅಲ್ಲಿ ಅಂತಹ ಒಂದು ವಾತಾವರಣ ಕೂಡ ಇಲ್ಲ. ಇವತ್ತು ಚಾಮರಾಜ ಟೆಕ್ನಾಲಾಜಿಕಲ್ ಇನ್‌ಸ್ಟಿಟ್ಯೂಟ್ ಏನಿದೆ ಅದನ್ನು ಕೂಡ ಇವತ್ತು ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ವಹಿಸಿದ್ದಾರೆ. ಅಂತಹ ಒಂದು ಉತ್ತಮವಾದ ಮೇಲ್ಮಟ್ಟದ ಸಂಸ್ಥೆಯನ್ನು ಇವತ್ತು ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟ್‌ನಲ್ಲಿ ಇಟ್ಟುಕೊಂಡು ಅದನ್ನು ಅವರು ನಡೆಸಿಕೊಂಡು ಹೋಗುವುದಕೆ ಸಾಧ್ಯವಾಗಿಲ್ಲ. ಇದನ್ನು ನೀವೂ ಒಪ್ಪಿಕೊಳ್ಳುತ್ತೀರಿ. ಈ ಚಾಮರಾಜ ಟೆಕ್ನಾಲಾಜಿಕಲ್ ಇನ್‌ಸ್ಟಿಟ್ಯೂಟ್ ಬಹುಶಃ ಸರ್ ಎಂ. ವಿಶ್ವೇಶ್ವರಯ್ಯನವರ ಮುಂದಾಲೋಚನೆಯಿಂದ ಪ್ರಾರಂಭವಾದಂತಹ ಒಂದು ಸಂಸ್ಥೆ. ಅದು ಇವತ್ತು ದುಸ್ಥಿತಿಗೆ ಬಂದಿದೆ ಎಂದು ಹೇಳಿದರೆ, ಇನ್ನು ಈ ಕೈಗಾರಿಕಾ ಇಲಾಖೆಯು ಒಂದು ಪರಿಮಿತಿಯಲ್ಲಿ ನಡೆಯತಕ್ಕಂಥ ಬೇರೆ ಬೇರೆ ಈ ತರಬೇತಿ ಕೊಡತಕ್ಕಂಥ ಸಂಸ್ಥೆಗಳು ಏನಿವೆ ಅವುಗಳ ಸ್ಥಿತಿಯೂ ಕೂಡ ಅಷ್ಟೇ ಚಿಂತಾಜನಕವಾಗಿದೆ ಎಂಬುದನ್ನು ನೀವು ತಿಳಿದುಕೊಂಡರೆ ಒಳ್ಳೆಯದೆಂದು ನಾನು ನಿಮಗೆ ಸೂಚನೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನೆಟ್ಟೂರು ಟೆಕ್ನಿಕಲ್ ಟ್ರೈನಿಂಗ್ ಫೌಂಡೇಷನ್‌ನವರೂ ಕೂಡ ಉತ್ತಮವಾದ ತರಬೇತಿಯನ್ನು ಕೊಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ನಮ್ಮಲ್ಲಿ ಅಂತಹ ಇನ್ನೂ ಎರಡು ಸಂಸ್ಥೆಗಳನ್ನು ಈಗಾಗಲೇ ತೆರೆದಿದ್ದಾರೆ, ಆ ಎರಡೂ ಟ್ರೈನಿಂಗ್ ಸೆಂಟರ್ಸ್‌ನ್ನು ಪ್ರಾರಂಭ ಮಾಡಿದ್ದೀರಿ ಎಂದು ನಾನು ಕೇಳಿದ್ದೇನೆ. ಬಹುಶಃ ಎಸ್.ಎಸ್.ಎಲ್.ಸಿ. ಆದ ಮೇಲೆ ಹುಡುಗರಿಗೆ ಕೊಡತಕ್ಕಂಥ ಟ್ರೈನಿಂಗ್ ಅತ್ಯಂತ ಉತ್ತಮವಾದ ಟ್ರೈನಿಂಗ್. ಮಿಷನ್ ಟೂಲ್ಸ್‌ನಲ್ಲಿ ಅವರಿಗೆ ಟ್ರೈನಿಂಗ್ ಕೊಟ್ಟು ಮುಗಿದ ಮೇಲೆ ಹುಡುಗರಿಗೆ ೧೦೦೦ ರೂ. ಗಳ ವೇತನ ದೊರೆಯತಕ್ಕಂಥ ರೀತಿಯಲ್ಲಿ ಅವರು ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ತುಂಬಾ ಯೋಗ್ಯವಾದ ಇಂತಹ ಒಂದು ತರಬೇತಿಯನ್ನು ಆ ಸಂಸ್ಥೆಯವರು ಕೊಡುತ್ತಿದ್ದಾರೆ ಎಂದು ನಾನು ಕೇಳಿದ್ದೇನೆ. ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತಿದ್ದೇನೆ, ಅದನ್ನೇ ಮಾರ್ಗದರ್ಶನವನ್ನಾಗಿ ಇಟ್ಟುಕೊಳ್ಳುವುದರ ಮೂಲಕ ಇವತ್ತು ನಿಮ್ಮ ಪಾಲಿಟೆಕ್ನಿಕ್‌ಗಳು ಏನಿವೆ ಅದನ್ನು ರದ್ದು ಮಾಡಿದರೂ ಚಿಂತೆ ಇಲ್ಲ, ಇಂತಹ ಟ್ರೆಡಿಷನಲ್ ಕೋರ್ಸಸ್ ಇರತಕ್ಕಂಥ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಹೆಚ್ಚಿನ ರೀತಿಯಲ್ಲಿ ಇರಬೇಕು ಎಂದು ನಾನು ಹೇಳುತ್ತೇನೆ. ಇವತ್ತು ಅನೇಕ ಜನ ಪೊಲಿಟೆಕ್ನಿಕ್‌ಗಳಲ್ಲಿ ತರಬೇತಿಯನ್ನು ಹೊಂದಿದಂತಹ ಹುಡುಗರು ಅವರಿಗೆ ಕೆಲಸ ಸಿಕ್ಕದೇ ನಿರುದ್ಯೋಗಿಗಳಾಗಿ ಬೀದಿ ಬೀದಿ ಅಲೆಯುತಕ್ಕಂಥದ್ದನ್ನು ನಾವು ಇವತ್ತು ನೋಡುತ್ತಿದ್ದೇವೆ. ಎಸ್.ಎಸ್.ಎಲ್.ಸಿ ಆದ ಮೇಲೆ ಅವರಿಗೆ ಈ ರೀತಿ ತರಬೇತಿಯನ್ನು ಕೊಡುವುದಕ್ಕೆ ಅನುಕೂಲವಾಗುವ ಹಾಗೆ ನಮ್ಮ ರಾಜ್ಯದಲ್ಲಿ ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಅಂತಹ ಕೇಂದ್ರಗಳನ್ನು ತೆರೆಯುವುದಕ್ಕೆ ಪ್ರಯತ್ನ ಮಾಡುವುದು ಬಹಳ ಒಳ್ಳೆಯದು ಎಂದು ಸೂಚನೆ ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಈ ಕರ್ನಾಟಕ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಕೆಲಸವನ್ನು ನಾವು ಮೆಚ್ಚಿಕೊಳ್ಳುವುದಾದರೂ ಕೂಡ ಬೇರೆ ಬೇರೆ ರಾಜ್ಯಗಳಲ್ಲಿ ಅದರ ಬೆಳವಣಿಗೆಯ ದೃಷ್ಟಿಯಿಂದ ನೋಡುವುದಾದರೆ ಅದು ಅಷ್ಟು ವೇಗದಲ್ಲಿ ಹೋಗುತ್ತಾ ಇಲ್ಲ. ಇನ್ನು ಕರ್ನಾಟಕ ಫೈನಾನ್ಸ್ ಕಾರ್ಪೊರೇಷನ್‌ನವರು ಉತ್ತಮವಾದ ಕೆಲಸವನ್ನು ಮಾಡುತ್ತಿದ್ದರೂ ಕೂಡ ಬೇರೆ ರಾಜ್ಯಗಳಲ್ಲಿರತಕ್ಕಂಥಾದಕ್ಕೆ ಅದನ್ನು ಹೋಲಿಸಿ ನೋಡಿದರೆ ಅದು ಇನ್ನೂ ಶಕ್ತಿಮೀರಿ ಕೆಲಸ ಮಾಡಬೇಕಾಗಿದೆ. ಈ ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ಕಳೆದ ೨ ವರ್ಷಗಳಿಗಿಂತ ಈಚೆಗೆ ಸಾಕಷ್ಟು ಬೆಳವಣಿಗೆಯನ್ನು ಸಾಧಿಸಿದ್ದಾರೆ ಎನ್ನತಕ್ಕಂಥ ವಿಚಾರವನ್ನು ನೀವು ವರದಿಯಲ್ಲಿ ಹೇಳಿದ್ದೀರಿ. ಅದನ್ನು ನಾನು ನೋಡಿದ್ದೇನೆ. ಸುಮಾರು ೨ ಕೋಟಿ ರೂಪಾಯಿಗಳ ಒಳಗಡೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡು ಅದನ್ನು ಡೆವಲಪ್ ಮಾಡತಕ್ಕಂಥ ಕೆಲಸವನ್ನು ಅವರು ಮಾಡುತ್ತಿದ್ದಾರೆ. ನನಗೆ ಬಂದಿರತಕ್ಕಂಥ ವರದಿಯ ಆಧಾರದ ಮೇಲೆ ನಾನು ಈ ವಿಚಾರವನ್ನು

ಇಲ್ಲಿ ಹೇಳುತ್ತಿದ್ದೇನೆ. ಇದಕ್ಕಾಗಿ ಬ್ಯಾಕ್‌ವರ್ಡ್ ತಾಲ್ಲೂಕುಗಳಲ್ಲಿ ೭೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಮತ್ತು ಬೇರೆ ತಾಲ್ಲೂಕುಗಳಲ್ಲಿ ೧೩ ಲಕ್ಷ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡಿದ್ದೀರಿ ಎಂದು ನಾನು ಕೇಳಿದ್ದೇನೆ. ಆದರೂ ಇವತ್ತು ಈ ರಾಜ್ಯದಲ್ಲಿರತಕ್ಕಂಥ ೫೩ ಹಿಂದುಳಿದ ತಾಲ್ಲೂಕುಗಳ ಬೆಳವಣಿಗೆಯ ದೃಷ್ಟಿಯಿಂದ ಅಲ್ಲಿ ಇದರ ಕಾರ್ಯವ್ಯಾಪ್ತಿ ಇನ್ನೂ ಹೆಚ್ಚಿನ ರೀತಿಯಲ್ಲಿ ಆಗಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇನ್ನು ನಮ್ಮ ಕರ್ನಾಟಕ ರಾಜ್ಯದ ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಾರದು.

ಈಗ ನಮಗೆ ಸರ್ಕಾರದವರು ಕೊಟ್ಟಿರುವಂತಹ ಹಣ ಕೇವಲ ೧೦೦ ಲಕ್ಷ ರೂಪಾಯಿಗಳು ಮಾತ್ರ. ಆದರೆ ನಮಗೆ ಅವಶ್ಯಕತೆ ಇರುವಂತದ್ದು ೪೫೬ ಲಕ್ಷ ರೂಪಾಯಿಗಳು. ಮತ್ತೆ ೧೯೮೨–೮೩ನೇ ಇಸವಿಯಲ್ಲಿ ಅವರಿಗೆ ಎಷ್ಟು ಹಣ ಬೇಕಾಗಿದೆಯೋ ಅಷ್ಟು ಹಣವನ್ನು ತಾವು ಅವರಿಗೆ ಕೊಡಲಿಲ್ಲ. ಸರ್ಕಾರದವರು ಈಗ ತೆಗೆದುಕೊಂಡಿರುವಂತಹ ಬೇರೆ ಬೇರೆ ಕೆಲಸಗಳು ಏನು ಇವೆ ಆ ಎಲ್ಲಾ ಕೆಲಸ ಕಾರ್ಯಗಳನ್ನು ಸಹ ಮಾಡಬೇಕಾದರೆ ಕನಿಷ್ಟ ಪಕ್ಷ ಈಗ ೪೫೬ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅಂದರೆ ಸರ್ಕಾರದವರು ಈಗ ಕೊಟ್ಟಿರುವ ಹಣ ಕೇವಲ ೧೦೦ ಲಕ್ಷ ರೂಪಾಯಿಗಳು ಮಾತ್ರ. ಇನ್ನು ೩೫೦ ಲಕ್ಷ ರೂಪಾಯಿಗಳು ಕೊಡಬೇಕಾಗುತ್ತದೆ ಈ ಹಣವನ್ನು ಸರ್ಕಾರದವರು ಕೊಡದಿದ್ದರೆ ಅವರು ಈ ಎಲ್ಲಾ ಕೆಲಸ ಕಾರ್ಯಗಳನ್ನು ಯಾವ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ಆದರೆ ಇದರ ಬಗ್ಗೆ ನಾನು ತಮಗೆ ಒಂದು ಮಾತನ್ನು ಹೇಳಬಯಸುತ್ತೇನೆ ಅದು ಏನೆಂದರೆ ಈ small scale industrial unitsನಲ್ಲಿ ಕೆಲವು ಬೋಗಸ್ ಯೂನಿಟ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಕೆಲವಾರು ಆರ್ಟಿಕಲ್ಸ್ ಕೂಡ ಬರೆದಿದ್ದಾರೆ. ಈ ಒಂದು ಸ್ಮಾಲ್ ಸ್ಕೇಲ್ ಸಂಸ್ಥೆಯಲ್ಲಿ ಯಾವ ರೀತಿಯಲ್ಲಿ ವ್ಯವಹಾರವನ್ನು ಮಾಡುತ್ತಾರೆ ಎನ್ನುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮತ್ತು ಇದರಲ್ಲಿ ಯಾವ ರೀತಿಯ ಉತ್ಪಾದನೆಯೂ ಸಹ ಸರ್ಕಾರಕ್ಕೆ ಬರುತ್ತಿಲ್ಲ, ಬಹುಶಃ ನಮ್ಮ ಮಾಜಿ ಮುಖ್ಯಮಂತ್ರಿಗಳಾದಂತಹ ಶ್ರೀಮಾನ್ ದೇವರಾಜ ಅರಸ್‌ರವರು ಈ ಸದನದಲ್ಲಿ ಕುಳಿತುಕೊಂಡಿದ್ದಾಗ ಈ ವಿಷಯದ ಮೇಲೆ ಪ್ರಸ್ತಾಪ ಮಾಡಿದಾಗ ನಮ್ಮ ಈಗಿನ ಮುಖ್ಯಮಂತ್ರಿಗಳಾದಂತಹ ಶ್ರೀಮಾನ್ ಗುಂಡೂರಾವ್‌ರವರು ಹೇಳಿದರು ಈ ಒಂದು ಇಲಾಖೆಯಲ್ಲಿ ಹೆಚ್ಚಿನ ಉತ್ಪಾದನೆ ಮಾಡುವುದಕ್ಕಾಗಿ ಸರ್ಕಾರದವರು ತಮ್ಮ ಶಕ್ತಿಮೀರಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಆದರೆ ಇವತ್ತು ಆ ಎಲ್ಲಾ bogus units weed-out ಮಾಡುವ ಸಂಬಂಧವಾಗಿ ಕೆಲವು ಮಾತನ್ನು ಸಹ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳಲ್ಲಿ ನಡೆಯುತ್ತಿರುವ ಕಾರ್ಯ ವ್ಯಾಪ್ತಿಗೆ ಸರ್ಕಾರವೇ ಹೊಣೆ ಎಂದು ನಾನು ಈ ಸಂದರ್ಭದಲ್ಲಿ ನೇರವಾಗಿ ಆಪಾದನೆ ಮಾಡುತ್ತೇನೆ. ಮತ್ತು ಈ ಸಂಸ್ಥೆಗಳಲ್ಲಿ ಉತ್ಪಾದನೆ ಸರಿಯಾದಂತಹ ರೀತಿಯಲ್ಲಿ ಆಗುವಂತಹ ಯಶಸ್ವಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಸಂಸ್ಥೆಗಳಿಗೆ ಹೆಚ್ಚು ಶಕ್ತಿಯನ್ನು ಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಸ್ವಾಮಿ, ಇವತ್ತು ನಮ್ಮ ರಾಜ್ಯ ಸರ್ಕಾರದ ಎಲ್ಲಾ ಸಂಸ್ಥೆಗಳೂ ಕೂಡ ವ್ಯಾಪಾರಿ ಸಂಸ್ಥೆಗಳಾಗಿವೆ. ಇವುಗಳ ಬಗ್ಗೆ ನಾನು ನನ್ನ ಬಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುವ ಮುಂಚಿತವಾಗಿ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅದು ಏನೆಂದರೆ ನಮ್ಮ ರಾಷ್ಟ್ರೀಯ ನೀತಿ ಎಂದು ನಾವು ತಿಳಿದುಕೊಳ್ಳಬೇಕು. ಅದರಲ್ಲಿ ನಮ್ಮ ರಾಷ್ಟ್ರೀಯ ಸಿಮೆಂಟ್ ಡಿಸ್ಟ್ರಿಬ್ಯೂಷನ್ ನೀತಿ ಎಂದು ನಾವು ಏನು ಹೇಳುತ್ತಿದ್ದೇವೆ. ಹಾಗೆ ಆದರೆ ಅದರ ಬಗ್ಗೆ great economists like Palkhiwala ಬೆಂಗಳೂರಿನಲ್ಲಿ ಒಂದು ಮಾತನ್ನು ಹೇಳಿದ್ದಾರೆ ಆದರೆ ನಾನು ವಿಧಾನಸೌಧಕ್ಕೆ ಬಂದು ಅವರ ಭಾಷಣವನ್ನು ಕೇಳಲಿಲ್ಲ. ಆದರೆ ಪತ್ರಿಕೆಯಲ್ಲಿ ಬಂದಿದ್ದನ್ನು ನಾನು ನೋಡಿದ್ದೇನೆ. ಅವರು ತಮ್ಮನ್ನು ಮೆಚ್ಚಿಕೊಂಡಿದ್ದಾರೆ. ಆದರೆ ಇದರಲ್ಲಿ ಪರಿಣಾಮಕಾರಿಯಾದಂತದ್ದು ಯಾವುದು ಇಲ್ಲ. ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಆದರೆ ತಾವು ಇವತ್ತು ಡಾಲ್‌ರ್ ಪಾಲಿಸಿ ಸಿಮೆಂಟ್ ಡಿಸ್ಟ್ರಿಬ್ಯೂಷನ್ ಮಾಡುತ್ತಿರುವುದರಿಂದ ಅಲ್ಲಿ ಉತ್ಪತ್ತಿಯಾಗುತ್ತಿರುವ ಸಿಮೆಂಟ್ ಎಲ್ಲಾ ಈ ರೀತಿಯಾಗಿ ಡಿಸ್ಟ್ರಿಬ್ಯೂಷನ್ ಮಾಡಿ ಹೆಚ್ಚು ಹಣವನ್ನು ಅವರು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಇದನ್ನು ಮಾಡ್ರನೈಜೇಷನ್ ಮಾಡಿ ಒಂದು ಎಕ್ಸ್‌ಪ್ಯಾನ್‌ಷನ್ ಪ್ರೋಗ್ರಾಂ ಹಾಕಿಕೊಂಡು

ತಾವು ಕೆಲಸ ಮಾಡುವುದಾದರೆ ಹೆಚ್ಚು ಹಣ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ಡಾಲರ್ ಪಾಲಿಸಿ ಲೆವಿ ಸಿಮೆಂಟ್ ಈಗ ಸುಮಾರು ೩೦ ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದರೆ ಆದೇ ಸಿಮೆಂಟ್ ಓಪನ್ ಮಾರ್ಕೆಟ್‌ನಲ್ಲಿ ೫೫ ರೂಪಾಯಿಗಳಿಂದ ಹಿಡಿದು ಇನ್ನು ಹೆಚ್ಚು ಮಾರಾಟ ಮಾಡುತ್ತಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ದೊಡ್ಡ ದೊಡ್ಡ ಉದ್ದಿಮೆದಾರರಿಗೆ ಬೊಜ್ಜು ಬೆಳಸಿ ಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಇಂತಹ ಒಂದು ಘೋರ ಅನ್ಯಾಯವನ್ನು ನಮ್ಮ ಸರ್ಕಾರದವರು ಮಾಡುತ್ತಿದ್ದಾರೆ ಎನ್ನುವ ಮಾತನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳಬಯಸುತ್ತೇನೆ. ಸ್ವಾಮಿ ಇವತ್ತು ನಮ್ಮ ಬೆಂಗಳೂರು ನಗರದಲ್ಲಿ ಒಂದು ಮೂಟೆ ಸಿಮೆಂಟ್ ಬೇಕಾದರೆ ೭೨ ರೂಪಾಯಿಗಳು ಕೊಟ್ಟರೂ ಸಹ ಸಿಗುವುದಿಲ್ಲ. ಅದು ಒಂದು ರೀತಿಯಲ್ಲಿ ಏನಾಗಿದೆ ಎಂದರೆ it is a Racket by itself. ಆದರೆ ನಾನು ಇವತ್ತು ಒಂದು ಮಾತನ್ನು ಕೇಳುವುದಾದರು ಏನೆಂದರೆ ಸಿಮೆಂಟ್ ಫ್ಯಾಕ್ಟರಿಯಲ್ಲಿ ೩೦ ಪರ್ಸೆಂಟ್ ಟೋಟಲ್ ಪ್ರೊಡಕ್ಷನ್‌ನಲ್ಲಿ ಕೊಡುವ ಒಂದು ಪದ್ಧತಿಯನ್ನು ಇಟ್ಟಿದ್ದಾರೆ. ಆದರೂ ಅದನ್ನು ತಾವು ಕೊಡುತ್ತಿಲ್ಲ. ಆದ್ದರಿಂದ ದಯಮಾಡಿ ತಾವು ಅಲ್ಲಿ ಕೆಲಸ ಮಾಡಿಸಿ ಹೆಚ್ಚು ಉತ್ಪಾದನೆ ಮಾಡುವಂತಾಗಬೇಕು. ಅದಕೆ ಸಕ್ಕರೆ ಫ್ಯಾಕ್ಟರಿಯಲ್ಲಿ ಅನೇಕ ರೀತಿಯ ವ್ಯವಸ್ಥೆಗಳು ಇವೆ. ಇವತ್ತು ಒಬ್ಬ ಸಿಮೆಂಟ್ ಉದ್ದಿಮೆದಾರ ಕೋಟ್ಯಾಂತರ ರೂಪಾಯಿಗಳನ್ನು ಗಳಿಸುತ್ತಿದ್ದಾನೆ, ೧೯೮೦ನೇ ಇಸವಿಯಿಂದ ಸುಮಾರು ೨ ಸಾವಿರ ಟನ್ ಸಿಮೆಂಟ್ ಮಾರಾಟ ಮಾಡಿದ್ದಾರೆ. ಈ ಸಿಮೆಂಟ್ ಉದ್ದಿಮೆದಾರರ ಹಿಡಿತಕ್ಕೆ ಸಿಕ್ಕಿ ಡೆಲ್ಲಿಯಲ್ಲಿ ಶುಗರ್ ಲಾಬಿ ಮಾಡಿದ್ದಾರೆ. ಆದರೆ ಅದೇ ರೀತಿಯಲ್ಲಿ ಒಂದು ಮಾತನ್ನು ಹೇಳುವುದಾದರೆ cement lobby is also a powerful lobby. ಇವತ್ತು ಸಿಮೆಂಟ್ ಸಿಗದೆ ನೂರಾರು ಜನರಿಗೆ ತೊಂದರೆಯಾಗಿದೆ. ಒಂದು ಮೂಟೆ ಸಿಮೆಂಟ್ ಬೇಕಾದರೆ ಅತನು ೭೨ ರೂಪಾಯಿಗಳಿಂದ ಹಿಡಿದು ೭೫ ರೂಪಾಯಿಗಳವರಿವಿಗೆ ಕೊಡಬೇಕಾಗುತ್ತದೆ. ಈ ರೀತಿಯಾದರೆ ಸಾರ್ವಜನಿಕರು ಯಾವ ರೀತಿಯಲ್ಲಿ ಬದುಕಬೇಕು ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಸ್ವಾಮಿ ಈ ಒಂದು ಉರುಳು ಇಲ್ಲದ ನೀತಿಯನ್ನು ಯಾವ ರಾಜಕೀಯ ಪಕ್ಷಗಳು ಕೂಡ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದನ್ನು ಯಾವುದೇ ಒಂದು ಪವರ್‌ಫುಲ್ ರಾಜಕೀಯ ಪಕ್ಷಗಳು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ ಆ ಒಂದು ನೀತಿಯನ್ನು ನೀವು ಒಪ್ಪಿಕೊಳ್ಳಬಹುದು. ಸ್ವಾಮಿ ಇವತ್ತು ಅಮ್ಮಸಂದ್ರ ಸಿಮೆಂಟ್ ಫ್ಯಾಕ್ಟರಿಯಲ್ಲಿ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್ ಇದ್ದಾರೆ. ಅವರಿಗೆ ತಾವು ತಿಂಗಳೊಂದಕ್ಕೆ ಕೊಡುವ ಸಂಬಳ ಎಷ್ಟು? ಅದರ ಒಂದು ಪರಿಮಿತಿಯಲ್ಲಿ ನಾವು ಲೆಕ್ಕ ಮಾಡಿ ಹೇಳುವುದಾದರೆ Managing Director's salary including all perquisites come to Rs. 2 lakhs a year. ಬಹುಶಃ ನಮ್ಮ ಮುಖ್ಯ ಕಾರ್ಯದರ್ಶಿಗಳಿಗೆ ತಿಂಗಳೊಂದಕ್ಕೆ ೩ ಸಾವಿರ ರೂಪಾಯಿಗಳ ಸಂಬಳ ಕೊಡಬಹುದು. ಅದೇ ಒಬ್ಬ ಪ್ರಧಾನ ಮಂತ್ರಿಗೆ ತಿಂಗಳೊಂದಕ್ಕೆ ೫ ಸಾವಿರ ರೂಪಾಯಿಗಳು, ರಾಷ್ಟ್ರಪತಿಗಳಿಗೆ ೧೦ ಸಾವಿರ ರೂಪಾಯಿಗಳು ಮಾಡಿದ್ದೀರಾ. ಆದರೆ ನಾನು ಇದರ ಬಗ್ಗೆ ಒಂದು ಉದಾಹರಣೆಯನ್ನು ಹೇಳವುದಾದರೆ ನಮ್ಮ ಅಮ್ಮಸಂದ್ರದಲ್ಲಿ ಇರುವಂತಹ ಸಿಮೆಂಟ್ ಫ್ಯಾಕ್ಟರಿಯ ಮ್ಯಾನೇಜಿಂಗ್ ಡೈರೆಕ್ಟರ್‌ಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಿಕೊಟ್ಟು ಅವರು ಮಾಡುವ ಕೆಲಸವಾದರೂ ಏನು? ಯಾವ ಕೆಲಸ ಕಾರ್ಯಗಳನ್ನು ಕೈಗೊಳ್ಳಬೇಕು ಎನ್ನುವ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. How many man days are lost on account of strikes.? ಅವರು ಯಾರೇ ಆಗಲಿ, ಯಾವುದೇ ಪಕ್ಷದ ಪ್ರಧಾನ ಮಂತ್ರಿಯಾಗಿರಲಿ ದೇಶದ ಜನತೆಗೆ ಮೋಸ ಮಾಡತಕ್ಕಂಥ ಅಪ್ರಮಾಣಿಕತೆಯ ರಾಜಕಾರಣವನ್ನು ಮಾಡಿಕೊಂಡು ಬರುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. one or the other I should even say all political parties today all over the country are slaves to these monopoly houses. ಆದರೆ ಇದನ್ನು ಯಾರೂ ಮುರಿಯುವುದಕ್ಕೆ ಪ್ರಯತ್ನ ಮಾಡಿಲ್ಲ.

ಶ್ರೀ ಶೇರ್‌ಖಾನ್.—ಇದನ್ನು ಒಪ್ಪಿಕೊಂಡರೆ ಸಂತೋಷ. What is the remedy for that and suggestion from your side?

ಶ್ರೀ ದೇವೇಗೌಡ.—ಆ ದಿಸೆಯಲ್ಲಿ ಜನತಾ ಸರ್ಕಾರ ಅಧಿಕಾರದಲ್ಲಿದ್ದಾಗ ಪ್ರಯತ್ನ ಮಾಡಿತ್ತು. ಅವರು ಜನತಾ ಸರ್ಕಾರವನ್ನು ನಿಂದನೆ ಮಾಡಬಹುದು. ನಿಂದೆ ಮಾಡಿದರೂ ಚಿಂತೆ ಇಲ್ಲ. I am

not going to defend for them but they did their best to establish rural industries, village industries and small industries. That was a historic decision taken by the Janata Party while it was in power...they have announced this industrial policy. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರವರ ಕಚ್ಚಾಟದಲ್ಲಿ ಏನೋ ಆಗಿ ಹೋಯಿತು. ಇದು ರಾಷ್ಟ್ರದ ದುರ್ದೈವ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಈ ಹಿನ್ನಲೆಯಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಒಮ್ಮೆ ಅವರೆಲ್ಲರೂ ಆತ್ಮಪರೀಕ್ಷೆಗೆ ಗುರಿಪಡಿಸಿ ಕೊಂಡರೆ ಒಳ್ಳೆಯದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು, ಹಾಸನದಲ್ಲಿ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಶಾಪ್ ಸೇರಿಕೊಂಡು KIMCO ಅಂತ ಒಂದು ಸಂಸ್ಥೆ ಮಾಡಿದರು. ಯಾವ ತಪ್ಪಿಗೋಸ್ಕರ ಇವತ್ತು ಆ ಸಂಸ್ಥೆ ನಷ್ಟವನ್ನು ಅನುಭವಿಸತಕ್ಕಂಥ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಹೇಳಿದರೆ, ಅಲ್ಲಿರತಕ್ಕಂಥ ಕಾರ್ಮಿಕರ ತಪ್ಪು ಏನೂ ಇಲ್ಲ. ಅವರು ಹಲವಾರು ಮನವಿಗಳನ್ನು ಕೊಟ್ಟಿದ್ದಾರೆ. ಅವರಿಗೆ raw materials ಒದಗಿಸಲಿಕ್ಕೆ ಶಕ್ತಿ ಇಲ್ಲ, ಬಂಡವಾಳ ಆಡಳಿತ ನಡೆಸುವವರಿಗೆ ಇಲ್ಲ. ಸುಮಾರು ಮುನ್ನೂರು ಮೆಟ್ರಿಕ್ ಟನ್ ಪ್ರೊಡಕ್ಷನ್ ಒಂದು ವರ್ಷಕ್ಕೆ ೧೯೭೭–೭೮ರಲ್ಲಿ ೩೦೬ ಮೆಟ್ರಿಕ್ ಟನ್ ೧೯೭೯–೮೦ರಲ್ಲಿ ೧೧೭೨ ಮೆಟ್ರಿಕ್ ಟನ್ ಮತ್ತು ೧೯೮೧–೮೨ರಲ್ಲಿ ೨೪೦ ಮೆಟ್ರಿಕ್ ಟನ್. ಇವತ್ತು ಅಲ್ಲಿ ಪ್ರತಿ ತಿಂಗಳು ೧೫೦ ಟನ್ ಮಿನಿಮಮ್ ಪ್ರೊಡಕ್ಷನ್ ಕೊಡಲಿಕ್ಕೆ ಅಲ್ಲಿನ ಕಾರ್ಮಿಕರಿಗೆ ಶಕ್ತಿ ಇದೆ. ಅಲ್ಲಿ ಸ್ವಲ್ಪ modernise ಮಾಡಿ, ಇನ್ನಷ್ಟು ಹಣವನ್ನು ಬಂಡವಾಳವನ್ನಾಗಿ ಹೂಡಿ ಈ ಸಂಸ್ಥೆ ಮುನ್ನಡೆಯಲು ಮಾಡಬಹುದು. ಮಾನ್ಯ ರಾಮೇಗೌಡರು ಹೇಳಿದರು, ಇಂತಹ ಒಂದು ಸಂಸ್ಥೆ ರೈತನಿಗೆ ಉಪಯುಕ್ತವಾದ ಉಪಕರಣಗಳನ್ನು ತಯಾರು ಮಾಡ ತಕ್ಕಂಥ ಸಂಸ್ಥೆಯನ್ನು ಸಂಪೂರ್ಣವಾಗಿ ಮುಳುಗಿಸಲಿಕ್ಕೆ ಹೊರಟಿದ್ದಾರೆ ಎಂದು ಹೇಳಿದ್ದಾರೆ. ಮಂಡ್ಯ ದಲ್ಲಿ Acetate Factory ಯ ಗತಿ ಹೀಗೆಯೇ ಆಯಿತು ಎಂಬ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ ಇವತ್ತು ಈ ಒಂದು ಸಂಸ್ಥೆ ರೈತನ ದೈನಂದಿನ ಬದುಕಿಗೆ ಸಂಬಂಧಪಟ್ಟಹಾಗೆ ಉಪಕರಣಗಳನ್ನು ತಯಾರು ಮಾಡುವ ಈ ಸಂಸ್ಥೆಗೆ ಸಾಕಷ್ಟು ಬಂಡವಾಳ ಹೂಡಿ ಅದನ್ನು ಫಲಪ್ರದವಾಗಿ ನಡೆಸತಕ್ಕಂಥ ಸಂಸ್ಥೆಯಾಗಿ ಮಾಡಲಿಕ್ಕೆ ಸಾಧ್ಯವಿಲ್ಲವೇ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. Modern equipments ಗಳನ್ನು ತೊಡಗಿಸಬೇಕಾದ ಬಂಡವಾಳ ಕೊಟ್ಟು ಸಾಕಷ್ಟು raw materials ಖರೀದಿಮಾಡಿದರೆ ಇದು ಸಾಧ್ಯವಾಗುತ್ತದೆ. ಇದು ಇಡೀ ರಾಜ್ಯಕ್ಕೆ ಇರತಕ್ಕಂಥ ಒಂದು ಸಂಸ್ಥೆ. ಇವತ್ತು ಬೆಂಗಳೂರಿನಲ್ಲಿ ನಾಯರ್ ಎನ್ನತಕ್ಕಂಥ ಒಬ್ಬ ಖಾಸಗಿ ವ್ಯಕ್ತಿಯ ಸಂಸ್ಥೆ ರೈತನಿಗೆ ಬೇಕಾದ ಹ್ಯಾಂಡ್ ಟೂಲ್ಸ್ ಮೊದಲಾದ ಉಪಕರಣಗಳನ್ನು ತಯಾರು ಮಾಡುತ್ತಿದ್ದು, ೫ ಕೋಟಿ ರೂಪಾಯಿ ಯಷ್ಟು ಉಪಕರಣಗಳನ್ನು ಪರದೇಶಕ್ಕೆ ರಫ್ತು ಮಾಡುತ್ತಿದೆ. ಒಬ್ಬ ಸಾಮಾನ್ಯವಾದ ಖಾಸಗಿ ವ್ಯಕ್ತಿ ಅವರ ಫ್ಯಾಕ್ಟರಿ ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿದೆ. ಇಂತಹ ಸಾಧನೆಯನ್ನು ಮಾಡಬೇಕಾದರೆ, ಹೇಗೆ ನೋಡಿಕೊಂಡು ಬರಬಹುದು. ನಾಚಿಕೆ ಪಟ್ಟುಕೊಳ್ಳಬೇಕು ಈ ಸರ್ಕಾರ. ಸರ್ಕಾರದ ಅಡಿ ಯಲ್ಲಿ ನಡೆಯುತಕ್ಕಂಥ ಈ ಸಂಸ್ಥೆ ಪ್ರತಿವರ್ಷ ೨೫–೩೦ ಲಕ್ಷ ರೂಪಾಯಿಗಳಷ್ಟು ನಷ್ಟವನ್ನು ಅನುಭ ವಿಸುತ್ತದೆ ಎಂದರೆ ಅರ್ಥ ಏನು? ಇದೇನೂ technically sophisticated factory ಅಲ್ಲ ಸರ್ಕಾರಕ್ಕೆ ಇದರ ಬಗ್ಗೆ ಸ್ವಲ್ಪವಾದರೂ ಕಾಳಜಿಯಾಗಲೀ, ಆಸಕ್ತಿಯಾಗಲೀ ಇದೆಯೋ ಎಂದು ಬಹಳವಾಗಿ ನೊಂದುಕೊಂಡು ನಾನು ಕೇಳುತ್ತಿದ್ದೇನೆ. ಅವರಿಗೆ ರೈತನ ಬಗ್ಗೆ ಪ್ರಾಮಾಣಿಕವಾಗಿ ಆಸಕ್ತಿ ಇದ್ದರೆ, ಆಧುನಿಕ ಉಪಕರಣಗಳನ್ನು ಅಲ್ಲಿ ಒದಗಿಸಿಕೊಡಬೇಕು. ಹೆಚ್ಚು ಬಂಡವಾಳವನ್ನು ಹೂಡಿ ಫಲಪ್ರದವಾಗಿ ಈ ಕಾರ್ಖಾನೆ ಕೆಲಸ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅವರಿಗೆ ಸೂಚನೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಒಬ್ಬರು ಮಾನ್ಯ ಸದಸ್ಯರು.—ಇದರ ಬಗ್ಗೆ ತಮ್ಮದೇನಾದರೂ ಸಲಹೆ ಸೂಚನೆಗಳು ಇದೆಯಾ ಸ್ವಾಮಿ?

ಶ್ರೀ ದೇವೇಗೌಡ.—ರಾ ಮೆಟೀರಿಯಲ್ಸ್ ಒದಗಿಸಿಕೊಡಬೇಕು. ಒಬ್ಬ ಅನುಭವಿಯಾದಂತಹ ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕು. ನಮ್ಮ ಎಸ್ಟಿಮೇಟ್ ಕಮಿಟಿ ಬೇಕಾದರೆ ಹೋಗಿ ನೋಡಬಹುದು. ಇದೇನೂ sophisticated industry ಅಲ್ಲ. ಬೆಂಗಳೂರಿನ ವೈಟ್‌ಫೀಲ್ಡ್

ಬಳಿ ಶ್ರೀ ನಾಯರ್ ಎನ್ನುವರು ಖಾಸಗಿಯಾಗಿ ಕಾರ್ಖಾನೆಯನ್ನು ಹೊಂದಿದ್ದು ಐದು ಕೋಟಿ ರೂಪಾಯಿ ಮೌಲ್ಯದ ಉಪಕರಣಗಳನ್ನು ಹೊರದೇಶಕ್ಕೆ ರಫ್ತು ಮಾಡುತ್ತಿದ್ದಾರೆ. ಹಾಗೆಯೇ ಮಾನ್ಯ ಸಚಿವರಾದ ಶ್ರೀಮಾನ್ ವೈ. ರಾಮಕೃಷ್ಣ ಅವರ ತಾಲೂಕಿನಲ್ಲಿರುವ ಡಚ್ ಸಂಸ್ಥೆ ಅದು ಮುಂದು ವರೆಯುತ್ತಿರುವುದರ ಬಗ್ಗೆ ಕೇಳಿದ್ದೇನೆ. ಆದರೆ ಈ ಒಂದು ಸಂಸ್ಥೆ ಸುಮಾರು ೧೮ ಕೋಟಿ ರೂಪಾಯಿಗಳನ್ನು ಉಪಯುಕ್ತವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದರಲ್ಲಿ ವಿಫಲ ವಾಗಿರುವುದು ವಿಷಾದನೀಯ. ಸಮಾಜದಲ್ಲಿ ಅತ್ಯಂತ ಕಷ್ಟಕ್ಕೆ ಒಳಗಾಗಿರತಕ್ಕಂಥವರು–rural artisans, craftsman, leather workers, small industries and handloom weavers...ಇವರುಗಳಿಗೆ ಅನುಕೂಲ ಒದಗಿಸಿಕೊಡಬೇಕು ಎಂದು ಹೇಳಿ ಈ ಒಂದು ನೆರವು ನಮಗೆ ದೊರೆತಾಗ ಅದನ್ನು ಎಷ್ಟರಮಟ್ಟಿಗೆ ಅದನ್ನು ಉಪಯೋಗ ಮಾಡಿಕೊಂಡಿದ್ದಾರೆ ಎಂದು ಹೇಳಿದರೆ ಬಹುಶಃ ನಾವು ತಲೆತಗ್ಗಿಸಬೇಕಾದಂತಹ ವಿಚಾರವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಐದು ಪರ್ಸೆಂಟ್ ಇಂಟರೆಸ್ಟ್ ಎಂದು ಹೇಳಿದ್ದಾರೆ. Under the project, Chawki rearing buildings are being constructed by the Department, while loan is sanctioned to the individual beneficiaries at an interest rate of 5.5 percent repayable in 10 equal annuities after a moratorium of 2 years for construction of living-cum-reeling, rearing and reeling rearing houses'' ಇದನ್ನು ತಮ್ಮ ವಾರ್ಷಿಕ ವರದಿಯಲ್ಲಿ ಹೇಳಿ ಒಂದು ವರ್ಷದ ಅವರ ಸಾಧನೆಯನ್ನು ಇದರಲ್ಲಿ ಹೇಳಿದ್ದಾರೆ. ಇತ್ತೀಚೆಗೆ ಇದನ್ನು ತೆಗೆದುಕೊಂಡು ಹೋಗಿ ಲ್ಯಾಂಡ್ ಆರ್ಮಿಗೆ ಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ. ಇದರಿಂದ ಏನಾದರೂ ಮುಕ್ತಿ ಸಿಗುತ್ತದೆ ಎಂದು ತಿಳಿದುಕೊಂಡಿದ್ದರೆ ನಾನು ಒಂದು ಮಾತನ್ನು ಹೇಳುತ್ತೇನೆ, ಅವರು ಮೂರ್ಖರ ಜಗತ್ತಿನಲ್ಲಿ ಇರುತ್ತಾರೆ ಅಷ್ಟೆ. ನಾನು ಲ್ಯಾಂಡ್ ಆರ್ಮಿ ಬಗ್ಗೆ ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಒಂದು ವರ್ಷ ಕಳೆದುಹೋಗಿದೆ. You are unable to spend even 20–25 lakhs. ಇಂತಹ ಒಂದು ಅತ್ಯಂತ ಉತ್ತಮ ವಾದಂತಹ ಯೋಜನೆಗೆ ವಿದೇಶಿ ನೆರವು ಪಡೆದು ನಮ್ಮ ರಾಜ್ಯದಲ್ಲಿರತಕ್ಕಂಥ, ಸಮಾಜದಲ್ಲಿ ಕುಗ್ಗಿ ಹೋಗಿರತಕ್ಕಂಥ ಜನರು ಯಾರು ಚರ್ಮ ಹದಮಾಡುವವರು ಇದ್ದಾರೆ. ೧೯೭೨ರಲ್ಲಿ ಬೆಳಗಾಂ ಸಂಕೇಶ್ವರ ಚುನಾವಣೆ ಸಮಯದಲ್ಲಿ

೫–೦೦ ಪಿ. ಎಂ.

ಮಾಜಿ ಮುಖ್ಯ ಮಂತ್ರಿಗಳು, ಮಾಜಿ ಅರ್ಥ ಸಚಿವರು ನಾವೆಲ್ಲಾ ಹೋದೆವು. ಒಂದು ಕೇರಿಗೆ ಹೋದರೆ ಅಲ್ಲಿ ಚರ್ಮ ಹದ ಮಾಡುವವರು, ಢೋರ್ ಸಮಾಜ ಎಂದು ಏನು ಕರೆಯುತ್ತೇವೆ ಅಲ್ಲಿ ನಾವು ಕರ್ಚೀಫಿನಲ್ಲಿ ಮೂಗು ಮುಚ್ಚಿಕೊಂಡು ಒಳಗಡೆ ಹೋದೆವು. ಅಲ್ಲಿ ಚರ್ಮವನ್ನು ಮರದ ಚಕ್ಕೆ ಯಲ್ಲಿ ಹಾಕಿದ್ದರು, ಅದರ ತುಂಬ ವಾಸನೆ, ಅಲ್ಲಿ ಕುಳಿತುಕೊಳ್ಳಲಿಕ್ಕೆ ಕೂಡ ಆಗುವುದಿಲ್ಲ. ಒಂದು ನಿಮಿಷ ಕೂಡ ನಿಂತುಕೊಳ್ಳಲಿಕ್ಕೆ ಕೂಡ ಆಗುವುದಿಲ್ಲ. ಪಾಪ, ಮಾಜಿ ಮುಖ್ಯ ಮಂತ್ರಿಗಳು ಅಲ್ಲಿ ನಿಂತುಕೊಳ್ಳಲಿಕ್ಕೆ ಆಗದೆ ಒಂದು ಸೆಕೆಂಡ್‌ನಲ್ಲಿ ಹಿಂದೆ ಬಂದು ಬಿಟ್ಟರು. ನಾವು ಆ ಒಂದು ಕೇರಿಗೆ ಹೋಗಿದ್ದೆವು. ಅಂತಹ ಸಮಾಜದಲ್ಲಿ ಅತ್ಯಂತ ಹೀನ ಸ್ಥಿತಿಯಲ್ಲಿರತಕ್ಕ ವ್ಯಕ್ತಿಗಳನ್ನು ಮೇಲಕ್ಕೆ ಎತ್ತ ತಕ್ಕಂಥದ್ದಕ್ಕೆ, ಸಂಪೂರ್ಣವಾದ ಹಣವನ್ನು ತೊಡಗಿಸುವುದಕ್ಕೆ ನಿಮಗೆ ನೆರವು ಸಿಕ್ಕಿದರೆ, ಒಂದು, ಒಂದೂಕಾಲು ವರ್ಷವಾಯಿತು, ಸರ್ಕಾರದ ಸಾಧನೆ ಬಗ್ಗೆ ನಾವು ಮೆಚ್ಚಿಕೊಳ್ಳುತ್ತೇವೆ, ರಾಜಕೀಯ ಭಾಷಣವನ್ನು ನಿರರ್ಗಳವಾಗಿ ಹೊಡೆದು ಮನೆಗೆ ಹೋಗತಕ್ಕಂಥ ಪ್ರವೃತ್ತಿ ಬೆಳೆಸಿಕೊಂಡರೆ ಏನೂ ಪ್ರಯೋಜನವಾಗುವುದಿಲ್ಲ. ಅವರು ಎರಡನೇ ಹಂತದಲ್ಲಿ ಸೆಕೆಂಡ್ ಫೇಸ್‌ನಲ್ಲಿ ಹೆಲ್ಪ್ ಮಾಡಬೇಕು ಎಂದು ಮುಂದೆ ಬಂದಿದ್ದಾರೆ. ಫಸ್ಟ್ ಫೇಸ್‌ನಲ್ಲಿ ಕೊಟ್ಟಂಥ ೧೮ ಕೋಟಿ ರೂಪಾಯಿಗಳನ್ನು ನೀವು ಉಪಯೋಗ ಮಾಡಲಿಕ್ಕೆ ಸಾಧ್ಯವಾಗಿಲ್ಲ ಎಂದರೆ ಇದಕ್ಕೆ ಯಾರು ಹೊಣೆ ಎನ್ನುವುದನ್ನು ತಾವೇ ಹೇಳ ಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಯಾವು ಯಾವುದಕ್ಕೋ ಖರ್ಚು ಮಾಡುತ್ತೀರಿ, ಕನ್ನಡ ವಿಶ್ವ ಸಮ್ಮೇಳನ ಮಾಡುತ್ತಿದ್ದೀರಿ, ತಮಿಳುನಾಡಿನಲ್ಲಿ ಎಂ.ಜಿ.ಆರ್. ಮಾಡಿದರು ಎಂದು ನೀವೂ ಮಾಡಬೇಕು, ಅದಕ್ಕೆ ೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ. ಅಲ್ಲಿ ಒಬ್ಬ ಚೀಫ್ ಇಂಜಿನಿಯರನ್ನು ನೇಮಕ ಮಾಡುತ್ತೀರಿ, ಪೋಸ್ಟ್ ಕ್ರಿಯೇಟ್ ಮಾಡುತ್ತೀರಿ, ಎಸ್.ಸಿ.ಗೆ [illegible]

ತ್ತೀರಿ, ಏನೇನೋ ಮಾಡುತ್ತೀರಿ. ಇದಕ್ಕೆ ಒಬ್ಬ ಚೀಫ್ ಇಂಜಿನಿಯರನ್ನು ಅಥವಾ ಎಸ್.ಇ. ಯನ್ನು ಹಾಕಿ ಪ್ರಶ್ನೆಯನ್ನು ನಿರ್ಮಾಣ ಮಾಡುವುದಕ್ಕೆ ಆಗುತ್ತಾ ಇರಲಿಲ್ಲವೇ, Team of officers ಇದ್ದಾರೆ. Was it a task ? ಹೃದಯಬೇಕು ಜೊತೆಗೆ ಮನಸ್ಸು ಬೇಕು. ನಾವು ಯಾವುದಕ್ಕೋ ಕಾಲ ವಿತರಣೆ ಮಾಡುವುದಕ್ಕೆ ಬದಲಾಗಿ, ಇಂತಹ ಪ್ರಾಮುಖ್ಯವಾದ ವಿಷಯಗಳಿಗೆ ಕಾಲ ವಿತರಣೆ ಮಾಡ ತಕ್ಕಂಥ ಆಸಕ್ತಿಬೇಕು. ಸ್ವಾಮಿ, ನಾನು ನಮ್ಮ ರಾಜ್ಯ ಸರ್ಕಾರದ ಮೇಲ್ವಿಚಾರಣೆಯಲ್ಲಿರತಕ್ಕ ಹಲವಾರು ಕೈಗಾರಿಕೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋದರೆ ಸಭೆಯ ಕಾಲ ವ್ಯಯವಾಗುತ್ತದೆ. ಆದರೆ ಈ ಒಂದು ವಿಷಯವನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಅಸಿಟೇಟ್ ಫ್ಯಾಕ್ಟರಿಯಲ್ಲಿ ಏನಾಗಿದೆ, ಮೈಸೂರು ಶುಗರ್‌ನಲ್ಲಿ ಎಷ್ಟರಮಟ್ಟಿಗೆ ಕೆಲಸ ನಡೆಯುತ್ತಾ ಇದೆ, ಇದನ್ನೆಲ್ಲಾ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದೇ ವಿಷಯವನ್ನು ಹೇಳುತ್ತೇನೆ. ೧೯೭೭ರಲ್ಲಿ ನಾನು ಆಗತಾನೇ ಜೈಲಿನಿಂದ ಹೊರಗಡೆ ಬಂದ ಮೇಲೆ ಈ ಸದನದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದೆ. ಏನೆಂದರೆ. ಮೈಸೂರು ಪೇಪರ್ ಮಿಲ್‌ನಲ್ಲಿ ಪ್ರೊಕ್ಯೂರ್‌ಮೆಂಟ್ ಆಫ್ ಮೆಷಿನರೀಸ್, ಇದರಲ್ಲಿ ಕೋಟ್ಯಾಂತರ ರೂಪಾಯಿ ಹಸ್ತಾಂತರ ಆಗಿದೆ ಎನ್ನತಕ್ಕ ಮಾತನ್ನು ಹೇಳಿದೆ. ನಾನು ಸರ್ವೇಸಾಮಾನ್ಯವಾಗಿ ಮಾತನಾಡತಕ್ಕ ಕಾಲದಲ್ಲಿ ಈ ವೇದಿಕೆಯಲ್ಲಿ ಪ್ರಾಮಾಣಿಕವಾದ ಮಾತನ್ನು ಹೇಳುತ್ತೇನೆ. ನಾನು ಉತ್ಪ್ರೇಕ್ಷೆಯ ಮಾತನ್ನು ಹೇಳಲಿಕ್ಕೆ ಹೋಗುವುದಿಲ್ಲ, ಜವಾಬ್ದಾರಿಯನ್ನು ಅರಿತೇ ನಾನು ಆವತ್ತು ಆ ಮಾತನ್ನು ಹೇಳಿದ್ದು. ಆವತ್ತಿನ ಮುಖ್ಯ ಮಂತ್ರಿಗಳು ಇವತ್ತು ನಮ್ಮ ಮುಂದೆ ಇಲ್ಲ. ಶ್ರೀಮಾನ್ ದೇವರಾಜ ಅರಸ್ ಅವರು ಅದರ ಬಗ್ಗೆ ಹೇಳುತ್ತಾ, ಅದನ್ನು ಪ್ರಬಲವಾಗಿ ಅಲ್ಲಗಳೆದರು.

SRI D. DEVARAJ URS.—The then Chief Minister stated thus ;

"I can assure the House one point and i.e., about the anxiety expressed by the Leader of the Opposition in regard to the project of getting into difficult. I share the anxiety of the Hon'ble Members and assure the House that the Government will keep a watch and see that the big project go on smoothly and at every stage, we will do our best to get the technical know-how and we get the best possible machinery. The other criticism was that the collaboration arrangements, money has been taken or somebody is getting advantage. It is not based on facts. It is not correct to say that."

ನಾನು ಈ ಒಂದು ವಿಸ್ತರಣಾ ಯೋಜನೆ ಬಗ್ಗೆ ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಮಷಿನರಿ ಕೊಂಡುಕೊಳ್ಳತಕ್ಕ ಕಾಲದಲ್ಲಿ ವಿದೇಶೀ ಹಣ ಕೋಟ್ಯಾಂತರ ರೂಪಾಯಿ ಹಸ್ತಾಂತರವಾಗಿದೆ ಎಂದು ಹೇಳಿದೆ, ಕಮಿಷನ್ ಎಲ್ಲಾ ಹಸ್ತಾಂತರವಾಗಿದೆ. ಈ ಹಣ ಸ್ವಿಸ್ ಬ್ಯಾಂಕ್‌ನಲ್ಲಿ ಶೇಖರ ಆಗಿರುವ ಸಾಧ್ಯತೆ ಇರಬಹುದು ಎನ್ನುವ ಮಾತನ್ನು ಹೇಳಿದೆ. ಮಾಜಿ ಮುಖ್ಯ ಮಂತ್ರಿಗಳು ಅದನ್ನು ಪ್ರಬಲವಾಗಿ ಅಲ್ಲಗಳೆದರು. ನಾನು ಕಳೆದ ತಿಂಗಳು ಪತ್ರಿಕೆಯಲ್ಲಿ ಓದಿದೆ. ಈ ಕಾಗದ ಕಾರ್ಖಾನೆಗೆ ಸುಮಾರು ೧೫೦ ಕೋಟಿ ರೂಪಾಯಿಗಳನ್ನು ನಾವು ಈಗ ವೆಚ್ಚ ಮಾಡಿದ್ದೇವೆ. ಆದರೂ ನಾವು ಕಳೆದ ಒಂದು ವರ್ಷದಿಂದ ಟ್ರಯಲ್ ಪ್ರೊಡಕ್ಷನ್ ಮಾಡುತ್ತಾ ಇದ್ದೇವೆ. ೧೯೮೦ರ ಅಕ್ಟೋಬರ್‌ಗೆ ಇದು ಪ್ರೊಡಕ್ಷನ್‌ಗೆ ಬರಬೇಕಾಗಿತ್ತು. ಇದನ್ನು ನಿಮ್ಮ ೧೯೭೭ರ ಆನ್ಯುಯಲ್ ರಿಪೋರ್ಟ್‌ನಲ್ಲಿ ಹೇಳಿದ್ದೀರಿ. ೧೫೦ ಕೋಟಿ ರೂಪಾಯಿ ಬದಲು ೧೦೧ ಕೋಟಿ ರೂಪಾಯಿ At the end of August, the amount incurred for the project is Rs. 63 29 crores and the total project cost is Rs 100 Crores ಎಂದು ಇದರಲ್ಲಿ ಹೇಳಿದ್ದಾರೆ. ೧೯೮೦ರ ಅಕ್ಟೋಬರ್‌ಗೆ ಪ್ರೊಡಕ್ಷನ್ ಬರುತ್ತದೆ ಎಂದು ಹೇಳಿದರು ಇದನ್ನು ಲೇಟೆಸ್ಟ್ ಆನ್ಯುಯಲ್ ರಿಪೋರ್ಟ್ ಎಂದು ಹೇಳಿದ್ದಾರೆ. ಇದು ಜವಾಬ್ದಾರಿಯನ್ನು ಕೈಗೆ ತೆಗೆದುಕೊಳ್ಳುತ್ತಿಲ್ಲ. ಇವತ್ತು ನಾವು ೧೫೦ ಕೋಟಿ ರೂಪಾಯಿಗಳನ್ನು ಖರ್ಚು

ಮಾಡಿ ಈ ಒಂದು ಜೈಂಟ್ ಪ್ರಾಜೆಕ್ಟನ್ನು ಕರ್ನಾಟಕದಲ್ಲಿ ಮಾಡಿದ್ದೇವೆ. ಇದು ನಾನೇ ಆರೋಪಣೆ ಮಾಡತಕ್ಕ ವಿಷಯವಲ್ಲ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾಗರೀಕ ಸಮಿತಿ ಕಾಂಗ್ರೆಸ್–ಐ, ಪೇಪರ್ ಟೌನ್, ಭದ್ರಾವತಿ, ಅವರು ಮಾಜಿ ಲೇಬರ್ ಮಂತ್ರಿಗಳು ಮತ್ತು ಹಾಲಿ ರಾಜ್ಯ ಸಚಿವರಾದ ಶ್ರೀಮಾನ್ ವೆಂಕಟಪ್ಪನವರು, ಹಾಲಿ ಲೋಕಸಭಾ ಸದಸ್ಯರಾದ ಶ್ರೀ ಎಸ್. ಟಿ. ಖಾದ್ರಿ ಅವರಿಗೆ ಸನ್ಮಾನ ಮಾಡಿದ್ದಾರೆ. ಅಲ್ಲಿ ಈ ಸಂಸ್ಥೆ ಬಗ್ಗೆ ಹಲವಾರು ಆರೋಪಣೆಗಳನ್ನು ಮಾಡಿದ್ದಾರೆ, ಯಾರು ಅಂದರೆ ಕಾಂಗ್ರೆಸ್–ಐ ನಾಗರೀಕ ಸಮಿತಿಯವರು ಆರೋಪಣೆ ಮಾಡಿರತಕ್ಕಂಥದ್ದು. ಇವರು ಹಲವಾರು ಆರೋಪಣೆಗಳನ್ನು ಮಾಡಿದ್ದಾರೆ. ಇದರ ಬಗ್ಗೆ ತಜ್ಞರ ಸಮಿತಿಯನ್ನು ನೇಮಕಮಾಡಿ ತಾವು ವಿಚಾರಣೆ ನಡೆಸಬೇಕು ಎನ್ನತಕ್ಕ ಮಾತನ್ನು ಹೇಳಿದ್ದಾರೆ ಅವರು ಮಂತ್ರಿಗಳಾಗಿದ್ದರು, ಪಾಪ ಅವರು ಸರ್ಕಾರಕ್ಕೆ ಏನು ವರದಿ ಕೊಟ್ಟರೋ ಬಿಟ್ಟರೋ ನನಗೆ ಗೊತ್ತಿಲ್ಲ ಸ್ವಾಮಿ. ಐ.ಡಿ.ಬಿ ಐ, ನಿಂದ ಕೆಮಿಕಲ್ ಬ್ಯಾಂಕ್ ಆಫ್ ಅಮೇರಿಕದಿಂದ ನಮ್ಮ ಗವರ್ನಮೆಂಟ್ ಆಫ್ ಕರ್ನಾಟಕಕ್ಕೆ ಕೊಟ್ಟಿರತಕ್ಕ ಇಂಟರೆಸ್ಟ್ ಫ್ರೀ ಲೋನ್, ಸರ್ಕಾರ ಕೊಟ್ಟಿರತಕ್ಕ ಬಡ್ಡಿ ಸಹಿತ ಸಾಲ, ಐ.ಡಿ.ಬಿ ಐ ನಿಂದ ಸೆಕೆಂಡ್ ಕನ್‌ಸೈನ್‌ಮೆಂಟ್ ಲೋನ್, ಪೈಡ್ ಅಪ್ ಕ್ಯಾಪಿಟಲ್ ಹೀಗೆ ವಿವಿಧ ಸಂಸ್ಥೆಗಳಿಂದ ನಾವು ಹಣವನ್ನು ಒದಗಿಸಿಕೊಂಡು ಈ ಒಂದು ಕಾರ್ಖಾನೆಯನ್ನು ಕಟ್ಟಿದ್ದೇವೆ. ಕಳೆದ ಒಂದು ವರ್ಷದಿಂದ ಇವತ್ತೂ ಕೂಡ ಟ್ರಯಲ್ ಪ್ರೊಡಕ್ಷನ್ ಆಗುತ್ತಾ ಇದ್ದರೆ, ಇದರಲ್ಲಿ ದೋಷ ಏನಾದರೂ ಇರಬೇಕು, ರಾ ಮೆಟೀರಿಯಲ್ ಕೊರತೆ ಇದೆಯೋ ಅಂದರೆ ರಾ ಮೆಟೀರಿಯಲ್ ಕೊರತೆ ಇಲ್ಲ, ಕೋಲ್ ಏನಾದರೂ ಕೊರತೆ ಇದೆಯೋ ಅಂದರೆ ಕೋಲ್ ಕೊರತೆ ಇಲ್ಲ. What ex ctly is the reason ? ಕಮರ್ಷಿಯಲ್ ಪ್ರೊಡಕ್ಷನ್ ಬರುವುದಕ್ಕೆ ಈ ಫ್ಯಾಕ್ಟರಿಗೆ ಇರತಕ್ಕ ದೋಷ ಏನು. ಇದರ ಬಗ್ಗೆ ಸರ್ಕಾರದವರು ಏನಾದರೂ ಆಲೋಚನೆ ಮಾಡಿದ್ದೀರಾ. ಇಷ್ಟೊಂದು ಬೃಹತ್ ಪ್ರಮಾಣದ ಬಂಡವಾಳವನ್ನು ಹೂಡಿ, ೧೫೦ ಕೋಟಿ ರೂಪಾಯಿಗಳ ಬಂಡವಾಳವನ್ನು ನಾವು ತೆತ್ತು ಕಳೆದ ಒಂದು ವರ್ಷದಿಂದ ಕೇವಲ ಟ್ರಯಲ್ ಪ್ರೊಡಕ್ಷನ್ ಆಗುತ್ತಾ ಇದೆ ಅಂದರೆ ಅದಕ್ಕೆ ಕಾರಣವೇನು ಎಂದು ತಾವು ಯೋಚನೆ ಮಾಡಿದ್ದೀರಾ ಎನ್ನತಕ್ಕ ಮಾತನ್ನು ನಾನು ಸರ್ಕಾರಕ್ಕೆ ಕೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ನಾವು ಎರಡೂವರೆ ಸಾವಿರ ಟನ್ ಶುಗರ್ ಫ್ಯಾಕ್ಟರಿಗೆ ಹೋಗುತ್ತದೆ ಅಲ್ಲಿಂದ ಬರತಕ್ಕ ಬೆಗಾಸ್‌ನ್ನು ಉಪಯೋಗ ಮಾಡಿ ಅದನ್ನೇ ರಾ ಮೆಟೀರಿಯಲ್ ಆಗಿ ಉಪಯೋಗ ಮಾಡಿಕೊಳ್ಳುವ ಬಗ್ಗೆ ಈ ಪ್ರಾಜೆಕ್ಟ್‌ನಲ್ಲಿ ಒಂದು ಮಾತನ್ನು ತಾವು ಹೇಳಿದ್ದೀರಿ. ಅದರ ಬಗ್ಗೆ ನಾನು ಪ್ರಶ್ನೆ ಮಾಡುತ್ತಿದ್ದೇನೆ. ಈಗಾಗಲೇ ೧೫ ಹೆಕ್ಟೇರ್‌ನಲ್ಲಿ ಯೂಕಲಿಪ್ಟಸ್ ಮರವನ್ನು ಬೆಳೆಸತಕ್ಕಂಥ, ಫಾಸ್ಟ್ ಗ್ರೋಯಿಂಗ್ ಮರಗಳನ್ನು ಬೆಳೆಸತಕ್ಕಂಥದ್ದು ಮಾಡಿಕೊಂಡಿದ್ದೀರಿ. ಆದುದರಿಂದ ಇದರ ಬಗ್ಗೆ ನಿಮ್ಮ ಸಾಧನೆ ಏನು ಎನ್ನತಕ್ಕದರ ಬಗ್ಗೆ ದಯಮಾಡಿ ವಿವರಣೆಯನ್ನು ಕೊಡಿ. ತಮ್ಮ ಉತ್ತರದಲ್ಲಿ ಸ್ವಾಮಿ 12,000 tonnes of imported pulp from Swedan at the rate of approximately Rs. 3,000 or Rs. 5,000 per tonne. ಟ್ರೈಯಲ್ ಪ್ರೊಡಕ್ಷನ್‌ಗೋಸ್ಕರವಾಗಿ ತರಿಸಿಕೊಂಡಿದ್ದಾರೆ. ಇದರಿಂದ ಎಷ್ಟು ಉತ್ಪಾದನೆ ಮಾಡಿದ್ದಾರೆ ? ೫, ೬ ಸಾವಿರ ನ್ಯೂಸ್‌ಪ್ರಿಂಟ್ಸ್ ಮತ್ತು ರೈಟಿಂಗ್ ಪೇಪರ್‌ನ ಪ್ರೊಡಕ್ಷನ್ ಮಾಡಿದ್ದಾರೆ. ಮಿಕ್ಕ ಪಲ್ಪ್ ಏನಾಯಿತು ? ಅದು ಬೆಲ್ಲಿಗೆ ಹೋಯಿತೋ ? ಇದರಿಂದ ಎಷ್ಟು ಕೋಟಿ ಲಾಸ್ ಆಗಿದೆ ? ಇದರಿಂದ ಸ್ವಾಮಿ ಇವತ್ತು ಟ್ರೈಯಲ್ ಪ್ರೊಡಕ್ಷನ್‌ಗೋಸ್ಕರವಾಗಿ ಹೆಣಗಬೇಕಾಗಿದೆ. ಇದಕ್ಕೆ ಕಾರಣ ಎಲೆಕ್ಷನ್ ಡಿಫೆಕ್ಟ್, ಕಮಿಷನಿಂಗ್ ಡಿಫೆಕ್ಟ್, ಪರ್ಚೇಜ್ ಆಫ್ ಮಿಷನರಿಯಲ್ಲಿ ಆಗಿದೆ. ಆದುದರಿಂದ ಇದಕ್ಕೆ ಹೊಣೆಗಾರರು ಯಾರು ? ಇದರ ಬಗ್ಗೆ ತನಿಖೆ ಆಗಬೇಕಾಗುತ್ತದೆ. ಸ್ವಾಮಿ, ಈ ಪರ್ಚೇಸ್ ಆಫ್ ಮಿಷನರಿಯಲ್ಲಿ ಹಣವೆಲ್ಲಾ ಹಸ್ತಾಂತರವಾಯಿತು ಎಂದು ಹೇಳಿದಾಗ ಪ್ರಬಲವಾಗಿ ಅಲ್ಲಗಳೆದಿದ್ದರು. ನಾನು ಇವತ್ತು ಕೂಡ ಈ ಸದನದಲ್ಲಿ ಆರೋಪಣೆ ಮಾಡಬೇಕು ಎನ್ನತಕ್ಕ ಇಚ್ಛೆಯಿಂದ ಮಾತನಾಡುತ್ತಿಲ್ಲ, Let me honestly speak in the name of God. I do not believe in all these things. ಪಾಪ ಮಾನ್ಯ ಶ್ರೀ ರಾಮದೇವ್‌ರವರು ಏನೋ ಹೇಳುತ್ತಿದ್ದರು, ಇದರ ಬಗ್ಗೆ ಯಾವುದೋ ರೀತಿಯಲ್ಲಿ ಒಂದು ಎನ್‌ಕ್ವೈರಿ ಆಗಬೇಕೆಂದು ಯಾರಿಗೋಸ್ಕರವಾಗಿ ಆಗಬೇಕಾಗಿದೆ ಈ ದೇಶದಲ್ಲಿ ? ಯಾವ ಪುರುಷಾರ್ಥಕ್ಕೋಸ್ಕರವಾಗಿ ಈ ಎನ್‌ಕ್ವೈರಿ ಆಗಬೇಕಾಗಿದೆ ? ಎನ್‌ಕ್ವೈರಿ ಪಣೆಬರಹ ಏನಾಗಿದೆ ಈ ದೇಶದಲ್ಲಿ ? ಅದರ ತಪ್ಪನ್ನು ತಿದ್ದಿಕೊಳ್ಳಬೇಕಾದರೆ ಎನ್‌ಕ್ವೈರಿಯಿಂದಲೇ ಸಾಧ್ಯ ಎನ್ನತಕ್ಕ ಸಮಾಧಾನ ಕೂಡ ನನಗೆ ಇಲ್ಲ, ಅದರ ಬಗ್ಗೆ ವಿಶ್ವಾಸ ಕೂಡ

ನನಗೆ ಇಲ್ಲ, ಅಂಥಾ ಆಸೆ ಕೂಡ ನನಗಿಲ್ಲ. ಈ ಸದನದಲ್ಲಿ ಆಗತಕ್ಕ ಚರ್ಚೆಯ ಆಧಾರದ ಮೇಲೆ ಈ ದೇಶದ ಜನತೆ ನಮ್ಮ ತೀರ್ಪನ್ನು ಕೊಡುತ್ತಾರೆ ಎನ್ನತಕ್ಕ ವಿಶ್ವಾಸ ಕೂಡ ನನಗೆ ಉಳಿದಿಲ್ಲ. ಏತಕ್ಕೆಂದರೆ ಈ ಸದನದಲ್ಲಿ ಆಗತಕ್ಕ ಚರ್ಚೆಯ ಹಿನ್ನೆಲೆಯಲ್ಲಿ ಈ ದೇಶದ ಜನತೆ ತಮ್ಮ ರಾಜಕೀಯ ತೀರ್ಪನ್ನು ಕೊಡುತ್ತಾರೆ, ದೇಶದ ಜನತೆಯಲ್ಲಿ ರಾಜಕೀಯ ಜಾಗೃತಿ ಉಂಟಾಗಿದೆ ಎನ್ನುವಂಥಾದ್ದನ್ನು ಕೂಡ ನಾನು ಒಪ್ಪುವುದಕ್ಕೆ ತಯಾರಾಗಿಲ್ಲ. ಇದಕ್ಕೆ ಯಾವುದೋ ಒಂದು ರಾಜಕೀಯ ಶಕ್ತಿಯ ಹಿನ್ನೆಲೆ ಇದೆ ಮಾನ್ಯ ಶ್ರೀ ಗುಂಡೂರಾಯರೇ ಹೇಳಿದ ಹಾಗೆ ಪ್ಲಸ್ ಶ್ರೀಮತಿ ಇಂದಿರಾಗಾಂಧಿ ನಾವೆಲ್ಲಾ ಇಂದಿರಾಗಾಂಧಿ ಎಂದರೆ ನಾವು ಯಾರೂ ಇಲ್ಲವೆನ್ನುವ ಮಾತನ್ನು ಅವರೇ ಹೇಳುತ್ತಿರುತ್ತಾರೆ. ಆದರೆ ನಾನು ಹೇಳುವಂಥಾ ಮಾತನ್ನು ಒಪ್ಪಬೇಕಾದರೆ ಒಂದು ಕಾಲ ಬರುತ್ತದೆ ಅಲ್ಲಿಯವರೆಗೂ ಯಾರೂ ಒಪ್ಪಿಕೊಳ್ಳುವುದಕ್ಕೆ ತಯಾರಾಗಿರುವುದಿಲ್ಲ. ಅಂಥಾ ಕಾಲ ಬಂದಾಗ ಇಲ್ಲಿ ಕುಳಿತಿರತಕ್ಕಂಥ ೨೨೪ ಜನ ತಮ್ಮ ಸ್ವಂತ ಕಾಲಿನ ಮೇಲೆ ನಿಂತು ರಾಜಕೀಯದಲ್ಲಿ ಬರುತ್ತೇವೆ ಎಂದು ಹೇಳಿದರೆ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಎಲ್ಲಾ ವಿಷಯಗಳನ್ನು ಇಲ್ಲಿ ಹೇಳಿದರೆ ಅದರಿಂದ ಏನೋ ಲಾಭ ನನಗೆ ಸಿಗುತ್ತದೆಂದು ಎಂದು ಅಲ್ಲ. ಬೃಹತ್ ಪ್ರಮಾಣದಲ್ಲಿ ಹೂಡಿರತಕ್ಕ ಬಂಡವಾಳ ಅದು ಹೇಗೆ ಅಪವ್ಯಯವಾಗುತ್ತಿದೆ ಅದನ್ನು ಯಾವ ರೀತಿಯಲ್ಲಿ ಸರಿಪಡಿಸಿಕೊಳ್ಳಬೇಕು ಎನ್ನತಕ್ಕ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅದಕ್ಕಾಗಿ ಮೊದಲೇ ಸ್ಪಷ್ಟೀಕರಣ ಮಾಡಿ ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಫೈನಾನ್ಸ್ ಮ್ಯಾನೇಜರ್‌ರವರ ಹೆಸರನ್ನು ಹೇಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಇವರು ಕನ್ನಡಿಗರು ಹೊರಗಿನವರು ಏನೂ ಅಲ್ಲ ಅಂಥಾದ್ದರಲ್ಲಿ ಅವರನ್ನು ನ್ಯೂಯಾರ್ಕ್‌ಗೆ ಅಗ್ರಿಮೆಂಟ್‌ಗೆ ಸಹಿ ಮಾಡಲು ಕರೆದುಕೊಂಡು ಹೋಗಲಿಲ್ಲ. ಎಷ್ಟು ಕಮಿಷನ್ ಕೊಡಲಾಗಿದೆ ಮತ್ತು ಎಷ್ಟು ಹಣವನ್ನು ಯಾವ ಬ್ಯಾಂಕ್‌ಗೆ ಟ್ರಾನ್ಸ್‌ಫರ್ ಮಾಡಲಾಯಿತು ಎಂಬುದು ಒಂದೂ ಸಹ ಗೊತ್ತಿಲ್ಲ. ೫೦ ಲಕ್ಷ ಡಾಲರ್ ಹಣ ಯಾರಿಗೆ ಹೋಯಿತೋ ಎಂಬುದು ಗೊತ್ತಿಲ್ಲ. ಸ್ವಾಮಿ, ದೇವೇಗೌಡರವರೇ ಇದರ ಬಗ್ಗೆ ಒಂದು ಹೌಸ್ ಕಮಿಟಿ ಮಾಡೋಣವೇ, ಇಲ್ಲವೇ ಜ್ಯುಡಿಶಿಯಲ್ ಎನ್‌ಕ್ವೈರಿ ಮಾಡೋಣವೆಂದು ಕೇಳಿದರೆ ನೀವು ಯಾವುದಾದರೂ ಮಾಡಿಕೊಂಡು ಹಾಳಾಗಿ ಹೋಗಿ ನನಗೇನೂ ಆಗಬೇಕಾದ್ದು ಇಲ್ಲ, ನೀವು ಯಾವ ತರಹದ ಎನ್‌ಕ್ವೈರಿಯೋ ಮಾಡಿಕೊಳ್ಳಿ ಅದಕ್ಕೂ ನನಗೂ ಯಾವ ಸಂಬಂಧವೂ ಇಲ್ಲ. ಒಂದೊಂದು ವಿಷಯದಿಂದಲೂ ಸಹ ಇವತ್ತಿನ ದಿವಸ ಆ ಫ್ಯಾಕ್ಟರಿಯನ್ನು ಸರಿಪಡಿಸಬೇಕಾದ್ದರೆ ಮತ್ತೆ ಹೆಣಗಬೇಕಾಗುತ್ತದೆ. ಅಂಥಾ ಪರಿಸ್ಥಿತಿ ಬಂದಿದೆಂದು ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಅವತ್ತು ಈ ಮಾತನ್ನು ನಾನು ಹೇಳಿದಾಗ ಡಿ : ಅರಸುರವರು ಮಾತನಾಡುತ್ತಾ ಇದರ ಬಗ್ಗೆ ಎಚ್ಚರಿಕೆಯನ್ನು ವಹಿಸುತ್ತೇನೆಂದು ಹೇಳಿದ್ದರು. ಆದರೆ ಇವತ್ತು ಅವರು ನಮ್ಮನ್ನು ಅಗಲಿ ಹೋಗಿದ್ದಾರೆ ಅವರ ಬಗ್ಗೆ ಕೆಟ್ಟ ಮಾತನ್ನು ಆಡುವುದಿಲ್ಲ. ಸ್ವಾಮಿ, ೫೦ ಕೋಟಿ ರೂ.ಗಳ ದೇಶಿಸರಿ ಪರ್ಚೇಜ್ ಮಾಡಿದರು.

As the Chairman and Managing Director, he did not take the Finance Manager with him to sign the agreement. When he purchasad this plant, how much commission was allowed and where it has been transferred and to whom it has been transferred, shall I name that person ? Whether he is a relative of the concerned officer and whether he is from Pakistan, shall I name it ? Are you prepared to take the responsibility of holding an enquiry ? I have got proof and everything. I have not come to this House without any facts. Then, Rs. 50 crores worth of indegeneous equipments were purchased......

ಕು : ಎಸ್. ಪ್ರಮೀಳಾ.—ಯಾರು ಎಂದು ಹೆಸರು ಹೇಳಿ ಸ್ವಾಮಿ, ನಾವು ಸ್ವಲ್ಪ ತಿಳಿದುಕೊಳ್ಳೋಣ.

SRI H. D. DEVEGOUDA.—The Managing Director and Cnairman, as an officer of the State Government, knows his name. His son or a relative from Pakisthan went to U.S.A. to collect the Commission,

when they purchased machinery worth of Rs. 5 crores. Air Ticket number and other details, everything is available with me. ಐವತ್ತು ಕೋಟಿ ರೂಪಾಯಿನ ಇಂಡಿಜೀನಿಯಸ್ ಎಕ್ವಿಪ್‌ಮೆಂಟ್ಸ್ ಎಂದು ಪರ್ಚೇಸ್ ಮಾಡಿದಿರಿ. ಹೈದರಾಬಾದ್‌ನಲ್ಲಿ ಟಿ.ಎಂ.ಟಿ. ಎಂಬುದು ಒಂದು ಆರ್ಗನೈಸೇಷನ್, ಅಲ್ಲಿನ ಡೈರೆಕ್ಟರ್ ಬೆಂಗಳೂರಿನವರಿದ್ದರು. ಅಲ್ಲಿ ೨ ಕೋಟಿ ರೂಪಾಯಿನ ಎವಾಪರೇಟರ್ ಸೆಟ್ಟನ್ನು ಪರ್ಚೇಸ್ ಮಾಡಿದಿರಿ. ಆದರೆ ಅದು ೧.೫ ಕೋಟಿಗಿಂತ ಹೆಚ್ಚು ಬೆಲೆ ಬಾಳುವುದಿಲ್ಲ. ಅದರ ಬಗ್ಗೆ ಪ್ರಶ್ನೆ ಮಾಡಿದಾಗ ಕಮಿಟಿ ಮಾಡೋಣ, ವಿಚಾರಣೆ ಮಾಡೋಣ ಎಂದಿರಿ. ಆದರೆ ಇದುವರೆಗೆ ಮಾಡಲಿಲ್ಲ. ೧೯೭೭ರಲ್ಲಿ ವಲ್ಲಿಂಗ್ ಮತ್ತು ಗ್ರೈಂಡಿಂಗ್ ಮಿಷಿನ್ ಅನ್ನು ಪರ್ಚೇಸ್ ಮಾಡಿದರು, ಆ ಸಂದರ್ಭದಲ್ಲಿ ಕಾಪನ್ ಮಾಡಿದಾಗ ಅದನ್ನು ಅಲ್ಲಗಳೆದರು. ಒಂದು ಜರ್ಮನ್ ಫರ್ಮ್ ಮತ್ತೊಂದು ಯು. ಕೆ. ಕಂಪನಿ ಇವೆರಡು ರೆಪ್ಯೂಟೆಡ್ ಫರ್ಮ್‌ಗಳು ಮೆಷನರಿಗಳನ್ನು ಸರಬರಾಜು ಮಾಡಲು ಜಾಗ್ರತೆ ಮುಂದಾಗುತ್ತವೆ. ಆ ಕಂಪನಿಗಳಿಂದ ೪೦ ಲಕ್ಷದ್ದು ಒಂದು ಮತ್ತು ೬೫ ಲಕ್ಷದ್ದು ಒಂದು ಮೆಷನರಿಯನ್ನು ಕೊಂಡರು. ಆಮೇಲೆ ಅದನ್ನು ಚಕಾಪುರಿ ಪೀನಾಲ್ಯಾಂಡ್ಸ್ ಎಂಬ ಸಂಸ್ಥೆಗೆ ಕೊಟ್ಟರು. ಅವುಗಳ ಒಟ್ಟು ಬೆಲೆ ಒಂದು ಕೋಟಿ ೫ ಲಕ್ಷ ರೂಪಾಯಿ. ಅದಕ್ಕೆ ಬೋರ್ಡ್ ರೆಸಲ್ಯೂಷನ್‌ನಲ್ಲಿ ಏನು ಕಾರಣ ಕೊಟ್ಟರು ಎಂದರೆ ನಮಗೆ ಬಿಗ್ಗರ್ ಕೆಪಾಸಿಟಿಯ ಯು.ಎಸ್.ಎ. ಮಾಡಲ್ ಗ್ರೈಂಡಿಂಗ್ ಬೇಕಾಗಿರುವುದರಿಂದ ಇದನ್ನು ಕೊಡುತ್ತಿದ್ದೇವೆಂದು ಹೇಳಿದರು. ಈಗ ಅದರ ಪರಿಸ್ಥಿತಿ ಏನಾಗಿದೆ ಎಂಬುದನ್ನು ವಿಚಾರ ಮಾಡಬೇಕು. ಆಮೇಲೆ ೨೦ ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟು ಬೆಂಗಳೂರಿನವರೊಬ್ಬರಿಗೆ ಮಾಡಲು ಕೊಟ್ಟರು, ಆದರೆ ಅವರಿಂದ ಅದನ್ನು ಸರಬರಾಜು ಮಾಡುವುದಕ್ಕೆ ಆಗಲಿಲ್ಲ. ಸಬಾರ್ಡಿನೇಟ್ ಅಧಿಕಾರಿಗಳು ಬೇಡವೆಂದರೂ ಕೋರ್ಟಿಗೆ ಹೋದರು, ಒಂದು ವರ್ಷ ಹೋಯಿತು. ೧೯೮೦ರಲ್ಲಿ ಪರ್ಚೇಸ್ ಮಾಡುತ್ತೇವೆಂದು ಹೇಳಿ ಈಗ ೧೯೮೨ಕ್ಕೆ ಬಂದಿದ್ದೇವೆ. ಮತ್ತೆ ಬಾಂಬೆ ಫರ್ಮಿಗೆ ಆರ್ಡರ್ ಕೊಟ್ಟು ಅದನ್ನು ಪಡೆದುಕೊಳ್ಳತಕ್ಕ ಕೆಲಸ ಮಾಡಿದರು. ಕೋರ್ಟಿಗೆ ಹೋಗಿ ವ್ಯವಹಾರ ಮಾಡಿದರು. ಈಗ ಮತ್ತೆ ಒಬ್ಬರು ಛೇರ್ಮನ್ ಅನ್ನು ಹಾಕಿದ್ದಾರೆ, ಅವರ ಬಗ್ಗೆ ಆರೋಪಣೆ ಮಾಡುವುದಕ್ಕೆ ತಯಾರಿಲ್ಲ. ಇವರು ಹೋದಮೇಲೆ ನಡೆದಿರತಕ್ಕ ಆಡಳಿತ ವೈಖರಿಯನ್ನು ಯೋಚನೆ ಮಾಡಬೇಕಾಗುತ್ತದೆ. ಪ್ರಾಮಾಣಿಕತೆ ಇರಬಹುದು, ಆದರೆ ಹೇಗೆ ನಡೆದಿದೆ ಎಂಬುದನ್ನು ಯೋಚನೆ ಮಾಡಬೇಕಲ್ಲ. ಒಬ್ಬರು ಡಾ॥ ರಾಜಣ್ಣ ಎಂಬ ಸೇಲ್ಸ್ ಮ್ಯಾನೇಜರ್ ಇದ್ದರು. ಅವರನ್ನು ಪ್ರಾಜೆಕ್ಟ್ ಡೈರೆಕ್ಟರಾಗಿ ಅಪಾಯಿಂಟ್ ಮಾಡಿಕೊಂಡರೆ ಒಳ್ಳೆಯದೆಂದು ಪ್ರಾಜೆಕ್ಟ್ ಡೈರೆಕ್ಟರಾಗಿ ಅಪಾಯಿಂಟ್ ಮಾಡಿಕೊಂಡ ಮೇಲೆ ಎಲ್ಲ ಜನರನ್ನು ತಮಿಳ್ನಾಡಿನಿಂದ ಕರೆದುಕೊಂಡು ಬಂದರು. ಆಮೇಲೆ ಅವರು ಇಬ್ರಾಹಿಂರವರಿಗೆ ಮನವಿ ಕೊಟ್ಟಿದ್ದಾರೆ, ಇದು ಕಾಂಗ್ರೆಸ್ ಸಮಿತಿಯವರು ಮಾಡಿರುವ ಆಪಾದನೆ. ಸರ್ಕಾರಕ್ಕೆ ಆಪಾದನೆ ಒಂದಮೇಲೆ ಎಷ್ಟರಮಟ್ಟಿಗೆ ಎಚ್ಚರಿಕೆ ವಹಿಸಿದೆ ಎಂಬದು ಇದರಿಂದ ಅರ್ಥವಾಗುತ್ತದೆ.

ಶ್ರೀ ಸಿ.ಎಂ. ಇಬ್ರಾಹಿಂ —ಸರ್ಕಾರದ ಗಮನಕ್ಕೆ ಬಂದ ಮೇಲೆ ನನಗೆ ಜ್ಞಾಪಕ ಇದ್ದಮಟ್ಟಿಗೆ ಎನ್‌ಕ್ವೈರಿ ಕಂಡಕ್ಟ್ ಮಾಡಿ ಎನ್‌ಕ್ವೈರಿ ಆಗಿದೆ

ಶ್ರೀ ಹೆಚ್.ಡಿ. ದೇವೇಗೌಡ —ಬಹುಪಾಲು ಎಲ್ಲ ಕಂಟ್ರಾಕ್ಟರುಗಳನ್ನು ತಮಿಳ್ನಾಡಿನಿಂದ ತಂದಿದ್ದಾರೆ. ಪ್ರಾಜೆಕ್ಟ್ ಡೈರೆಕ್ಟರ್‌ರವರು ೬ ಲಕ್ಷ ರೂಪಾಯಿ ಎಲೆಕ್ಟ್ರಿಕಲ್ ಎಕ್ವಿಪ್‌ಮೆಂಟ್ಸ್ ಅನ್ನು ಪರ್ಚೇಸ್ ಮಾಡಿದ್ದಾರೆ ಆದರೆ ಅದರ ಬೆಲೆ ಎರಡೂವರೆ ಲಕ್ಷ ರೂಪಾಯಿ ಕೂಡ ಆಗುವುದಿಲ್ಲ. ಎಲೆಕ್ಟ್ರಿಕ್ ವರ್ಕನ್ನು ಅಗ್ರಿಮೆಂಟಿನಲ್ಲಿ ಏನಿದೆ ಆ ಪ್ರಕಾರ ಕೊಡಬೇಕಾಗುತ್ತದೆ. ಆದರೆ ಅವರು ತಮಿಳ್ನಾಡಿನಿಂದ ತಮ್ಮದೇ ಆದ ಬಳಗವನ್ನು ಕರೆದುಕೊಂಡು ಬಂದು ಮಾಡಿಸಿದ್ದಾರೆ. ಒಂದು ವರ್ಷದಿಂದ ಟ್ರೈಯಲ್ ಪ್ರೊಡಕ್ಷನ್ ಆಗುವುದಕ್ಕೆ ಇದು ಒಂದು ಕಾರಣ. ಇದರ ಬಗ್ಗೆ ಸಂಪೂರ್ಣವಾಗಿ ತನಿಖೆ ಆಗಬೇಕಾಗುತ್ತದೆ. ಈಗ ಅವರು ಏನು ಮಾಡಿದ್ದಾರೆಂದರೆ ಇಲ್ಲಿದ್ದಂಥ ಅಧಿಕಾರಿಗಳನ್ನು ಮನೆಗೆ ಕಳುಹಿಸಿದ್ದಾರೆ. ವಿಶ್ವೇಶ್ವರಯ್ಯನವರು ಸ್ಥಾಪನೆ ಮಾಡಿದ್ದಂತಹ ಮೈಸೂರು ಪೇಪರ್ ಮಿಲ್‌ನಲ್ಲಿ ಏನು ಕೆಲಸ ಮಾಡುತ್ತಿದ್ದರು ಅವರನ್ನೆಲ್ಲ ಮನೆಗೆ ಕಳುಹಿಸಿದರು. ಅವರು ಆಗಬಾರದ ಶಿಕ್ಷೆಯನ್ನೆಲ್ಲ ಅನುಭವಿಸಿಕೊಂಡು ಹೋದರು. ರಾಮಲಿಂಗಶೆಟ್ಟಿ ಎಂಬುವವರು ಕಳೆದ ೩೦ ವರ್ಷಗಳಿಂದ ದುಡಿಯುತ್ತಿದ್ದರು; ಇಲ್ಲಿ ಅವರಿದ್ದರೆ ಆಗುವುದಿಲ್ಲವೆಂದು ಅವರನ್ನು ಹೊರಗಡೆ ಕಳುಹಿಸಿದರು. ಅವರು ಈಗ ಯಾವುದೋ ಬೇರೆ ಮಿಲ್ಲಿನಲ್ಲಿ ಕೆಲಸಕ್ಕೆ ಸೇರಿದ್ದಾರೆ. ಡಾ: ರಾಜಣ್ಣ ಅವರು ಇಲ್ಲಿಗೆ ಬಂದ ಮೇಲೆ ಅವರಿಗೆ ೫-೬ ಸಾವಿರ ರೂಪಾಯಿ ಸಂಬಳ ಕೊಟ್ಟು ಅವರನ್ನು ಸಿಬ್ಬಂದಿ ಬಳಗದ ಜೊತೆ

ಬಿಟ್ಟರು; ಅವರು ತಮಗೆ ಬೇಕಾದ ಪದಾರ್ಥಗಳನ್ನೆಲ್ಲ ರವಾನೆ ಮಾಡಿದರು. ಈಗ ಯಾರ ಮೇಲೆ ಆ ಜವಾಬ್ದಾರಿಯನ್ನು ಗೊತ್ತು ಮಾಡಬೇಕು? ಡಾ: ಮೋಯರ್‌ರವರು ಆರ್ಡಿನರಿ ಕೆಮಿಸ್ಟ್. ಅವರು ಕಲ್ಕತ್ತದಲ್ಲಿ ಒಂದು ಸಣ್ಣ ಪೇಪರ್ ಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದರು. ಅವರನ್ನು ಇಲ್ಲಿಗೆ ಕರೆದು ಕೊಂಡು ಬಂದು ೬ ಸಾವಿರ ರೂಪಾಯಿ ಸಂಬಳ ಮತ್ತು ಎಲ್ಲ ಸವಲತ್ತುಗಳನ್ನು ಕೊಟ್ಟರು. Epoxy painting for structural part of the Soda repairy boiler ೧೦ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಅದಕ್ಕೆ ಇಂಜಿನಿಯರ್‌ಗಳು ೨ ಲಕ್ಷ ರೂಪಾಯಿ ಎಸ್ಟಿಮೇಟ್ ಮಾಡಿದ್ದರು. ಅದರ ಇಡೀ ಕಟ್ಟಡ ಎಲ್ಲಾ ಸೇರಿ ೧೪ ಲಕ್ಷ ರೂಪಾಯಿ ಖರ್ಚಾಗಿದೆ. ಅಷ್ಟು ಖರ್ಚಾಗಿರುವ ಕಟ್ಟಡದ ಪೆಯಿಂಟಿಂಗಿಗೆ ೨ ಲಕ್ಷ ರೂಪಾಯಿ ಎಂದು ಇಲಾಖೆಯವರು ಎಸ್ಟಿಮೇಟ್ ಮಾಡಿದರೆ ಇವರು ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕ್ಲೋರೋಮೇಷನ್ ಪ್ಲಾಂಟಿಗೆ ೮ ಲಕ್ಷ ರೂಪಾಯಿ ಗಳನ್ನು ಕೊಟ್ಟು ಕೊಂಡವರು ಯಾರು? ಇದಕ್ಕೆ ಅನುಮತಿ ಕೊಟ್ಟವರು ಯಾರು? ಕೊಳ್ಳುವುದಕ್ಕೆ ಅಪ್ರೂವಲ್ ಇಲ್ಲ, ಮತ್ತೊಂದಿಲ್ಲ. ಅದರ ಪರಿಸ್ಥಿತಿ ಏನಾಗಿದೆ ಎಂಬುದನ್ನು ನೋಡಬೇಕು. ಏನೋ ಮೆಷಿನ್ ಸಿಕ್ಕಿತು ಎಂದು ೧೯೭೭ ರಲ್ಲಿ ಪರ್ಚೇಸ್ ಮಾಡಿದರು. ಅದಕ್ಕಿಂತ ಕಡಿಮೆ ಬೆಲೆಗೆ ಅದು ಇಲ್ಲಿ ಸಿಗುತ್ತದೆ. ಅಲ್ಲಿ ಏನು ಲೆಕ್ಕ ಕೊಟ್ಟಿದ್ದಾರೆ ಅದನ್ನು ನೋಡಿದರೆ ಒಂದು ಐಟಂನಲ್ಲಿ ೮ ಲಕ್ಷ ರೂಪಾಯಿ ನಷ್ಟವಾಗಿದೆ. ಇವತ್ತು ಈ ಸಂಸ್ಥೆಯ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ. ರಾಜ್ಯದ ೧೫೦ ಕೋಟಿ ರೂಪಾಯಿನ ಹೊಣೆಗಾರಿಕೆಯನ್ನು ಈ ಸರ್ಕಾರ ಜನತೆಯ ಮೇಲೆ ಹೊರಿಸಿದೆ ಇವತ್ತಿನ ದಿವಸ ೧೦೦ ಕೋಟಿ ರೂಪಾಯಿನ ೧೨ ಸಾವಿರ ಟನ್ ಬಲ್ಪನ್ನು (ಒಂದು ವರ್ಷದ ಟ್ರೈಯಲ್ ಪ್ರೊಡಕ್ಷನ್) ಹೊರಗಡೆ ಹೋಗುವುದಕ್ಕೆ ಬಿಟ್ಟು ಕೈಸುಟ್ಟುಕೊಂಡಿದ್ದಾರೆ. ಇವತ್ತಿಗೂ ಪ್ರೊಡಕ್ಷನ್ ಬರುವ ಪರಿಸ್ಥಿತಿ ಯಲ್ಲಿ ಇಲ್ಲ. ಇದನ್ನು ವಿಚಾರಣೆ ಮಾಡಬೇಕು. ಈ ಬಗ್ಗೆ ಖಂಡಿತ ವಿಚಾರಣೆ ನಡೆಸಬೇಕೆಂದು ಪಿ.ಯು.ಸಿ.ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

೩-೩೦ ಪಿ.ಎಂ.

ಈ ಮಧ್ಯೆ ಅಲ್ಲಿ purchase of machineries ನಿಂದ ಹಿಡಿದು erection and Commission ವರೆಗೆ ಅಲ್ಲಿ ನಡೆದಿರತಕ್ಕ ಅವ್ಯವಹಾರಗಳ ಬಗ್ಗೆ ಸರಿಯಾದ ತನಿಖೆ ಮಾಡಬೇಕಾಗುತ್ತದೆ. ಯಾರಾದರೂ ಪೇಪರ್ ಮತ್ತು ಬಲ್ಪ್ ಇಂಡಸ್ಟ್ರಿಯಲ್ಲಿ ಅನುಭವ ಹೊಂದಿರತಕ್ಕ ಕಾಂಪಿಟೆಂಟ್ ಟೆಕ್ನೋಕ್ರಾಟ್, ಫೈನಾನ್ಷಿಯಲ್ ಎಕ್ಸ್‌ಪರ್ಟ್, ಮತ್ತು ಬಾಳೇಕುಂದರರಿಗಿಯುವರಂಥ ಪ್ರಾಮಾಣಿಕ ಚೀಫ್ ಇಂಜಿನಿಯರ್ ಮತ್ತು ಒಬ್ಬರು ಸಿಟಿಂಗ್ ಜಡ್ಜ್ ಇವರಿಂದ ಕೂಡಿದ ಸಮಿತಿಯಿಂದ ಅಲ್ಲಿನ ಅವ್ಯವಹಾರಗಳ ಬಗ್ಗೆ ಪೂರ್ಣ ತನಿಖೆ ಮಾಡಿಸಬೇಕು, ಸರ್ಕಾರಕ್ಕೆ ಆಸಕ್ತಿ ಇದ್ದರೆ, ನಾನು ಬಾಳೇಕುಂದರಗಿಯುವರಂಥ ಪ್ರಾಮಾಣಿಕ ಚೀಫ್ ಇಂಜಿನಿಯರ್ ಎಂದು ಉದಾಹರಣೆಗೆ ಹೇಳಿದೆ. ನನಗೆ ಬೇರೆಯವರ ಹೆಸರು ಗೊತ್ತಿಲ್ಲ. ಹೆಸರು ಗೊತ್ತಿದ್ದಿದ್ದರೆ ಹೇಳುತ್ತಿದ್ದೆ, ನನಗೇನೂ ಭಯ ಇಲ್ಲ. ಆದ್ದರಿಂದ ಸರ್ಕಾರ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ತನಿಖೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇನ್ನು ಸಕ್ಕರೆ ಕಾರ್ಖಾನೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಐ.ಡಿ.ಬಿ.ಯವರು ಅವರಿಗೆ ಲೋನ್ ಕೂಡ ಕೊಟ್ಟಿಲ್ಲ. ಸಾಕಷ್ಟು ಷರತ್ತುಗಳನ್ನು ಹಾಕಿದ್ದಾರೆ. ಸರ್ಕಾರವನ್ನು ಕಟ್ಟಿ ಹಿಡಿದುಕೊಳ್ಳುವುದಕ್ಕೆ ಅವರು ಪ್ರಯತ್ನ ಮಾಡಿದ್ದಾರೆ. ಸಕ್ಕರೆ ಕಾರ್ಖಾನೆ ಆರ್ಡರ್ ಕೂಡ ಪ್ಲೇಸ್ ಮಾಡುವುದಕ್ಕೆ ಆಗಿಲ್ಲ, though the licence has been given by the Governm nt of India. ಇಲ್ಲದೇಹೋದರೆ ರಾ ಮೆಟೀರಿಯಲ್ಸ್ ಕೊರತೆ ತುಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಮಾರ್ಕೆಟ್ಟಿನಲ್ಲಿರುವ ರೇಟ್ ಪ್ರಕಾರ ಆ ಕೆಪಾಸಿಟಿ ಪ್ರಕಾರ ಮಾಡಿದರೂ ಒಂದು ವರ್ಷದಲ್ಲಿ ಐದೂವರೆ ಕೋಟಿ ರೂಪಾಯಿಗಳು ಪೇಪರ್ ಇಂಡಸ್ಟ್ರಿಯಲ್ಲಿ ನಷ್ಟವಾಗುತ್ತದೆ. ಫುಲ್ ಪ್ರೊಡಕ್ಷನ್‌ಗೆ ಲೆಕ್ಕ ಹಾಕಿದರೂ ಕೂಡ ಐದೂವರೆ ಕೋಟಿ ರೂಪಾಯಿಗಳನ್ನು ನಾವು ಕಳೆದುಕೊಳ್ಳುತ್ತೇವೆ. ಪೇ ಬ್ಯಾಕ್ ಪೀರಿಯಡ್ ಇರತಕ್ಕದ್ದು ೧೨ ವರ್ಷ. ವರ್ಷಕ್ಕೆ ಐದೂವರೆ ಕೋಟಿ ರೂಪಾಯಿಗಳನ್ನು ಇವರಲ್ಲಿ ಲುಕ್ಸಾನು ಮಾಡಿಕೊಳ್ಳುವುದಾದರೆ ಯಾವರೀತಿ ಸಾಲ ತೀರಿಸುತ್ತೀರಿ? ಸೆಲ್ಲಿಂಗ್ ಪ್ರೈಸ್ ೮೦ ಕೋಟಿ ೫೦ ಲಕ್ಷ ರೂಪಾಯಿಗಳು, ಕಾಸ್ಟ್ ಆಫ್ ಪ್ರೊಡಕ್ಷನ್ ೭೫ ಕೋಟಿ, ನಷ್ಟ ಆಗತಕ್ಕದು ಐದುವರೆ ಕೋಟಿ ರೂಪಾಯಿ; ಹೀಗಿರುವಾಗ ಸಾಲದ ಹಣವನ್ನು ಯಾವರೀತಿ ತೀರಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬು

ದನ್ನು ಆಲೋಚನೆ ಮಾಡಿ. ಏನಾದರೂ ವಿವೇಚನೆ ಇದೆಯೆ? ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡುವಾಗ ಇಂಥ ದೊಡ್ಡ ಪ್ಲಾಂಟನ್ನು ಹಾಕುವುದು ಸೂಕ್ತವೇ, ಅಲ್ಲವೇ ಎಂಬುದನ್ನು ಯೋಚನೆ ಮಾಡುವುದಿಲ್ಲವೆ? ಈ ಹಣದ ಹೊಣೆಯನ್ನು ಯಾರು ಹೊರಬೇಕು? ೧೯೭೭ ರಲ್ಲೇ ಸದನದಲ್ಲಿ ನಾನು ಈ ಮಾತನ್ನು ಹೇಳಿದ್ದೆ. ಅದೆಲ್ಲಾ ಈಗ ಸತ್ಯರೂಪದಲ್ಲಿದೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಆದ್ದರಿಂದ ಸರ್ಕಾರ ನಾನು ಹಿಂದೆ ಹೇಳಿದಂತೆ ತಜ್ಞರುಗಳಿಂದ ಕೂಡಿದ ಸಮಿತಿ ಮೂಲಕ ಸಮಗ್ರವಾದ ತನಿಖೆ ಮಾಡಬೇಕೆಂದು ಒತ್ತಾಯ ಮಾಡಿ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿನ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮೂರು ಜನ ಮಾನ್ಯ ಸಚಿವರುಗಳು ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಅನುಮೋದಿಸಿ ಎಲ್ಲ ಬೇಡಿಕೆಗಳಿಗೂ ಹೃತ್ಪೂರ್ವಕವಾಗಿ ಬೆಂಬಲಿಸುತ್ತಾ ಕೆಲವು ಸಲಹೆ ಗಳನ್ನು ಕೊಡಬೇಕೆಂದು ಅಭಿಪ್ರಾಯಪಡುತ್ತೇನೆ. ಈಗಾಗಲೇ ಸುದೀರ್ಘವಾಗಿ ಭಾಷಣ ಮಾಡಿದಂಥ ಮಾನ್ಯ ದೇವೇಗೌಡರು ಭಾರಿ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳ ಬಗ್ಗೆ ತಮ್ಮ ಅಭಿಪ್ರಾಯ ಗಳನ್ನು ವ್ಯಕ್ತ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಅನೂಚಾನವಾಗಿ ನಡೆದುಬಂದಿರುವ ರೇಷ್ಮೆ ಇಲಾಖೆ ಬಗ್ಗೆ ನಾನು ಕೆಲವು ಸಲಹೆಗಳನ್ನು ಕೊಡುತ್ತೇನೆ. ಭಾರತ ದೇಶದಲ್ಲಿ ಅದರಲ್ಲೂ ಬಹು ಮುಖ್ಯವಾಗಿ ಕರ್ನಾಟಕದಲ್ಲಿ ರೇಷ್ಮೆ ಬೆಳೆಯುವುದಕ್ಕೆ ಒಳ್ಳೆಯ ಅವಕಾಶ ಇದೆ. ಇಲಾಖೆಯವರು ನಮ್ಮ ಮುಂದೆ ಸಣ್ಣ ಕಿರು ಹೊತ್ತಿಗೆಯನ್ನು ಇಡುತ್ತಾ ನಾಲ್ಕು ಪುಟಗಳನ್ನು ರೇಷ್ಮೆ ಇಲಾಖೆಯ ಕಾರ್ಯಕ್ರಮಗಳಿ ಗಾಗಿ ಮೀಸಲಾಗಿರಿಸಿದ್ದಾರೆ. ಅದರಲ್ಲಿ ಕೆಲವು ಆಕರ್ಷಣೀಯವಾದ ಅಂಕಿಅಂಶಗಳನ್ನು ಕೂಡ ಕೊಟ್ಟಿ ದ್ದಾರೆ. ಅವರ ಅಭಿಪ್ರಾಯದ ಪ್ರಕಾರ ಹೆಚ್ಚು ಕಡಿಮೆ ನಮ್ಮ ರಾಜ್ಯದಲ್ಲಿ ೧,೧೮,೪೦೦ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ವ್ಯವಸಾಯವನ್ನು ಮಾಡುತ್ತಿದ್ದಾರೆ. ೨.೫೧ ಮಿಲಿಯನ್ ಅಂದರೆ ೨೦ ಲಕ್ಷಕ್ಕೂ ಮೇಲ್ಪಟ್ಟು ಜನರಿಗೆ ಉದ್ಯೋಗಾವಕಾಶವನ್ನು ಈ ಕೈಗಾರಿಕೆ ಒದಗಿಸಿ ಕೊಟ್ಟಿದೆ. ೨೦ ಪರ್ಸೆಂಟ್ ಈ ಉದ್ಯೋಗವನ್ನು ಅವಲಂಬಿಸಿರುವ ಪೈಕಿ ಬಹಳ ಹಿಂದುಳಿದ ವರ್ಗ ಎಂದು ಏನು ಎಸ್. ಸಿ. ಎಸ್. ಟಿ. ಯವರನ್ನು ಕರೆಯುತ್ತೇವೆ ಅವರು ಶೇಕಡ ೨೦ ರಷ್ಟು ಸಂಖ್ಯೆಯಲ್ಲಿ ಇದರಲ್ಲಿ ಬರುತ್ತಾರೆಂಬ ಮಾತನ್ನು ಹೇಳಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ೨,೭೧೦ ಮೆಟ್ರಿಕ್ ಟನ್ ರೇಷ್ಮೆ ಉತ್ಪಾದನೆಯಾಗುತ್ತಿದ್ದು ಅದನ್ನು ೪,೩೫೦ ಟನ್‌ಗಳಾದರೂ ಏರಿಸಬೇಕೆಂಬ ಗುರಿಯನ್ನಿಟ್ಟುಕೊಂಡು ಅದಕ್ಕೆ ವಿಶ್ವ ಬ್ಯಾಂಕಿನ ನೆರವನ್ನು ಪಡೆದಿದ್ದೇವೆಂಬ ಮಾತನ್ನು ವರದಿಯಲ್ಲಿ ಹೇಳುತ್ತಾರೆ. ಈ ಎಲ್ಲ ಅಂಕಿ ಅಂಶಗಳನ್ನು ನೋಡಿದಾಗ ಈ ಕೈಗಾರಿಕೆ ನಮ್ಮ ರಾಜ್ಯದಲ್ಲಿ ಬಹಳ ಚೆನ್ನಾಗಿ ಬೆಳೆಯುತ್ತಿದೆ ಮತ್ತು ಬೆಳೆಯುತ್ತದೆ ಎಂಬ ಆಸೆ ಬರುತ್ತದೆ. ವಾಸ್ತವಾಂಶ ನೋಡಿದರೆ ಈ ಉದ್ಯಮದಲ್ಲಿ ಪೋಷಣೆ ಗಿಂತ ಶೋಷಣೆ ಹೆಚ್ಚಾಗಿ ಆಗುತ್ತಿದೆಯೇನೋ ಎಂದು ಮನವರಿಕೆಯಾಗುತ್ತಿದೆ. ಇಲಾಖೆಯವರೇ ಕೊಟ್ಟಿರುವ ಅಂಕಿಅಂಶದ ಪ್ರಕಾರ ಈ ಸಭೆಯ ಗಮನವನ್ನು ಸೆಳೆಯುತ್ತೇನೆ. ೪ ನೇ ಪುಟದಲ್ಲಿ ಎಷ್ಟು ಹಳ್ಳಿಗಳಲ್ಲಿ ಮತ್ತು ಎಷ್ಟು ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ವ್ಯವಸಾಯವನ್ನು ಮಾಡುತ್ತಿ ದ್ದಾರೆ, ಈ ಉದ್ಯಮವನ್ನು ಎಷ್ಟು ಸಂಸಾರಗಳು ಅವಲಂಬಿಸಿಕೊಂಡಿದೆ. ಎಷ್ಟು ಫಾರಂಗಳಿವೆ, ಎಷ್ಟು ಕಕೂನ್ ಮಾರ್ಕೆಟ್‌ಗಳಿವೆ ಎಂಬ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಎಲ್ಲದರಲ್ಲೂ ಕಳೆದ ವರ್ಷ ಕ್ಕಿಂತ ಸ್ವಲ್ಪ ಹೆಚ್ಚಿಗೆ ಸಂಖ್ಯೆಯನ್ನು ತೋರಿಸಿದ್ದಾರೆ. ಆದರೆ ಇದರಲ್ಲಿ ಅಭಿವೃದ್ಧಿ ಹೊಂದಿರುವುದನ್ನು ನಿರ್ಣಯ ಮಾಡಬೇಕಾದರೆ ಎಷ್ಟು ಗೂಡನ್ನು ತಯಾರು ಮಾಡಿದ್ದಾರೆ ಎಂಬುದನ್ನು ನೋಡಬೇಕಾಗು ತ್ತದೆ. ೧೯೮೦-೮೧ ರಲ್ಲಿ ಆಗಿರುವ ಉತ್ಪಾದನೆ ೩೫,೪೦೦ ಮೆಟ್ರಿಕ್ ಟನ್‌ಗಳು. ಎಲ್ಲಾ ಅಂಶಗಳೂ ಹೆಚ್ಚಾದಮೇಲೆ ಕಕೂನ್ ಪ್ರೊಡಕ್ಷನ್ ಕೂಡ ಜಾಸ್ತಿಯಾಗಬೇಕು. ಆದರೆ ೧೯೮೧-೮೨ ರಲ್ಲಿ ಕಕೂನ್ ಪ್ರೊಡಕ್ಷನ್ ನೋಡಿದರೆ ೩೦ ೪೬೮ ಮೆಟ್ರಿಕ್ ಟನ್‌ಗಳು. ಇಷ್ಟು ಗೂಡನ್ನು ಬೆಳೆದಿದ್ದಾರೆ. ಹೆಚ್ಚು ಕಡಿಮೆ ೫ ಸಾವಿರ ಮೆಟ್ರಿಕ್ ಟನ್ ಗೂಡುಗಳನ್ನು ಕಡಿಮೆ ಬೆಳೆದಿದ್ದಾರೆ. ೧೯೮೦-೮೧ ಮತ್ತು ೧೯೮೧-೮೨ ರ ಅಂಕಿಅಂಶಗಳನ್ನು ನೋಡಿದಾಗ ೫ ಸಾವಿರ ಮೆಟ್ರಿಕ್ ಟನ್ ರೇಷ್ಮೆ ಗೂಡಿನ ಉತ್ಪಾದನೆ ಕಡಿಮೆಯಾಗಿದೆ ಎಂಬುದನ್ನು ಗಮನಿಸಬಹುದು. ಏತಕ್ಕೆ ಉತ್ಪಾದನೆ ಕಡಿಮೆಯಾಯಿತು ? ಗುರಿ ಯನ್ನು ಹಾಕಿಕೊಂಡು ವಿಶ್ವಬ್ಯಾಂಕಿನ ನೆರವನ್ನು ಪಡೆದು ರಾಜ್ಯ ಸರ್ಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದರೂ ಏತಕ್ಕೆ ಉತ್ಪಾದನೆ ಕಡಿಮೆಯಾಯಿತು ? ಹಾಕಿಕೊಂಡಿದ್ದ ಗುರಿ ಎಲ್ಲಿ ಹೋಯಿತು? ಇದನ್ನು ಕೂಲಂಕಷವಾಗಿ ವಿಮರ್ಶೆ ಮಾಡಬೇಕು. ರೀಲಿಂಗ್ ಸೆಕ್ಟರ್‌ನಲ್ಲಿ ಬರುವುದಾದರೆ ಕಾಟೇಜ್

ಬೇಸಿನ್‌ಗಳ ಸಂಖ್ಯೆ ೨೬೭೯ ಇದ್ದದ್ದು ೧೯೮೧-೮೨ಕ್ಕೆ ೨,೯೭೯ ಆಗಿದೆ, ಅಂದರೆ ೩೦೦ ಬೇಸಿನ್ಸ್ ಜಾಸ್ತಿಯಾಗಿದೆ. ಫಿಲೀಚರ್ಸ್ ಹಿಂದ ೩೭೪೫ ಇದ್ದರೆ ೧೯೮೧ ರಲ್ಲಿ ಕೂಡ ಅಷ್ಟೇ ಇದೆ. ಒಂದು ಬೇಸಿನ್ ಕೂಡ ಜಾಸ್ತಿಯಾಗಿಲ್ಲ. ಚರಕಗಳನ್ನು ತೆಗೆದುಕೊಂಡರೆ ಹೋದ ವರ್ಷ ೧೭,೫೪೧ ಅದರ ಸಂಖ್ಯೆ ಇದ್ದರೆ ೧೯೮೧-೮೨ ರಲ್ಲಿ ೧೫,೫೪೧ ಆಗಿದೆ. ಉತ್ಪಾದನೆ ಜಾಸ್ತಿ ಮಾಡುವುದಕ್ಕೆ ನಾನಾ ಯೋಜನೆಗಳನ್ನು ಹಾಕಿಕೊಂಡಿದ್ದರೂ ಅದರ ಗತಿ ಏನಾಗಿದೆ ಎಂಬುದನ್ನು ನೋಡಿ. ಏತಕ್ಕೆ ನಿಮ್ಮ ಯೋಜನೆ ತಲೆಕೆಳಗಾಯಿತು ಎಂಬುದನ್ನು ವಿಮರ್ಶೆ ಮಾಡತಕ್ಕದ್ದು ಅವಶ್ಯ.

ಸ್ವಾಮಿ, ೨-೩ ಅಂಶಗಳನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮೊಟ್ಟ ಮೊದಲಿಗೆ ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ಹಿಪ್ಪನೇರಳೆ ಸೊಪ್ಪನ್ನು ಬೆಳೆಯುತ್ತಿದ್ದಾರೆ. ನಮ್ಮ ದೇಶದಲ್ಲಿ ಹಿಪ್ಪನೇರಳೆ ಸೊಪ್ಪನ್ನು ಬೆಳೆಯುವಂಥ ಪದ್ಧತಿ ಅನೂಚಾನವಾಗಿ ಬಂದಿದೆ. ಇತ್ತೀಚೆಗೆ ವೈಜ್ಞಾನಿಕವಾಗಿ ಕಂಡುಹಿಡಿದಂತ ಎಂ-೫ ಹಿಪ್ಪನೇರಳೆ ಸೊಪ್ಪನ್ನು ಕಳೆದ ವರ್ಷ ರಾಜ್ಯದಲ್ಲಿ ೪೯೭೨ ಹೆಕ್ಟೇರುಗಳಲ್ಲಿ ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಸುಮಾರು ೫,೦೦೦ ಮೆಟ್ರಿಕ್ ಟನ್ ಕಡ್ಡಿಯನ್ನು ಇಂಟ್ರಡ್ಯೂಸ್ ಮಾಡಿದ್ದೀರಿ. ಹೆಚ್ಚಿಗೆ ಬೆಳೆದಂಥ ಕಕೂನ್ ಎಲ್ಲಿ ಹೋಯಿತು ? ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ಮೊಟ್ಟೆ ಮಾಡಿರತಕ್ಕಂಥವರಿಗೆ ತಾವು ಕೊಟ್ಟಿರುವುದು ತಮ್ಮ ಅಂಕಿಅಂಶಗಳ ಪ್ರಕಾರ ೧೯೮೦-೮೧ ರಲ್ಲಿ ೮೦, ೧೯೮೧-೮೨ ರಲ್ಲಿ ೮೪. ಮತ್ತು ಲೈಸೆನ್ಸ್‌ಡ್ ಸೀಡ್ ಪ್ರಿಪೇರರ್ಸ್ ೧೯೮೦-೮೧ ರಲ್ಲಿ ೬೨೩ ಇದ್ದದ್ದು, ೧೯೮೧-೮೨ಕ್ಕೆ ೬೨೬ ಆಯಿತು. ಅಂದರೆ ಮೂರು ಜನ ಮಾತ್ರ ಮುಂದೆ ಬಂದಿದ್ದಾರೆ. ಪ್ರೊಡಕ್ಷನ್ಸ್ ಆಫ್ ಗೌರ್ನಮೆಂಟ್ ೧೯೮೦-೮೧ ರಲ್ಲಿ ಸುಮಾರು ೧೫೨೩ ಲಕ್ಷ, ೧೯೮೧-೮೨ ರಲ್ಲಿ ೧೬೬೦ ಲಕ್ಷ ತಯಾರು ಮಾಡಿದ್ದಾರೆ. ಮಾನ್ಯ ಮಿತ್ರರಾದಂಥ ಮಾಯಣ್ಣನವರು ಸಭೆಯ ಮುಂದೆ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಸೀಡ್ ಕಕೂನ್ ಬೆಳೆಯುತಕ್ಕಂಥ ಪ್ರದೇಶದಲ್ಲಿ ವಿಶೇಷವಾದ ರಿಯಾಯಿತಿಯನ್ನು ರೈತರಿಗೆ ಕೊಟ್ಟಿದ್ದಾರೆ, ಪ್ರೋತ್ಸಾಹ ಕೊಟ್ಟಿದ್ದಾರೆಂದು. ಮಾನ್ಯ ಮಂತ್ರಿಯವರು ಸಭೆಯಲ್ಲಿ ಅಪ್ಪಣೆ ಕೊಡಿಸಿದರು ? ಬಿತ್ತನೆ ಗೂಡಿನ ನೆರವು ಬೆಲೆಯನ್ನು ಸರ್ಕಾರ ಕೊಟ್ಟಿದೆ ಎಂದು. ಕೊಡಬೇಕೆಂದು ತೀರ್ಮಾನಿಸಿದೆ ಎಂದು ಹೇಳಿ ಅಡ್ಡಿ ಇಲ್ಲ ಕೊಟ್ಟಿದೆ ಎಂದು ಹೇಳುವುದು ಸರಿಯಲ್ಲ. ಸೀಡ್ ಏರಿಯಾ ಎಂದು ಎರಡು ಪ್ರದೇಶಗಳನ್ನು ಇಟ್ಟುಕೊಂಡಿದ್ದೀರಿ. ಒಂದು ಅತ್ತಿ ಬೆಲೆ, ಇನ್ನೊಂದು ಆನೇಕಲ್ಲು ಜೊತೆಗೆ ಕುಣಿಗಲ್‌ನಲ್ಲಿ ಕೂಡ ಲೋಕಲ್ ಸೀಡನ್ನು ತಯಾರು ಮಾಡುತ್ತಿದ್ದಾರೆ. ಬೈವೋಲ್ಟೀನ್ ಬೆಳೆಯುತಕ್ಕವರಿಗೆ ಉತ್ತೇಜನ ಕೊಡುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಸೀಡ್ ಏರಿಯಾವನ್ನು ಕಾಪಾಡುವುದಕ್ಕೆ, ಸೀಡ್ ಬೆಳೆಯುವಂಥ ರೈತರಿಗೆ ಉತ್ತೇಜನ ಕೊಡುವುದಕ್ಕೆ ನಾನಾ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಬೈವೋಲ್ಟೀನ್ ೫೫೦ ಗೂಡಿಗೆ ಒಂದು ಕೆ. ಜಿ. ಆಗುತ್ತದೆ. ಅದನ್ನು ೬೦ ೬೫ ರೂಪಾಯಿಗಳಿಗೆ ಮಾರಾಟ ಮಾಡುತ್ತಾನೆ. ಮೊಟ್ಟೆ ಮಾಡುವುದಕ್ಕೋಸ್ಕರ ಅವನು ಕೊಂಡುಕೊಳ್ಳತಕ್ಕ ಸಂದರ್ಭದಲ್ಲಿ ೧,೦೦೦ ಗೂಡಿಗೆ ೬೦ ರೂಪಾಯಿ ಕೊಟ್ಟರೆ. ೫೫೦ಕ್ಕೆ ೩೫-೪೦ ರೂಪಾಯಿ ಆಗುತ್ತದೆ. ಯಾವ ರೈತ ತಾನೆ ನಷ್ಟ ಮಾಡಿಕೊಂಡು ಸೀಡ್ ಬೆಳೆಯುವುದಕ್ಕೆ ಹೋಗುತ್ತಾನೆ ? ಇವತ್ತು ಸೀಡ್ ಬೆಳೆಯುತಕ್ಕವರಿಗೆ ನಷ್ಟವನ್ನು ತುಂಬಿಕೊಡಬೇಕು. ಅಷ್ಟೇ ಅಲ್ಲ, ಸೀಡ್ ಬಿತ್ತನೆ ಮಾಡತಕ್ಕವರಿಗೆ ಇನ್‌ಸೆಂಟೀವ್ ಕೊಡಬೇಕು. ತಾನು ಏನು ಬಿತ್ತನೆ ಗೂಡನ್ನು ಬೆಳೆಯುವಂಥ ರೈತರಿಗೆ ನೆರವು ಬೆಲೆಯನ್ನು ಕೊಡುತ್ತೇವೆಂದು ಹೇಳಿದ್ದೀರಿ, ಅದನ್ನು ಆದಷ್ಟು ಶೀಘ್ರವಾಗಿ ಮಾಡಬೇಕೆಂದು ಹೇಳುತ್ತೇನೆ. ಒಂದು ಸಾವಿರ ಗೂಡನ್ನು ತೆಗೆದುಕೊಂಡು ಹೋಗಿ ಮೊಟ್ಟೆ ಮಾಡತಕ್ಕ ರೈತರ ಅನುಭವವನ್ನು ಕೇಳಿದರೆ, ಊಜಿ ನೊಣಗಳ ರೋಗದಿಂದ ಕೂಡಿರತಕ್ಕಂಥ ಗೂಡುಗಳನ್ನು ತೆಗೆದುಕೊಂಡು ಹೋಗುವುದರಿಂದ, ನಾವು ನಿರೀಕ್ಷಿತ ಮಟ್ಟದಲ್ಲಿ ಮೊಟ್ಟೆಗಳನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ೧,೦೦೦ ಮೊಟ್ಟೆಯನ್ನು ತಯಾರು ಮಾಡಬೇಕಾದರೆ, ೩೦೦ ಲೇಸ್ ಲಾಸಾಗುತ್ತದೆ. ಇನ್ನು ೭೦೦ ಗೂಡಿನಲ್ಲಿ ಮುನ್ನೂರು ಮೊಟ್ಟೆಗಳನ್ನು ಉಳಿಸಿಕೊಳ್ಳಬೇಕಾಗುತ್ತದೆ. ಇವತ್ತು ಮುಂಗಾರಿನಲ್ಲಿ ಮೊಟ್ಟೆ ಬೆಲೆ ೧೦೦ ರೂಪಾಯಿಗಳಿಗೆ ೧೦೦ ಲೇಸ್ ಇರುತ್ತದೆ. ಒಂದು ಮೊಟ್ಟೆಗೆ ಒಂದು ರೂಪಾಯಿ ಇರುತ್ತದೆ. ತಾವು ಪತ್ರಿಕೆಗಳಲ್ಲಿ ನೋಡಿರಬಹುದು, ಒಂದು ಚಿತ್ರವನ್ನು ತೋರಿಸಿ, ಮೊಟ್ಟೆಗೋಸ್ಕರ ಜನ ಹಾತೊರೆಯುತ್ತಿರುವುದು. ಅನೇಕ ಜನಗಳಿಗೆ ಮೊಟ್ಟೆ ಸಿಗದೇ ನಿರಾಶರಾಗಿ ಹೋಗಬೇಕಾದಂಥ ಪರಿಸ್ಥಿತಿ ಕೂಡ ರಾಜ್ಯದಲ್ಲಿ ಇದೆ. ಅದು ತಮ್ಮ ಗಮನಕ್ಕೂ ಬಂದಿದೆ. ಸ್ವಾಮಿ, ತಾವು ವಿಶ್ವಬ್ಯಾಂಕಿನ ಮೂಲಕ ಹಣ ತೆಗೆದುಕೊಂಡಿದ್ದೀರಿ. ಕಳೆದ

ಎರಡು ವರ್ಷಗಳಿಂದ ಮಾಸ್ಟರ್ ಗ್ರೈನೇಜುಗಳು ಏನು ಕೆಲಸ ಮಾಡುತ್ತವೆ ? ಮಾಸ್ಟರ್ ಗ್ರೈನೇಜುಗಳಿಂದ ಒಂದು ಕೋಟಿ ಮೊಟ್ಟೆಗಳನ್ನು ತಯಾರು ಮಾಡುವ ಗುರಿಯನ್ನು ಇಟ್ಟುಕೊಂಡಿದ್ದೀರಿ. ಇವತ್ತು ಒಂದು ಕೋಟಿ ಮೊಟ್ಟೆಗಳನ್ನು ತಯಾರು ಮಾಡಬೇಕಾದರೆ, ರಾಜ್ಯದಲ್ಲಿ ೧೯–೨೦ ಮಾಸ್ಟರ್ ಗ್ರೈನೇಜುಗಳು ಬರಬೇಕು. ಇವತ್ತು ಎಷ್ಟು ಬಂದಿವೆ ? ಇದರಲ್ಲಿ ನಿಧಾನವಾಗುವುದಕ್ಕೆ ಕಾರಣ ವೇನು ಮದ್ದೂರು ಮತ್ತು ಪಾಂಡವಪುರದಲ್ಲಿ ಕಟ್ಟಡಗಳನ್ನು ಕಟ್ಟಿದ್ದೀರಿ. ಸ್ವಾಮಿ, ಇವತ್ತು ಜಪಾನ್‌ನಲ್ಲಿ ೨-೩ ಫರ್ಮ್‌ಗಳು ಇಡೀ ದೇಶಕ್ಕೆ ಬೇಕಾದಂಥ ಮೊಟ್ಟೆಯನ್ನು ಸರಬರಾಜು ಮಾಡುತ್ತಿವೆ. ನಮ್ಮ ರಾಜ್ಯ ಬೇಕಾದಂಥ ಮೊಟ್ಟೆಗಳನ್ನು ೨೦ ಮಾಸ್ಟರ್ ಗ್ರೈನೇಜ್‌ಗಳಿಂದ ಮಾಡುವುದಕ್ಕೆ ಸಾಧ್ಯವಿಲ್ಲವೆ ? ತಾವು ಇದರ ಬಗ್ಗೆ ಹೆಚ್ಚಿನ ಗಮನಕೊಡಬೇಕೆಂದು ಸಲಹೆ ಮಾಡುತ್ತೇನೆ. ತಾವು ಮೊಟ್ಟೆಗಳ ಉತ್ಪಾದನೆ ಕಡೆಗೆ ಹೆಚ್ಚು ಹೆಚ್ಚು ನಿಗಾ ಕೊಡದೇ ಹೋದರೆ, ರೋಗರಹಿತ ಮೊಟ್ಟೆಗಳನ್ನು ರೈತರಿಗೆ ಒದಗಿಸದೇ ಹೋದರೆ, ತಾವು ಏನೊಂದು ಗುರಿಯನ್ನು ಮುಟ್ಟಬೇಕೆಂದು ಇದ್ದೀರಿ ಅದನ್ನು ಮುಟ್ಟುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಸೀಡ್ ರೇರರ್ಸ್ನ ಸೆಲೆಕ್ಟ್ ಮಾಡಬೇಕೆಂದಿರುವುದು ಒಳ್ಳೆಯದು. ಬಿ-೧, ಬಿ-೨ ಮಾಡಿದ್ದೀರಿ ಇದು ಒಳ್ಳೆಯ ಕೆಲಸ. ಬಿ-೩ ನಲ್ಲಿ ರಿಜಿಸ್ಟರ್ಡ್ ಸೀಡ್ ಕೊಡುವಂತೆ ಮಾಡಬೇಕಾಗಿತ್ತು. ಚಾಕಿ ರೇರಿಂಗ್ ಸೆಂಟರುಗಳಿಂದ ಇತರೆ ಮಲ್ಬರಿ ಗಾರ್ಡನ್‌ಗಳಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಿದರೆ, ಸಬ್ಸಿಡಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದರೆ, ಬೇಕಾದಂಥ ಗೂಡನ್ನು ಸರಬರಾಜು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹಾಗಿಲ್ಲದೇ ಕಮರ್ಷಿಯಲ್ ದೃಷ್ಟಿಯಿಂದ ಕೊಡುವುದಾದರೆ, ತಾವು ಹಾಕಿಕೊಂಡಿರತಕ್ಕ ಗುರಿಯನ್ನು ಮುಟ್ಟುವುದು ಕಷ್ಟವಾಗುತ್ತದೆ.

ಸ್ವಾಮಿ, ಚಾಕಿ ರೇರಿಂಗ್ ಸೆಂಟರುಗಳನ್ನು ಕಳೆದ ವರ್ಷ ೩೨೬ ಪ್ರಾರಂಭ ಮಾಡಿದ್ದೀರಿ. ಅದಕ್ಕೆ ಮೊದಲು ೯೯೭ ಚಾಕಿ ರೇರಿಂಗ್ ಸೆಂಟರುಗಳು ಇದ್ದವು, ರೇಷ್ಮೆ ಕೃಷಿ ಅಂದರೆ ಲೇಬರ್ ಇಂಟೆನ್ಸೀವ್. ಒಂದು ಎಕರೆಯಲ್ಲಿ ಹಿಪ್ಪುನೇರಳೆ ಸೊಪ್ಪನ್ನು ಹಾಕಿದರೆ ಅದು ೬ ಜನಗಳಿಗೆ ಕೆಲಸ ಕೊಡತಕ್ಕ ಕಸಬು. ಚಾಕಿ ರೇರಿಂಗ್ ಸೆಂಟರುಗಳಲ್ಲಿ ಏನು ಮಾಡುತ್ತಿದ್ದಾರೆ, ಸ್ವಲ್ಪ ಹೆಚ್ಚು ಕಡಿಮೆ ಇವತ್ತು ರಾಜ್ಯದಲ್ಲಿ ೧೦,೫೦೧ ರೇಷ್ಮೆ ಕೃಷಿಯನ್ನು ಅವಲಂಬಿಸಿರುವ ಹಳ್ಳಿಗಳು ಇವೆ. ಪ್ರತಿ ಹಳ್ಳಿಗೆ ಒಂದೊಂದು ಚಾಕಿರೇರಿಂಗ್ ಸೆಂಟರುಗಳನ್ನು ಕೊಡಬೇಕಾಗಿತ್ತು. ಆದರೆ, ಇವತ್ತು ಆಗಿರುವುದಾದರೂ ಏನು ? ಹತ್ತು ಹಳ್ಳಿಗಳಿಗೆ ಒಂದು ಚಾಕಿ ರೇರಿಂಗ್ ಸೆಂಟರುಗಳಿಲ್ಲ. ಉತ್ತಮ ಮೊಟ್ಟೆಗಳನ್ನು ಸರಬರಾಜು ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ, ಹತ್ತು ರೂಪಾಯಿ ಜಾಸ್ತಿಯಾದರೂ ತೆಗೆದುಕೊಂಡು ಹೋಗುತ್ತಾರೆ. ಸಾಕಿದಂತ ಒಳ್ಳೆಯ ಮರಿಗಳನ್ನು ಕೊಳ್ಳುವುದಕ್ಕೆ ಸಂತೋಷ ಪಡುತ್ತಾರೆ. ಇದಕ್ಕೆ ತಾವು ದುಡ್ಡು ಹಾಕಬೇಕಾಗಿಲ್ಲ, ನಷ್ಟ ಅನುಭವಿಸಬೇಕಾಗಿಲ್ಲ ಒಳ್ಳೆಯ ಮೊಟ್ಟೆಗಳನ್ನು ಇಟ್ಟು ಮರಿ ಮಾಡಿ, ಸಾಕುವುದರಿಂದ ರೇರಿಂಗ್ ಕೂಡ ಚೆನ್ನಾಗಿ ಬರುತ್ತೆ ಇಳುವರಿ ಕೂಡ ಚೆನ್ನಾಗಿ ಬರುತ್ತೆ. ತಾವು ಏನೊಂದು ಶುಲ್ಕ ವಿಧಿಸುತ್ತೀರಿ ಅದನ್ನು ಕೊಡುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಅದಕ್ಕೋಸ್ಕರ ರೇಷ್ಮೆ ವ್ಯವಸಾಯ ಇರತಕ್ಕ ಪ್ರತಿ ಹಳ್ಳಿಗಳಲ್ಲಿಯೂ ಚಾಕಿ ರೇರಿಂಗ್ ಸೆಂಟರುಗಳನ್ನು ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ವಿಶ್ವಬ್ಯಾಂಕ್ ಯೋಜನೆ ಮೂಲಕ ಹಣ ಬರುತ್ತೆ. ನಾನು ಈ ವಿಚಾರದಲ್ಲಿ ಅಧಿಕಾರಿಗಳ ಜೊತೆ ಚರ್ಚ ಮಾಡಿದ್ದೇನೆ. ಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇನೆ, ಹಣಕಾಸಿನ ಮಂತ್ರಿಯವರ ಜೊತೆ ಚರ್ಚೆ ಮಾಡಿದ್ದೇನೆ. ವಿಶ್ವಬ್ಯಾಂಕಿನ ಹಣ ಬರುವುದು ನ್ಯೂ ಏರಿಯಾಕ್ಕೆ ಬೈವೋಲ್ಟೀನ್ ಬೆಳೆಯತಕ್ಕ ಏರಿಯಾಗಳಿಗೆ ಎಂದು ಹೇಳುತ್ತಾರೆ. ಆದರೆ ಟ್ರೆಡೀಷನಲ್ ಏರಿಯಾ ಅಂದರೆ ಹಳೇ ಮೈಸೂರು ಭಾಗವನ್ನು ನೆಗಲೆಕ್ಟೆಡ್ ಮಾಡಿದ್ದಾರೆಂದು ತಪ್ಪಾಗುವುದಿಲ್ಲ.

ನಾನು ಇಲಾಖೆ ಜೊತೆಯಲ್ಲಿ ಮತ್ತು ತಮ್ಮ ಜೊತೆಯಲ್ಲಿ ಮಾತನಾಡಿದಾಗ ಏನು ಹೇಳುತ್ತೀರಿ, ಈವನ್ ಫೈನಾನ್ಸ್ ಮಿನಿಸ್ಟರ್ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ, ಈ ವರ್ಲ್ಡ್ ಬ್ಯಾಂಕ್ ಹಣ ಹೆಚ್ಚಿಗೆ ತೆಗೆದುಕೊಳ್ಳಲಿಕ್ಕೆ ನೀವು ನ್ಯೂ ಏರಿಯಾಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡುತ್ತೀರಿ. ಈ ಟ್ರೆಡೀಷನಲ್ ಏರಿಯಾ, ಹಳೇ ಮೈಸೂರು ಏರಿಯಾ ಎಲ್ಲಿ ನಾವು ಬೆಳೆಯುತ್ತಿದ್ದೇವೆ. ಮೂರು ಡಿಸ್ಟ್ರಿಕ್ಟ್, ಕೋಲಾರ, ಮೈಸೂರು, ತುಮಕೂರು ಆ ಏರಿಯಾ ನೆಗ್ಲೆಕ್ಟ್ ಮಾಡಿದ್ದೀರಿ. ತಾವು ಪ್ಲಾನ್ ಮಾಡತಕ್ಕ ಸಂದರ್ಭದಲ್ಲಿ ಕೆಲವರು ಏನೋ ಹೇಳುತ್ತಾರೆ. ನಾನು ಈ ವರ್ಲ್ಡ್ ಬ್ಯಾಂಕ್ ವಿಚಾರದಲ್ಲಿ ಫೈನಾನ್ಸ್ ಮಿನಿಸ್ಟರ್ ಜೊತೆ ಮಾತನಾಡಿದೆ, ಸ್ವಾಮಿ, ಅದಕ್ಕೆ ವರ್ಲ್ಡ್ ಬ್ಯಾಂಕ್ ಹಣ ಬರುತ್ತದೆ.

ಅದಕ್ಕೆ ಏತಕ್ಕೆ ತಲೆಕೆಡಿಸಿಕೊಳ್ಳುತ್ತೀರಿ. ನಮ್ಮ ರಾಜ್ಯದ ಬೊಕ್ಕಸದಿಂದ ಫೈನಾನ್ಸ್ ಮಾಡಿ ಹಳೆಯ ಟ್ರೆಡೀಷನಲ್ ಏರಿಯಾದಲ್ಲಿ ಕೆಲವು ಯೋಜನೆಗಳನ್ನು ಜಾರಿಗೆ ತರಬಹುದಲ್ಲ ಅಂಥ ಹೇಳಿದಾಗ ಅವರು ಏನು ಹೇಳಿದರು ಅಂದರೆ ವರ್ಲ್ಡ್ ಬ್ಯಾಂಕ್‌ನವರು ನಮಗೆ ಆ್ಯಸ್ ಇಟ್ ಈಸ್ ಕೊಡುವುದಿಲ್ಲ. ವರ್ಲ್ಡ್ ಬ್ಯಾಂಕ್ ಹಣ ನಾವು ನೂರು ರೂಪಾಯಿ ತೆಗೆದುಕೊಳ್ಳಬೇಕಾದರೆ ಆದಕ್ಕೆ ಸ್ಟೇಟ್ ಕಾಂಟ್ರಿಬ್ಯೂಷನ್ ಇದೆ. ಸೆಂಟ್ರಲ್ ಕಾಂಟ್ರಿಬ್ಯೂಷನ್ ಇದೆ. ಇದೆಲ್ಲಾ ಸೇರಿದರೆ ವರ್ಲ್ಡ್ ಬ್ಯಾಂಕ್ ಹಣ ನಮ್ಮ ಕೈಗೆ ಬರುತ್ತದೆ. If we don't contribute the State's share we cannot get World Bank assistance. ತಾವು ಯೋಜನೆ ಮಾಡತಕ್ಕ ಸಂದರ್ಭಕ್ಕೆ ಅದು ಟ್ರೆಡಿಷನಲ್ ಏರಿಯಾ ಇರಬಹುದು. ನ್ಯೂ ಏರಿಯಾ ಇರಬಹುದು, ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಇರಬಹುದು ಇಲ್ಲದೇ ಇರಬಹುದು ಕೈಗಾರಿಕಾ ದೃಷ್ಟಿಯಿಂದ ಸ್ಟೇಟ್ ಬಡ್ಜೆಟ್ ತಾವು ತಯಾರು ಮಾಡುವ ದೃಷ್ಟಿಯಲ್ಲಿ ಎಲ್ಲಾ ಏರಿಯಾದಲ್ಲೂ ಕೂಡ ಅಗತ್ಯವಿರುವ ಯೋಜನೆಗಳನ್ನು ಪ್ರತ್ಯೇಕ ಮಾಡಲಿಕ್ಕೆ ಯಾವರೀತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಯಾವರೀತಿ ಹಣವನ್ನು ಕೇಂದ್ರದಿಂದ ವರ್ಲ್ಡ್ ಬ್ಯಾಂಕ್ ನಿಂದ ಪಡೆಯಬೇಕು, ವರ್ಲ್ಡ್ ಬ್ಯಾಂಕಿನಿಂದ, ಕೇಂದ್ರದಿಂದ ಬರದೇ ಇದ್ದರೆ, ನಮ್ಮ ಬೊಕ್ಕಸದಿಂದ ಯಾವ ಯೋಜನೆಗಳಿಗೆ ಹಣವನ್ನು ಹಾಕಬೇಕು ಬಹುಶಃ ಇದರ ಬಗ್ಗೆ ಡೀಟೈಲ್ ಆಗಿ ಯೋಚನೆ ಮಾಡತಕ್ಕದ್ದು ಬಹಳ ಅವಶ್ಯಕ, ಇವೊತ್ತು ಮಾರ್ಕೆಟಿಂಗ್ ಇಂಪ್ರೂವ್‌ಮೆಂಟ್ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ತಾವು ಹೇಳಿದಿರಿ ಸುಮಾರು ಮೂರು ವರ್ಷದಲ್ಲಿ ೨೧೫ ಕೋಟಿ ರೂಪಾಯಿ ಅಂಥ. ೧೯೭೯-೮೦ರಲ್ಲಿ ೭೩ ಲಕ್ಷ ರೂಪಾಯಿ ಮಾರ್ಕೆಟ್ ಶುಲ್ಕ ಬಂದಿರುವುದು. ೧೯೮೦-೮೧ರಲ್ಲಿ ೧೬೮ ಲಕ್ಷ ರೂಪಾಯಿ. ೧೯೮೧-೮೨ರಲ್ಲಿ ೨ ೫ ಲಕ್ಷ ರೂಪಾಯಿ ತಾವು ಖರ್ಚು ಮಾಡಿರತಕ್ಕಂತಾದ್ದು ೧೯೭೯-೮೦ರಲ್ಲಿ ೪೮ ಲಕ್ಷ ರೂಪಾಯಿ, ೧೯೮೧-೮೨ರಲ್ಲಿ ೫೦ ಲಕ್ಷ ರೂಪಾಯಿ ತಾವು ಇದನ್ನು ಜನರಲ್ ರಿಸೋರ್ಸ್‌ನಲ್ಲಿ ತೆಗೆದುಕೊಳ್ಳುತ್ತೀರಾ ಸ್ಟೇಟ್ ರೆವಿನ್ಯೂನಲ್ಲಿ ತೆಗೆದುಕೊಳ್ಳುತ್ತೀರಾ ಅಂಥ ಕೇಳಿದಾಗ ತಾವು ಹೇಳಿದಿರಿ ಹೈ ಲೆವೆಲ್ ಕಮಿಟಿ ಇದೆ ಅವರು ತೀರ್ಮಾನ ಮಾಡಿದ ಹಾಗೆ ನಾವು ಖರ್ಚು ಮಾಡಬೇಕು ಅಂಥ ಹೇಳಿದಿರಿ ಅದು ತಪ್ಪು. ಅದು ಸರಿಯಾದ ಪದ್ಧತಿಯಲ್ಲ ಏಕೆಂದರೆ ಫೈನಾನ್ಸ್ ಮಿನಿಸ್ಟರ್ ಅಭಿಪ್ರಾಯದಲ್ಲಿ ಇದು ಸ್ಟೇಟ್ ರೆವಿನ್ಯೂಸ್‌ಗೆ ಹೋಗುತ್ತದೆ. ಈಗ ಟ್ರೆಡೀಷನಲ್ ಏರಿಯಾದಲ್ಲಿ ೧೦ ಮಾರ್ಕೆಟ್ ಇದೆ, ಈ ೧೦ ಮಾರ್ಕೆಟ್‌ಗಳನ್ನು ಇಂಪ್ರೂವ್ ಮಾಡಲಿಕ್ಕೆ ಇಷ್ಟು ಹಣ ಬೇಕಾಗುತ್ತದೆಂದು ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದಿರಿ ಅಂದರೆ ಈ ಹಣದಲ್ಲಿ ಪ್ರೊವೈಡ್ ಮಾಡಲಿಕ್ಕೆ ಬರುತ್ತದೆ. ಇಲ್ಲದಿದ್ದರೆ ಬರುವುದಿಲ್ಲ. ಇವೊತ್ತು ೫ ಲಕ್ಷ ರೂಪಾಯಿ ಮಾರ್ಕೆಟ್ ಫೀಜ್ ಅಂಥ ಕಲೆಕ್ಟ್ ಮಾಡಿದ್ದೀರಿ. ಈ ಟ್ರೆಡಿಷನ್ ಏರಿಯಾದಲ್ಲಿ ಓಪನ್ ಮಾಡಿರತಕ್ಕ ಮಾರ್ಕೆಟ್‌ಗಳ ಅಭಿವೃದ್ಧಿಗಾಗಿ ಏನೇನು ಖರ್ಚು ಮಾಡಿಲ್ಲ ಆ ಹಣ ಜನರಲ್ ರೆವಿನ್ಯೂಗೆ ಹೋಗುತ್ತದೆ. ನಾನು ಮೊನ್ನೆ ರಸ್ತೆ ವಿಚಾರ ಕೇಳಿದಾಗ, ಒಂದು ಹೈಕೋರ್ಟ್ ಡಿಸಿಷನ್ ಇದೆ ಅದು ಸರ್ಕಾರದ ಗಮನಕ್ಕೆ ಬಂದಿದೆಯೋ ಅಂಥ ಕೇಳಿದ್ದಕ್ಕೆ ಹೌದು ಬಂದಿದೆ ಎಂದು ಹೇಳಿದಿರಿ. ಇವೊತ್ತು ತಾವು ಏನು ಶುಲ್ಕ ಅಂಥ ವಸೂಲು ಮಾಡುತ್ತೀರಾ ಇದು ದಿಸ್ ಈಸ್ ನಾಟ್ ಎ ಫೀಸ್. ಇದು ಅಲ್ಲಿ ವ್ಯಾಪಾರಕ್ಕಾಗಿ ಬರತಕ್ಕ ರೈತನಿಗೆ ಅನುಕೂಲಗಳನ್ನು ಒದಗಿಸಿ ಕೊಡಲಿಕ್ಕಾಗಿ ವಸೂಲು ಮಾಡತಕ್ಕ ಹಣ, ಆದರೆ ಇಲಾಖೆಯಲ್ಲಿ ವಸೂಲು ಮಾಡತಕ್ಕ ಹಣ ಏನಾಗಿದೆ'' It goes to the general revenue. That means, it is just a tax item for the State. ಇದು ಆಗಬಾರದು. ಇದನ್ನು ತಾವು ಬದಲಾವಣೆ ಮಾಡತಕ್ಕದ್ದು ಅವಶ್ಯಕ. ತಾವು ಹೈ ಪವರ್ ಕಮಿಟಿ ಅಂಥ ಏನು ಹೇಳಿದಿರಿ. It is only a Committee on paper. ಹೈ ಪವರ್ ಕಮಿಟಿ ಯಾವತ್ತು ಕಾನ್‌ಸ್ಟಿಟ್ಯೂಟ್ ಮಾಡಿದ್ದೀರಿ, ಆವೊತ್ತಿನಿಂದ ಇವೊತ್ತಿನವರೆಗೆ ಏನು ಕೆಲಸ ಕಾರ್ಯ ಮಾಡಿದ್ದಾರೆ ಅದನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ, It is only on paper. It has no powers. It is not functioning ತಾವು ಉತ್ತರ ಕೊಡುವಾಗ ಅದರ ಬಗ್ಗೆ ಹೇಳಿದರೆ ನಾನು ಹೇಳಿದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. So, it will not serve any purpose. The are local committees. ಇನ್ನು ಅಗ್ರಿಕಲ್ಚರ್ ಪ್ರಾಡ್ಯೂಸ್ ಕಮಿಟಿಯಲ್ಲಿ ಏನು ಮಾಡಿದ್ದೀರಿ ಇವೊತ್ತು they collect market fee and they spend if for the improvement of the market yard and to provide facilities for the people who come to the market. But why not here ?

ಈ ಅಂಶವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ. ಅದರ ಬಗ್ಗೆ ಎರಡು ಮೂರು ಪ್ಯಾರಾ ಇದರಲ್ಲಿ ನಿರೂಪಣೆ ಮಾಡಿದ್ದೀರಿ ಬಹಳ ಮುಖ್ಯವಾಗಿ ಕರ್ನಾಟಕ ಸಿರಿಕಲ್ಚರ್ ಪ್ರಾಜೆಕ್ಟ್ ಅದರ ಕೆಳಗೆ ತಾವು ಏನು ತೆಗೆದುಕೊಳ್ಳುತ್ತಿದ್ದೀರಿ. It is stated that "Karnataka Sericulture Project assisted by the World Bank besides organising the Technical Service Centres, Chawki Rearing Centres, Training Schools, Construction of Market Buildings, Grainage Buildings, Model Chwki Rearing centres and Hostel and training Schools buildings have been taken-up for construction" ಇದು ಏನೇನು ನಮಗೆ ಕಾಣುತ್ತಿಲ್ಲ. ನ್ಯೂ ಏರಿಯಾದಲ್ಲಿ ಏನಾದರೂ ಮಾಡುತ್ತಿದ್ದಾರೋ ಏನೋ. ಟ್ರೆಡಿಷನಲ್ ಎಲ್ಲಿ ಇವೊತ್ತು ೨,೭೦೦ ಮೆಟ್ರಿಕ್ ಟನ್ ಬೆಳೆಯುತ್ತಿದ್ದೇವೆ ಅಲ್ಲಿ ಏನೇನು ನಮ್ಮ ಕಣ್ಣಿಗೆ ಕಾಣುತ್ತಿಲ್ಲ, ಶಿವಮೊಗ್ಗದಲ್ಲಿ ೧೫ ಲಕ್ಷ ರೂಪಾಯಿ ಮಾರ್ಕೆಟ್ ಯಾರ್ಡ್ ಕಟ್ಟಿ, ಮಾರ್ಕೆಟ್ ಯಾರ್ಡ್ ರೆಡಿ ಇದೆ ಅಂತ ಹೇಳುತ್ತಿದ್ದಾರೆ. ಇವೊತ್ತು ಕಕೂನ್ ಬೆಳೆಯುತಕ್ಕ ಅನೇಕ ಪ್ರದೇಶಗಳಲ್ಲಿ ರಸ್ತೆಗಳಲ್ಲಿ ಲಾಟ್ ಕಟ್ಟುತ್ತಿದ್ದಾರೆ. ಕೊಳ್ಳೇಗಾಲ ಆಯಿತು, ಟೀ ನರಸೀಪುರ ಆಯಿತು, ಸಂತೇಮಾರನಹಳ್ಳಿ ಆಯಿತು. ತಾವು ಕಕೂನ್ ಬೆಳೆಯುದೇ ಇರ ತಕ್ಕಂಥ ಶಿವಮೊಗ್ಗದಲ್ಲಿ ಮಾರ್ಕೆಟ್ ಯಾರ್ಡ್ ಕಟ್ಟಿ ಅದು ರೆಡಿ ಇದೆ ಅಂದರೆ, For how long the money will be wasted. ಕಲ್ಯಾಣ ಮಂಟಪ ಮಾಡಬಹುದು. ಅದಕ್ಕೆ ಬೇಕಾದರೆ ಒಂದು ಬೋರ್ಡ್ ಹಾಕಿ ಒಂದು ನಾಮಿನಲ್ ರೆಂಟ್ ಕೊಡಿ ಎಂದು ಹೇಳಬಹುದು. You want to spend the world bank money ? That is correct. ಇನ್ನು ಸಿರಿಕಲ್ಚರ್ ಪ್ರಾಜೆಕ್ಟ್ ಅಂತ ಹೇಳಿ ತಾವು ಏನು ಇಷ್ಟು ಐಟಮ್ ಹಾಕಿದ್ದೀರಿ ಈ ಟ್ರೆಡೀಷನಲ್ ಏರಿಯಾಸ್‌ಗೆ ಐಟಮ್‌ಗಳಿಗೆ ಸಂಬಂಧ ಇಲ್ಲ. ತಾವು ಕಲ್ಪನೆ ಮಾಡತಕ್ಕಂಥಾದ್ದು ಒಳ್ಳೆಯದು, ಇನ್ನು ಫಾರಮ್ ಕ್ರೆಡಿಟ್ ೮೫ ಕೋಟಿ ರೂಪಾಯಿ ವಿಶ್ವಬ್ಯಾಂಕ್ ನೆರವನ್ನು ಪಡೆದಂಥ ನಿಮ್ಮ ಅಚೀವ್‌ಮೆಂಟ್ ಬಹಳ ಚೆನ್ನಾಗಿದೆ. Commercial Banks have advanced loan of 66 lakhs rupees. ೮೫ ಕೋಟಿ ರೂಪಾಯಿ ನೀವು ಅಸಿಸ್ಟೆನ್ಸ್ ತೆಗೆದುಕೊಂಡಿರುವುದು. ನಿಮ್ಮ ಕಮರ್ಷಿಯಲ್ ಬ್ಯಾಂಕ್ ಅಡ್ವಾನ್ಸ್ ಮಾಡಿರುವುದು ಎಷ್ಟು ೬೬ ಲಕ್ಷ ರೂಪಾಯಿಗಳು ೧೯೮೧-೮೨ರಲ್ಲಿ ಲೋನ್ ಅಡ್ವಾನ್ಸ್ ೧೫.೨೬ ಲಕ್ಷ ರೂಪಾಯಿ. ಸ್ವಾಮಿ ರೀಲರ್ಸ್‌ಗೆ ಕೊಟ್ಟಿರತಕ್ಕದ್ದು ಇಂಡಸ್ಟ್ರಿಯಲ್ ಕೋ ಆಪರೇಟೀವ್ ಸೊಸೈಟಿ ಡ್ಯೂರಿಂಗ್ ದಿ ಸೇಮ್ ಪೀರಿಯಡ್ ಅಡ್ವಾನ್ಸ್ ೨೦ ಲಕ್ಷ ರೂಪಾಯಿ. ಇವೊತ್ತು ರೀಲರ್ಸ್ ಎಷ್ಟು ಜನ ಇದ್ದಾರೆ. ಎಷ್ಟು ನೂಲು ತಯಾರು ಮಾಡುತ್ತಾರೆ ತಾವು ಕೊಟ್ಟಿರತಕ್ಕ ಲೋನ್ ಎಷ್ಟು ೨೧.೩೦ ಲಕ್ಷ ರೂಪಾಯಿ. Is this the method of implementing world bank project, I want to know? You have to spend the amount within 1985. Why are you not capable of utilising the funds made available to you ? ತಮ್ಮ ಯೋಜನೆ ಯಾವ ದಿಸೆಯಲ್ಲಿ ಹೋಗುತ್ತಿದೆ. ಸ್ವಾಮಿ, ಸಿಲ್ಕ್ ಇಂಡಸ್ಟ್ರೀಸ್ ಮೂರು ಕಾರ್ಪೊರೇಷನ್ ಮಾಡಿದ್ದೀರಿ, What is your achievement ? In your report it is stated that

> "During the year 1981-82 two silk filatures one at Kanakapur another at T. Narasipura, Spun Silk Mills at Channapatna and Silk Weaving Factory at Mysore were transfered to the Karnataka Silk Industries Corporation Limited" Is it the progress ?

ಒಂದು ವರ್ಷದಲ್ಲಿ ಏನು ಮಾಡಿದ್ದೀರಿ ಅಂದರೆ ಎರಡು ಫಿಲೇಚರ್, ಒಂದು ಸ್ಪನ್ ಸಿಲ್ಕ್ ಮಿಲ್ ಫ್ಯಾಕ್ಟರಿಯನ್ನು ಟ್ರಾನ್ಸ್‌ಫರ್ ಮಾಡಿದ್ದೀರಿ, You want to call this a report ? ಒಂದು ವರ್ಷದಲ್ಲಿ what is your achievement? ವರ್ಲ್ಡ್ ಬ್ಯಾಂಕಿನಿಂದ ಎಷ್ಟು ಹಣ ತಂದಿದ್ದೀರಿ ? ಎರಡು ಫಿಲೇಚರ್ ತೆಗೆದುಕೊಂಡಿದ್ದೀರಲ್ಲ ಅದರ ಮಾಡರನೈಸೇಷನ್ ಸ್ಕೀಮ್ ಎಷ್ಟು ಮುಂದು ವರಿದಿದೆ? design not replaced. The first sentence reads as "two silk

filatures once at Kanakapur and another at T. Narasipura, Spun Silk Mills at Channapatna and Silk Weaving Factory at Mysore were transferred to the Karnataka Silk Industries Corpcration Limited. ಅದು ಆಯಿತು. ಇನ್ನು ಸೆಕೆಂಡ್ ಸೆಂಟೆನ್ಸ್ ನೋಡಿದರೆ, During the year 1981–82, 7 filatures, one twisting unit, one weaving factory and one spun silk mill have provided employment to about 3,800 persons. ಫಸ್ಟ್ ಸೆಂಟೆನ್ಸ್ ಮತ್ತು ಸೆಕೆಂಡ್ ಸೆಂಟೆನ್ಸ್‌ಗೂ ಏನು ಅರ್ಥ ಸ್ವಲ್ಪ ಹೇಳಿ ಮೊದಲನೇ ಸೆಂಟೆನ್ಸ್‌ನಲ್ಲಿ ಎಷ್ಟು ಟ್ರಾನ್ಸ್‌ಫರ್ ಮಾಡಿದೆವು. ಇನ್ನು ಎರಡನೇ ಸೆಂಟೆನ್ಸ್‌ನಲ್ಲಿ ೭ ಫಿಲೇಚರ್ ಒಂದು ಟೆಸ್ಟಿಂಗ್ ಯೂನಿಟ್, ಒಂದು ವೀವಿಂಗ್ ಫ್ಯಾಕ್ಟರಿ ಒಂದು ಸ್ಪನ್ ಸಿಲ್ಕ್ ಮಿಲ್‌ನಲ್ಲಿ ೩,೮೦೦ ಜನರಿಗೆ ಕೆಲಸ ಕೊಟ್ಟಿದ್ದೇವೆಂದು ಇದೆ, ನಾನು ಈ ಸಭೆಯ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ, ನಾನು ಹಿಂದೆ ಒಂದು ಪ್ರಶ್ನೆಯನ್ನು ಕೇಳಿದ್ದೆ.

ಈ ೪ ಸಿಲ್ಕ್ ಫಿಲೇಚರ್‌ಗಳ ಸ್ಥಿತಿ ಏನು ಎಂದು ನಾನು ಕೇಳಿದ್ದೆ, ಆದಕ್ಕೆ you had given the following table :

	Installed capacity	Sanction accorded	Working condition	
1	2	3	45	
Govt. Silk Factory Kollegal	470 basins	200	157	53
Govt. Silk Factory Mamballi	168 ,,	100	42	58
Govt. Silk Factory Santhemaralli	104 ,;	100	55	45
Govt. Silk Factory Chamarajanagar	116 ,,	116	34	82

The argument you have put forth is that your filatures are incurring losses. But what is the intention of running filatures ? Modernise them.

ತಾವು ಕನಕಪುರ ಮತ್ತು ಟಿ. ನರಸೀಪುರದಲ್ಲಿ ಈ ಕಾರ್ಪೊರೇಷನ್‌ಗಳನ್ನು ಮಾಡುತ್ತಿದ್ದೀರಿ. ಅದಕ್ಕೆ ಬದಲು ತಾವು ಈ ೭ ಫಿಲೇಚರ್‌ಗಳನ್ನು ಮಾರ್ಡರ್‌ನೈಸ್ ಮಾಡವುದಕ್ಕಾಗುತ್ತಿರಲಿಲ್ಲವೆ? ವಿಶ್ವ ಬ್ಯಾಂಕಿನ ನೆರವನ್ನು ತೆಗದುಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೆ?.

ಶ್ರೀ ವೈ. ರಾಮಕೃಷ್ಣ:—ಇವು ನಷ್ಟದಲ್ಲಿ ನಡೆಯುತ್ತಿರುವುದರಿಂದ ವಿಶ್ವಬ್ಯಾಂಕ್‌ನಿಂದ ಆರ್ಥಿಕ ನೆರವು ನೀಡುವುದಕ್ಕಾಗುವುದಿಲ್ಲವೆಂದು ಹೇಳಿದ್ದರಿಂದ ಇದನ್ನು ನಾವು ಮಾಡುವುದಕ್ಕಾಗಲಿಲ್ಲ. ಈ ಫ್ಯಾಕ್ಟರಿಗಳು ನಷ್ಟವಾಗುವುದಕ್ಕೆ ಕಾರಣ ಏನಂದರೆ ಇವು ೧೯೨೦–೩೦ನೇ ಇಸವಿಯಲ್ಲಿ ಪ್ರಾರಂಭವಾದವು. ಜನರು ಇದನ್ನು ಗೃಹ ಕೈಗಾರಿಕೆಯಾಗಿ ನೆಡೆಸಲಿ, ಇದನ್ನು ಡೆಮಾನ್‌ಸ್ಟ್ರೇಷನ್ ಆಗಿ ತೆಗದು

ಕೊಳ್ಳೋಣವೆಂದು ಸರ್ಕಾರದವರು ಮಾಡಿದರು. ಇವತ್ತು ಅಕ್ಯುಮುಲೇಟೆಡ್ ಲಾಸನ್ನು ತಮ್ಮ ಮುಂದಿಡುತ್ತಿದ್ದೀವೆ, ಈಗ ಆಧುನೀಕರಣವನ್ನು ಮಾಡಬೇಕೆಂದು ವಾದವು ಸಭೆಯ ಮುಂದಿದೆ, ಅದನ್ನು ನಾವು ಮಾಡುತ್ತೇವೆ.

ಶ್ರೀ ಕೆ. ರಾಜುಗೌಡ:—ಸ್ವಾಮಿ, ತಾವು ಇವತ್ತು ಕೊಟ್ಟಿರತಕ್ಕ ಉತ್ತರ ೧೯೮೧–೮೧ಕ್ಕೆ ೪ ಸರ್ಕಾರೀ ರೇಷ್ಮೆ ಕಾರ್ಖಾನೆಗಳಲ್ಲಿ ಉಂಟಾಗಿರತಕ್ಕ ನಷ್ಟ ಎಷ್ಟು ಎನ್ನುವ ಪ್ರಶ್ನೆಗೆ ೬.೮೦ ಕೋಟಿ ರೂ. ಅಂತ ಹೇಳಿದ್ದೀರಿ. ಆದರೆ ಇಡೀ ಈ ಕಾರ್ಖಾನೆಗಳಲ್ಲಿ ೧೯೮೦–೮೧ಕ್ಕೆ ೯೧ ಲಕ್ಷ ರೂ. ಅಕ್ಯುಮುಲೇಟೆಡ್ ಲಾಸ್ ಅಂತ ತಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ನಿಮ್ಮ ಇಲಾಖೆಯ ಅಧಿಕಾರಿಗಳು ಇಲ್ಲಿ ಗೊತುಕೊಂಡು ಏನು ಮಾಡುತ್ತಿರುತ್ತಾರೆ?

ಶ್ರೀ ಎಂ.ಸಿ.ಬಸಪ್ಪ :—ಸ್ವಾಮಿ, ಮಾನ್ಯ ಮಂತ್ರಿಗಳು ಈ ಒಂದು ಉತ್ತರವನ್ನು ಕೊಡುತ್ತಾರೆಂದು ನನಗೆ ಗೊತ್ತಿತ್ತು. This is not a new criterion. The subject is debated on the floor of this House.

ಸರ್ಕಾರ ಇದನ್ನು ಅರ್ಥಮಾಡಿಕೊಳ್ಳಬೇಕು. ಅವತ್ತು ಏನಿತ್ತು ಎಂದರೆ there was lot of fluctuations in the market ಇವತ್ತು ನೀವು ಈ ಫಿಲೇಚರ್‌ಗಳನ್ನು ನಿಲ್ಲಿಸದಿದ್ದರೆ ಪ್ರೈವೇಟ್ ರೀಲರ್ಸ್ ರೈತರಿಗೆ ಸರಿಯಾದ ಬೆಲೆಯನ್ನು ಕೊಡುವುದಿಲ್ಲ. ರೈತರಿಗೆ ಸರಿಯಾದ ಬೆಲೆ ಸಿಕ್ಕದಿದ್ದರೆ ಇವತ್ತು ನಿಮ್ಮ ವಿಶ್ವಬ್ಯಾಂಕ್ ಅಲ್ಲ, Whatever assistance you may give, if there is no economic price, you will uproot mulberry. You will go in for a commodity which is more economical. The economics behind this will have to be looked into. ಈ ರೀತಿ ಲಾಸ್ ಆಗುವುದನ್ನು ಸರ್ಕಾರದವರು ಈ ಮನೆಯಲ್ಲಿ ಒಪ್ಪಿಕೊಂಡಿದ್ದಾರೆ. ಆದರೂ ಇದನ್ನೂ ನಡೆಸುತ್ತಿದ್ದೀರಿ, ಕಾರಣ ಇವತ್ತು ೨೦ ಲಕ್ಷ ಜನರಿಗೆ ಉದ್ಯೋಗ ಕೊಡಬೇಕಾದರೆ What is your investment in any other industries? Please let me know. Yuu have invested crores of rupees but what is the employment generation you have done. You cannot even give employment to 100 persons even if you invest Rs 10 crores. Without any investment, this would generate employment to nearly 20 lakhs of people. To-day you are saying that you are incurring losses but what is the loss in industrial sector? Please let us know When it can give employment for 20 lakhs of people, should not the Government be prepared to invest a crore of rupees? Of course you may incur loss,

ಆ ದೃಷ್ಟಿಯಿಂದ ಇದನ್ನು ನೋಡಬಾರದೆಂದು ಅನೇಕಸಾರಿ ನಾವು ಈ ಸಭೆಯಲ್ಲಿ ಹೇಳಿದ್ದೇವೆ. ಸರ್ಕಾರದವರೂ ಕೂಡ ಆ ದೃಷ್ಟಿಯಲ್ಲಿ ನೋಡುವುದಿಲ್ಲವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಇವತ್ತು ಏನು ಮಾಡಿದ್ದಾರೆಂದರೆ ವಿಶ್ವಬ್ಯಾಂಕ್‌ಗೆ ೨ ಫಿಲೇಚರ್‌ಗಳನ್ನು ಕೊಟ್ಟು ಉಳಿದವುನ್ನು ಕೈಬಿಟ್ಟಿದ್ದೀರಿ. What is your Silk Industries Corporation doing What one member of the Central Silk Board's Filature Committee told is they have made a recommendation for the establishment of a Corporation. Let there be participation of Government of India as well as the State Government but all filatures should be taken over by Corporation. ಇವತ್ತು ಲಾಸ್ ಆಗುತ್ತಿದೆಯೆಂದು ತಾವು ಹೇಳುತ್ತಿದ್ದೀರಿ. ಚನ್ನಪಟ್ಟಣ ಸ್ಪನ್ ಸಿಲ್ಕ್ ಫ್ಯಾಕ್ಟರಿ ಲಕ್ಷಾಂತರ ರೂಪಾಯಿ ಲಾಭವನ್ನು ಗಳಿಸುತ್ತಿದೆ, ನಿಮ್ಮ ವೀವಿಂಗ್ ಫ್ಯಾಕ್ಟರಿ ಲಕ್ಷಾಂತರ ರೂ. ಲಾಭವನ್ನು ಗಳಿಸುತ್ತಿದೆ. The idea of forming a Corporation is just to settle here. ಇಲ್ಲ ಲಾಸ್ ಆದರೆ ಕೊಡಿ, ಬೇರೆ ಫ್ಯಾಕ್ಟರಿಗಳಿಂದ ಲಾಭ ಬರುತ್ತಿದೆ ಎಲ್ಲವನ್ನೂ ಒಟ್ಟಿಗೆ ಸೇರಿಸಿ ಮ್ಯಾನೇಜ್ ಮಾಡಬೇಕೆಂಬ ದೃಷ್ಟಿಯಿಂದ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್

ಎಂದು ಮಾಡಿದೆ. ವಿಶ್ವ ಬ್ಯಾಂಕ್‌ನವರ ಜೊತೆಯಲ್ಲಿ ತಾವು ಅನೇಕ ಅಗ್ರಿಮೆಂಟ್‌ಗಳನ್ನು ಮಾಡಿಕೊಂಡಿದ್ದೀರಿ. ಈ ರೀತಿ ಮಾಡಿಕೊಳ್ಳುವಾಗ ಈ ಕೈಗಾರಿಕೆಯನ್ನು ತಾವು ವಿಶೇಷವಾಗಿ ಅಧ್ಯಯನ ಮಾಡಿ ಅಗ್ರಿಮೆಂಟ್ ಮಾಡಿಕೊಂಡಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಅವರು ಯಾವುದಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ ಅದಕ್ಕೆ ತಾವು ಎಸ್ ಎಂದು ಹೇಳಿದ್ದೀರಿ. ಇದು ಇಂಡಸ್ಟ್ರೀಸ್ ನಡೆಸುವ ಲಕ್ಷಣವಲ್ಲ. ಒಂದು ಸೆಕ್ಟರ್‌ನಲ್ಲಿ ಲಾಸ್ ಆದರೆ ಇನ್ನೊಂದ ಸೆಕ್ಟರ್‌ನಲ್ಲಿ ಫ್ರಾಫಿಟ್ ಬರತ್ತದೆ. After all, what is the object of having an industry. For 20 lakhs of people, or for 20% of SC/STs, how would you provide employment. Will you give them doles? ಅವರನ್ನು ಮನೆಯಲ್ಲಿ ಕೂಡಿಸಿ ಪೆನ್‌ಷನ್ ಕೊಡುವುದಕ್ಕಾಗುತ್ತದೆಯೇ? ಅವರಿಗೆ ಸಬ್ಸಿಡಿ ಕೊಡುವುದಕ್ಕಾಗುತ್ತದೆಯೇ? ಈ ದೃಷ್ಟಿಯಿಂದ ಕೈಗಾರಿಕೆಯನ್ನು ತಾವು ನೋಡಬೇಕೇ ಹೊರತು ಈ ಸಿಲ್ಕ್ ಫಿಲೇಚರ್‌ನಲ್ಲಿ ೫ ಕೋಟಿ ರೂ. ನಷ್ಟವಾಗುತ್ತಿದೆ, ೧೦ ಕೋಟಿ ರೂ. ನಷ್ಟವಾಗುತ್ತಿದೆಯೆಂದು ಹೇಳುವುದು ಸರಿಯಲ್ಲ. ನಿಮ್ಮ ಸ್ಪನ್ ಸಿಲ್ಕ್ ಫ್ಯಾಕ್ಟರಿ ಒಂದರಲ್ಲೇ ಸುಮಾರು ೧೬ ಲಕ್ಷ ರೂ, ಲಾಭ ಬಂದಿದೆ, ಒಂದು ವರ್ಷ ೭೫ ಲಕ್ಷ ರೂ. ಲಾಭ ಬಂದಿದೆ. ಬೇಕಾದರೆ ಅಂಕಿಅಂಶಗಳನ್ನು ತೆಗೆದುನೋಡಿ. ಆದರೆ ಈಗಿನ ಪರಿಸ್ಥಿತಿ ಏನಿದೆ ಎಂಬುದು ನನಗೆ ಗೊತ್ತಿಲ್ಲ......

ಶ್ರೀ ಎಂ. ಅಬ್ದುಲ್ ಲತೀಫ್ —ಸ್ವಾಮಿ, ಸ್ಪನ್ ಸಿಲ್ಕ್ ಫ್ಯಾಕ್ಟರಿಯಲ್ಲಿ ಲಾಭ ಬಂದಿರುವುದು ಏತಕ್ಕೆ ಎಂಬುದನ್ನು ಹೇಳುತ್ತೀರಾ? ಯಾರ ಹಣದಲ್ಲಿ? ಹೇಳುತ್ತೀರಾ?

ಶ್ರೀ ಎಂ. ಸಿ. ಬಸಪ್ಪ — ಇಂಡೈರೆಕ್ಟ್ ಆಗಿ ವೀವರ್ಸ್ ಮತ್ತು ರೀಲರ್ಸ್‌ನಿಂದ ಇವತ್ತು ತಾವು ಸಿಲ್ಕ್ ವೇಸ್ಟ್‌ಗೆ ಸರಿಯಾದ ಬೆಲೆಯನ್ನು ಕೊಡುತ್ತಿಲ್ಲ, ಅದನ್ನು ಹೊರದೇಶಗಳಿಗೆ ಕಳುಹಿಸುತ್ತೇವೆಂದು ಯಾರಾದರೂ ಹೇಳಿದರೆ, ಇದರಿಂದ ನಮಗೆ ಲಾಸ್ ಆಗುತ್ತದೆ. ಆದ್ದರಿಂದ ಮೊದಲು ಇದನ್ನು ನಮಗೆ ಫಿಕ್ಸೆಡ್ ಪ್ರೈಸ್‌ನಲ್ಲಿ ಸರಂಡರ್ ಮಾಡಿ ಅನಂತರ ನೀವು ಎಕ್ಸ್‌ಪೋರ್ಟ್ ಮಾಡಿಕೊಳ್ಳಿ ಎಂದು ಕಂಡೀಷನ್ ಹಾಕಿ ಲಿಂಕ್ ಸಿಸ್ಟಂನ್ನು ಏನು ಮಾಡಿದ್ದೀರಿ ಇದರಿಂದಾಗಿ ನಿಮ್ಮ ಸ್ಪನ್ ಸಿಲ್ಕ್‌ಗೆ ಲಾಭ ಬರುತ್ತಿದೆ. ಒಟ್ಟಿನಲ್ಲಿ ಲಾಭ ಬಂದಿದೆ ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಿ.

ಇನ್ನು ಒಂದು ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ನ್ನು ಮಾಡಿದ್ದೇವೆಂದು ತಾವು ಹೇಳುತ್ತಿದ್ದೀರಿ ತಾವು ಇದನ್ನು ಮಾಡಿದ ಉದ್ದೇಶವಾದರೂ ಏನು? ಪ್ರೈಸ್‌ನ್ನು ಸ್ಟೆಬಿಲೈಸ್ ಮಾಡುವುದಕ್ಕೆ ಕಳೆದ ವರ್ಷ ತಾವೇ ನೋಡಿದ್ದೀರಿ. ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ೬೦೦-೭೦೦ ರೂ ಇದ್ದದ್ದು ಡಿಸೆಂಬರ್ ತಿಂಗಳ ಹೊತ್ತಿಗೆ ೬೦೦ ರೂ, ಗಳಿಗೆ ಇಳಿಯಿತು. ಈ ಮಾರ್ಕೆಟಿಂಗ್ ಬೋರ್ಡ್ ಇದ್ದರೆ ಪ್ರೈಸ್ ಕಡಿಮೆ ಆದಾಗ ಅದಕ್ಕೆ ಒಂದು ಸಪೋರ್ಟ್ ಪ್ರೈಸ್‌ನ್ನು ಕೊಟ್ಟು ಸ್ಟಾಕ್ ಇಟ್ಟುಕೊಂಡು ಪ್ರೈಸ್ ಜಾಸ್ತಿ ಆದಾಗ ಅದನ್ನು ಮಾರ್ಕೆಟ್‌ಗೆ ಒಂದು ಕಡೆ ವೀವರ್ಸ್‌ಗೂ ಇನ್ನೊಂದು ಕಡೆ ರೀಲರ್ಸ್‌ಗೂ ಲಾಭವಾಗುತ್ತದೆ ಈ ದೃಷ್ಟಿಯಿಂದ ಈ ಸಿಲ್ಕ್ ಬೋರ್ಡ್‌ನ್ನು ಮಾಡಿ ಅದಕ್ಕೆ ೫—೬ ಕೋಟಿ ರೂ, ಬಂಡವಾಳ ಕೊಟ್ಟಿದೆ. ಈ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ನವರು ಸುಮಾರು ೧೨ ಪರ್ಸೆಂಟ್ ಲಾಭವನ್ನು ಪಡೆದಿದ್ದೇವೆಂದು ತಾವೇ ಹೇಳಿದ್ದೀರಿ. ಆದರೆ ಸ್ಟೆಬಿಲೈಸೇಷನ್‌ನ್ನು ಮಾಡುವುದಕ್ಕೆ ಸಾಧ್ಯವಿದೆಯೇ? ಇದನ್ನು ತಾವು ಪರಿಶೀಲಿಸಬೇಕು. They have not fulfilled that objective. They might have made some crores of rupees profit. ಇವತ್ತು ಹೆಚ್ಚಿಗೆ ಅಂದರೆ ೫೦ ಲಕ್ಷ ಅಥವಾ ೧ ಕೋಟಿ ಲಾಭ ಸಂಪಾದನೆ ಮಾಡಿರಬಹುದು. ಈಗ ಸಿಲ್ಕ್ ಡೆವಲಪ್‌ಮೆಂಟ್ ಫಂಡ್ ಅಂತ ತಾವು ಮಾಡಿದ್ದೀರಿ. I do not know what development is going on and what type of development the Government contemplates. We have not yet known what type of development you are going to make. Regarding industrial establishment for silk, Sri Devegowda spoke about the dutch assisted projects. But this will be a failure if you locate it in one place.

ಸ್ವಾಮಿ ತಾವು ೨೫೦ ವೀವಿಂಗ್ ಕಮ್ ರೇರಿಂಗ್ ಹೌಸ್‌ಗಳನ್ನು ತೆಗೆಯುತ್ತೇವೆಂದು ಹೇಳಿದೀರಿ, ರೇರಿಂಗ್ ಸೆಂಟರ್ ಮಾಡಿದರು ಫೀಡಿಂಗ್ ಎಲ್ಲಿ ಮಾಡುತ್ತೀರಿ. ಬೆಂಗಳೂರಿನಲ್ಲಿ ಸೊಪ್ಪು ಬೆಳೆದು ಮೈಸೂರಿಗೆ ಕಳುಹಿಸುವುದಕ್ಕೆ ಆಗುತ್ತದೆಯೇ Every farm must have a rearing house

ಅಥವಾ ಪ್ರತಿಯೊಬ್ಬ ರೈತನಿಗೂ ರೇರಿಂಗ್ ಷೆಡ್ಸ್ ಕಟ್ಟಿದರೆ ಅವರು ರೇರಿಂಗ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ನೀವೇನಾದರೂ Do you give artifucial feeding ? ತಾವು ೨೨೮ ಷೆಡ್ಸ್ ಕಟ್ಟುತ್ತೇವೆಂದು ಹೇಳಿದರಲ್ಲ, ಅದನ್ನು ಯಾವ ಪ್ಯಾಟರ್ನ್‌ನಲ್ಲಿ ಕಟ್ಟುತ್ತೀರಿ. ತಾವು ಮೈಸೂರು ಸಿಟಿಗೆ ಡಚ್ ಪ್ರಾಜೆಕ್ಟ್ ಬರುತ್ತದೆ ಎಂದು ಷೆಡ್ಸ್ ಹಾಕುತ್ತಿದ್ದೇವೆಂದು ಹೇಳಿದಿರಿ. Where is the farm ? How can you construct rearing for 228 people ? Living and rearing is possible. But, what about the feeding ? Who is going to feed ? Where are the mulberry leave ? ರಾಮನಗರ, ಚನ್ನಪಟ್ಟಣ, ಚಾಮರಾಜನಗರ ಈ ಭಾಗದಲ್ಲಿ ಮುನಿಸಿಪಾಲಿಟಿ ಲಿಮಿಟ್ಸ್ ಒಳಗೇ ರೇರಿಂಗ್ ಷೆಡ್ಸ್‌ನ್ನು ಎಸ್ಟಾಬ್ಲಿಷ್‌ಮೆಂಟ್ ಮಾಡುತ್ತೇವೆಂದು ಹೇಳಿದಿರಿ. ಅಲ್ಲಿ ಅಕ್ಕಪಕ್ಕದಲ್ಲಿರುವವರಿಗೆ ಅದರ ವಾಸನೆ ಸಹಿಸುವುದಕ್ಕೆ ಸಾಧ್ಯವೇ ಆಗುವುದಿಲ್ಲ. It is also felt that it is a health hazard. Unless one gets acquainted. ಚಾಮರಾಜನಗರ ಒಂದರಲ್ಲಿ ಸುಮಾರು ೧೦೦ಕ್ಕೂ ಹೆಚ್ಚು ರೇರಿಂಗ್ ಶೆಡ್ಸ್ ಇದೆ. But what about the inhabitants who live by the side of those sheds ? For 365 days they will have to smell it. They will have to live with it. You are constructing industrial sheds ಇದನ್ನು ಎಕ್ಸ್‌ಪರಿಮೆಂಟ್ ಮಾಡಿ ಇದೆಲ್ಲ ಸೌಕರ್ಯಗಳನ್ನು ಕೊಟ್ಟ ನಂತರ You can take up projects. In Ramanagar, Chamarajanagar where this reeling is contemplated. Reeling sheds ತಾವು ೧೫-೨೦ ಎಕರೆ ಜಮೀನನ್ನು ಆಕ್ವೈರ್ ಮಾಡಿ ರೇರಿಂಗ್ ಶೆಡ್ಸ್ ಕಟ್ಟತಕ್ಕಂಥದ್ದು, All facilities within that reeling industrial estate ಅದನ್ನು ಏತಕ್ಕೆ ಇನ್ಫ್ರಾಸ್ಟ್ರಕ್ಚರ್ ಮಾಡಿ ಕ್ರಿಯೇಟ್ ಮಾಡಿಕೊಡಬಾರದೆಂದು ಹೇಳುತ್ತೇನೆ. Probably when Sri Venugopal Naidu was the Director of Sericulture he has prepared a scheme. I do not know that has happened to that scheme. ಈವತ್ತಿಗೂ ತಮ್ಮನ್ನು ವಿನಂತಿ ಮಾಡಿಕೊಳ್ಳುತ್ತೇನೆ ಈ ಒಂದು ಕೈಗಾರಿಕೆಗೆ ಇಂಡಸ್ಟ್ರಿಯಲ್ ಶೆಡ್ಸ್ ಕಟ್ಟಿಸಿಕೊಡತಕ್ಕಂಥದ್ದು ರಾ ಮೆಟೀರಿಯಲ್ಸ್ ಕೊಡತಕ್ಕಂಥದ್ದು, ಟ್ರೈನಿಂಗ್ ಕೊಡತಕ್ಕಂಥದ್ದು, ಫ್ಯೂಯಲ್, ಎಲೆಕ್ಟ್ರಿಸಿಟಿ, ವಾಟರ್ ಫೆಸಿಲಿಟೀಸ್ ಇವೆಲ್ಲ ಸೌಲಭ್ಯಗಳನ್ನು ಕೊಟ್ಟು ಈ ಕೈಗಾರಿಕೆಯನ್ನು ಅಭಿವೃದ್ಧಿಪಡಿಸತಕ್ಕಂಥದ್ದು ಬಹಳ ಅಗತ್ಯವಿದೆ. ತಾವು ವಿಶ್ವಬ್ಯಾಂಕ್‌ನಿಂದ ಹಣವನ್ನು ತೆಗೆದುಕೊಳ್ಳಬಹುದು. ವರ್ಲ್ಡ್ ಬ್ಯಾಂಕಿನಿಂದ ಏಥೇಚ್ಛವಾಗಿ ಹಣ ಬರತಕ್ಕಂಥ ಕಾಲದಲ್ಲಿ ಇದರ ಅಸಿಸ್ಟೆನ್ಸ್‌ನಿಂದ ಗ್ರೇನೇಜ್ ಬಿಲ್ಡಿಂಗ್ ಬರುತ್ತಾ ಇದೆ. We have provided cars for Officers ಆದನ್ನು ಅವರು ಒಂದೇ ವರ್ಷಕ್ಕೆ ಕಂಡಮ್ ಮಾಡಿ ಮೂಲೆಗೆ ಬಿಸಾಕುತ್ತಿದ್ದಾರೆ. ಏತಕ್ಕೆಂದರೆ ಅದು ಹೋದರೆ ವರ್ಲ್ಡ್ ಬ್ಯಾಂಕಿನವರು ಮತ್ತೆ ಕೊಡುತ್ತಾರೆ ಎನ್ನುವ ಭಾವನೆ ಇದು ಸರಿಯಲ್ಲ. ಸ್ವಾಮಿ, ತಾವು ಆಫೀಸರ್ಸ್‌ಗಳನ್ನು ಹೊರ ದೇಶಕ್ಕೆ ಕಳುಹಿಸಲು ೩೫ ಜನ ಆಫೀಸರನ್ನು ಸೆಲೆಕ್ಟ್ ಮಾಡಿರುತ್ತೀರಿ. You have selected a team of Officers ಅವರನ್ನು ಕಳುಹಿಸಿ ಬಂದ ಮೇಲೆ ಅವರಿಂದ ಯಾವ ರೀತಿ ಉಪಯೋಗ ಪಡೆಯುತ್ತಿದ್ದೀರಿ. ಅದು ನನಗೆ ತಿಳಿಸಬೇಕು. ಯಾವ ಯಾವ ಆಫೀಸರ್ ಫೀಲ್ಡ್ ಟ್ರೈನಿಂಗ್ ತೆಗೆದುಕೊಂಡು ಬಂದಿರುತ್ತಾರೆ, ಚಾಕಿ ಸೆಂಟರ್ಸ್, ಗ್ರೇನೇಜ್ ಸೂಪರ್‌ವೈಸ್ ಮಾಡತಕ್ಕಂಥದ್ದು, ಇದೇ ಮೊದಲಾದವುಗಳು. ಅವರು ಟ್ರೈನಿಂಗ್ ಹೋಗುವುದಕ್ಕೆ ಮೊದಲು ಯಾವ ಸೀಟ್‌ನಲ್ಲಿ ಕುಳಿತಿದ್ದರೋ, ಟ್ರೈನಿಂಗ್ ಹೋಗಿಬಂದಮೇಲೂ ಅದೇ ಸೀಟಿನಲ್ಲಿ ಕುಳಿತು ಕೆಲಸ ಮಾಡುತ್ತಿದ್ದಾರೆ. where is the need for additional training ? Why waste of money and time for this training ? ನೀವು ಫಾರಿನ್‌ಗೆ ಟ್ರೈನಿಂಗ್‌ಗಾಗಿ ಡೆಪ್ಯೂಟ್ ಮಾಡುವಾಗ One may be deputed to study grainages, another may be deputed to study marketing, another to study chacki rearing centre. There are different aspects of the Industry. These people should specialise. ಈವತ್ತು ಜಪಾನ್ ನೋಡಿರಬಹುದು. ಚೈನಾಕ್ಕೆ ಹೋಗಿರಬಹುದು. ಕೊರಿಯಾ ಹೋಗಿಬಂದಿರಬಹುದು. These are the countries which have really advanced in the Industry. ತಲಚೇರಿಯಲ್ಲಿ

ಐದುನೂರು ಬೇಸಿನ್ ಇರತಕ್ಕಂಥ ಆಟೋಮೆಟಿಕ್ ಬೇಸಿಸ್ ವರ್ಕ್ ನಡೆಯತಕ್ಕಂಥದ್ದು ಸುಮಾರು ೨೫ ಸ್ಥಳಗಳಲ್ಲಿ ಕೆಲಸ ನಡೆಯುತ್ತಿರುವುದನ್ನು I have actually gone and seen. Have you utilised those Officers, their services? This same officers sitting in the same place talking the same subjects in addition to the training. This will not help the Industry. Each Officer before he is being deputed he may be asked to study a particular aspect of the Industry. He cannot be a Jack of all trades and master of none. A particular Officer may be asked to study grainage, one particular Officer may be asked to study filature. another only chacki rearing centre, another mulberry. After their return you post them to these places take the work. ಅವರ ಅನುಭವದಿಂದ ಏನಾದರೂ ಅನುಕೂಲ ಆಗಬಹುದು. ಈವತ್ತು ತಾವು ಕಳುಹಿಸುತ್ತೀರಿ, ಅವರು ಹೋಗುತ್ತಾರೆ, ಎರಡು ತಿಂಗಳಿನ ಮೇಲೆ ವಾಪಸ್ ಬರುತ್ತಾರೆ. I do not object them also to see the country ಅವರು ನಾಲೆಡ್ಜ್ ಪಡೆಯಬೇಕು ಆದರಿಂದ ನಮ್ಮ ಜನರಿಗೂ ಅನುಕೂಲವಾಗಬೇಕೆಂದರೆ You must assign different duties to these people and you must ask them to work for these guidelines after the return. ಅದು ಈವತ್ತು ಆಗುತ್ತಿಲ್ಲಾ ಎನ್ನುವ ಅಂಶವನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇನ್ನು ವರ್ಲ್ಡ್ ಬ್ಯಾಂಕ್ ಸ್ಕೀಮ್‌ನಲ್ಲಿ ೪೫೦೦ ಮೆಟ್ರಿಕ್ ಟನ್ ರೇಷ್ಮೆ ಉತ್ಪಾದನೆ ಮಾಡಬೇಕೆಂದು ಇದೆ, ಅದು ಬಹುಶಃ ಆಗುವುದಿಲ್ಲ. ಇನ್ನೊಂದು ಅಂಶವನ್ನು ನಾನು ಹೇಳಬೇಕೆಂದು ಇದ್ದೇನೆ. Universities also you are involving for research. You know the Central Silk Board has no other work except research. It is an advisory board without any statutory power and this can advise the Central Government whenever the advice is sought for whether it is taken note for not. But, they have got certain sericultural research institutions for Ex. Mysore. There are so many research institutions in the country, University and Bangalore University. Is it dulipcation of work? I admit research is not the monopoly of anybody. But, this is only duplicating On the other hand, you have introduced sericulture as a subject in B.Sc, in the universities also. So, if the matter is pursued that will be more beneficial rather than entrusting research to these institutions. ಈ ದೃಷ್ಟಿಯಿಂದ ಬಹುಶ: ತಾವು ಏನು ಅಂಬಿಷಿಯಸ್ ಪ್ಲಾನ್ ಇಟ್ಟುಕೊಂಡು ಹೆಚ್ಚಿನ ರೇಷ್ಮೆ ಉತ್ಪಾದನೆ ಮಾಡಬೇಕೆಂದಿದ್ದೀರಿ ಅದಕ್ಕೆ ಸ್ವಾಮಿ ಇನ್ನು ಹೆಚ್ಚಿನ ಪ್ರಯತ್ನ ಜೊತೆಗೆ ಮುತವರ್ಜಿಯಿಂದ ಕೆಲಸ ಮಾಡಿದರೆ ಬಹುಶಃ ಗುರಿ ಸಾಧನೆ ಮಾಡಬಹುದು. ಕಳೆದ ವರ್ಷದ ಫಿಗರ್ಸ್ ಕೊಟ್ಟಿದ್ದೀರಿ. ೩೫ ಸಾವಿರ ಮೆಟ್ರಿಕ್ ಟನ್ ಉತ್ಪಾದನೆ ಮಾಡಿದ್ದೇವೆಂದು. ಈ ವರ್ಷ ೩೦ ಸಾವಿರ ಎಂದು ಹೇಳಿದ್ದೀರಿ. ಮುಂದಿನ ವರ್ಷ ಎಷ್ಟು ಬರುತ್ತದೋ ಗೊತ್ತಿಲ್ಲ. ಊಜಿನೋಣದ ಕಾಟ ಇನ್ನೂ ಇದೆ. ತಮಗೆ ಗೊತ್ತಿದಿಯೋ ಇಲ್ಲವೋ ನನಗೆ ಗೊತ್ತಿದೆ. Failures are there. I am coming from the village. I am a rearer. You must admit that. I know the failure. How are you going to overcome it? What is the percentage of failure? ತಾವು ಏನು ಮಾಡುತ್ತಾ ಇದ್ದೀರಿ. ತಾವೇನಾದರೂ ಇನ್‌ವೆಸ್ಟಿಗೇಟ್ ಮಾಡುತ್ತಿದ್ದೀರಾ. ಅದರ ಬಗ್ಗೆ ಏನಾದರೂ ರಿಪೋರ್ಟ್ ಬಂದಿದಿಯೋ? What is the percentage of failure? ಫೆಲ್ಯೂರ್ ಆಗಿರತಕ್ಕಂಥದ್ದು ಗೌವರ್ನಮೆಂಟ್ ಗ್ರೇನೇಜ್‌ನಿಂದ ತಂದದ್ದೋ ಅಥವಾ ಪ್ರೈವೇಜ್ ಗ್ರೇನೇಟ್‌ನಿಂದ ತಂದದ್ದೋ. ಅದನ್ನೆಲ್ಲಾ ಇನ್‌ವೆಸ್ಟಿಗೇಟ್ ಮಾಡಬೇಕು. ನೀವು ಸೈಂಟಿಫಿಕ್‌ಆಗಿ ಯೋಜನೆಯನ್ನು ಕಾರ್ಯಗತ ಮಾಡಿದರೆ ಅಂಬಿಷಿಯಸ್

ಆಗುತ್ತದೆಯೇ ಹೊರತು ಇಲ್ಲದಿದ್ದರೆ ಈ ಕೈಗಾರಿಕೆ ಬರೆ ಶೋಷಣೆ ಕೈಗಾರಿಕೆ ಆಗುತ್ತದೆ. ಈ ಕೈಗಾರಿಕೆಗೆ ಉತ್ತೇಜನ ಕೊಟ್ಟಷ್ಟು ವರಮಾನ ಕೂಡ ಜಾಸ್ತಿ ಬರುತ್ತದೆಂದು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ಚೈನಾ, ರಷ್ಯಾ ನಾಲ್ಕು ಮತ್ತು ಐದನೆಯ ಸ್ಥಾನದಲ್ಲಿ ಇದ್ದು ಇವತ್ತು ಮುಂದೆ ಬಂದಿವೆ. ಇಂಡಿಯಾ ಮೂರನೆಯ ಸ್ಥಾನದಲ್ಲಿತ್ತು. ಇಂಡಿಯಾ ೩ನೆಯ ಸ್ಥಾನದಲ್ಲಿರಬೇಕಾದರೆ ಕರ್ನಾಟಕ ಮುಖ್ಯ ಕಾರಣ ನಮ್ಮ ಭಾರತದಲ್ಲಿ ರೇಷ್ಮೆ ಬೆಳೆಯತಕ್ಕಂತಹ ಜಾಗಗಳು ಕಾಶ್ಮೀರ, ಅಸ್ಸಾಂ ಮತ್ತು ಬಂಗಾಳ ಇವುಗಳನ್ನು ಬಿಟ್ಟರೆ ೮೦–೮೨ ಪರ್ಸೆಂಟ್ ರೇಷ್ಮೆ ಬೆಳೆಯುತಕ್ಕಂತಹ ಕರ್ನಾಟಕ ಕೆಳಗೆ ಹೋಗುತ್ತಿದೆ. ಇದೇ ಪ್ರಕಾರ ನಡೆದರೆ ಮುಂದೆ ಬರುವುದಕ್ಕಾಗುವುದಿಲ್ಲ. ಇದಕ್ಕೆ ಅವಕಾಶ ಕೊಡಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ರೇಷ್ಮೆಗೆ ಪ್ರತ್ಯೇಕವಾದ ಇಂಡಸ್ಟ್ರಿಯಲ್ ಎಸ್ಟೇಟ್ ಮಾಡುವ ಬಗ್ಗೆ ಯೋಚನೆ ಮಾಡಬೇಕು. ರಾಮನಗರ, ಚನ್ನಪಟ್ಟಣ ಮತ್ತು ಚಾಮರಾಜನಗರಗಳಲ್ಲಿ ರೇಷ್ಮೆ ಇಂಡಸ್ಟ್ರಿಯಲ್ ಎಸ್ಟೇಟ್ ಮಾಡಿದರೆ ಎಲ್ಲಾ ಜನರಿಗೂ ಸೌಕರ್ಯವಾಗುತ್ತದೆ.

ರಾಜ್ಯದಲ್ಲಿ ವೇಸ್ಟ್ ಸಿಲ್ಕ್ ಬಗ್ಗೆ ನಾನೊಂದು ಪ್ರಶ್ನೆಯನ್ನು ಕೇಳಿದ್ದೆ. ಅದೇನೆಂದರೆ ರಾಜ್ಯದಲ್ಲಿ ನಿರುಪಯೋಗವಾದ ರೇಷ್ಮೆಯು ಬಹಳಷ್ಟು ದಾಸ್ತಾನು ದೊರಕಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದರೆ ಉತ್ತರವಾಗಿ 'ಹೌದು' ಎಂದು ಹೇಳಿದ್ದಾರೆ. ವೇಸ್ಟ್ ಸಿಲ್ಕ್‌ನ್ನು ಉಪಯೋಗಿಸಿಕೊಳ್ಳುವ ಮಾರ್ಗೋಪಾಯವನ್ನು ಸರ್ಕಾರದವರು ಯೋಚಿಸುತ್ತಿದ್ದಾರೆಯೇ ? ಎಂದು ಕೇಳಿದ್ದಕ್ಕೆ ಉತ್ತರವಾಗಿ 'ಹೌದು' ಎಂದು ಹೇಳಿದ್ದಾರೆ. ನಿರುಪಯೋಗವಾದ ರೇಷ್ಮೆಯನ್ನು ಉತ್ಪಾದಿಸುವ ನೂಲು ಸುತ್ತುವವರಿಗೆ ರಕ್ಷಣೆಯನ್ನು ನೀಡಲು ಸರ್ಕಾರದವರು ಯೋಚಿಸುತ್ತಿದ್ದಾರೆಯೆ ? ಎಂದು ಕೇಳಿದ್ದಕ್ಕೆ ಉತ್ತರವಾಗಿ 'ಹೌದು' ಎಂದು ಹೇಳಿದ್ದಾರೆ. ಸಾಮಾನ್ಯ ರೀಲರ್‌ಗಳ ಹತ್ತಿರ ೨–೩ ಸಾವಿರ ಸ್ಟಾಕು ಇದೆ ಏನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಸ್ಪಿನ್ನಿಂಗ್ ಫ್ಯಾಕ್ಟರಿಯನ್ನು ಎಕ್ಸ್‌ಟೆಂಡ್ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಅದರಿಂದ ೧೫ ಸಾವಿರದ ಕೆ.ಜಿ. ಕನ್ಸೂಮರ್ ಮಾಡಬಹುದು ದೇಶದಲ್ಲಿ ಉತ್ಪಾದನೆ ಯಾವ ಮಟ್ಟದಲ್ಲಿದೆ ಎಂಬುದನ್ನು ನೋಡಬೇಕು. ವೇಸ್ಟ್ ಸಿಲ್ಕ್‌ನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಬೇಕಾದರೆ ಸ್ಪಿನ್ನಿಂಗ್ ಸಿಲ್ಕ್ ಫ್ಯಾಕ್ಟರಿಗಳು ಹೆಚ್ಚಾಗಬೇಕು ಕೇಂದ್ರ ಸರ್ಕಾರದವರ ನೆರವು ಪಡೆದುಕೊಂಡು, ವಿಶ್ವಬ್ಯಾಂಕಿನ ನೆರವು ಪಡೆದುಕೊಂಡು ನಮ್ಮಲ್ಲಿರುವ ಇಂಡಸ್ಟ್ರಿಗಳನ್ನು ಡೆವಲಪ್ ಮಾಡಬೇಕು. ಮಾರ್ಕೆಟ್ ಫೀ ಬೇಕಾದಷ್ಟು ಬಂದಿದೆ. ಆದರಿಂದ ಕಟ್ಟಡಗಳನ್ನು ಕಟ್ಟಿಕೊಡಿ. ಸ್ಪಿನ್ನಿಂಗ್ ಸಿಲ್ಕ್ ಫ್ಯಾಕ್ಟರಿಗಳನ್ನು ಚಾಮರಾಜನಗರ ಕೊಳ್ಳೇಗಾಲದಲ್ಲಿ ತೆರೆಯಿರಿ. ಅಭಿವೃದ್ಧಿಯ ಕಡೆಗೆ ಸರ್ಕಾರ ಮನಸ್ಸು ಮಾಡಬೇಕು. ವೇಸ್ಟ್ ಸಿಲ್ಕ್‌ನ್ನು ಉಪಯೋಗ ಮಾಡಿಕೊಳ್ಳುವ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ ಮುಖ್ಯ ಮಂತ್ರಿಗಳ ಬೇಡಿಕೆಯ ಬಗ್ಗೆ ಅಬಕಾರಿ ಇಲಾಖೆಯ ಬಗ್ಗೆ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ದೇವೇಗೌಡರು ಮತ್ತು ಬಸಪ್ಪನವರು ಭಾರಿ ಉದ್ಯಮಗಳ ಬಗ್ಗೆ ಮತ್ತು ರೇಷ್ಮೆ ಇಲಾಖೆಯ ಬಗ್ಗೆ ಮಾತನಾಡಿದ್ದಾರೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಅಬಕಾರಿ ಇಲಾಖೆಯ ಮೇಲೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಬಕಾರಿ ಇಲಾಖೆ ನಮ್ಮ ದೇಶಕ್ಕೆ ನಮ್ಮ ಸರ್ಕಾರಕ್ಕೆ ಹೆಚ್ಚು ಹಣವನ್ನು ತಂದುಕೊಡತಕ್ಕಂತಹ ಇಲಾಖೆ. ಮಹಾತ್ಮಾಗಾಂಧಿಯವರು ಪಾನ ನಿಷೇಧದ ಬಗ್ಗೆ ಚಳುವಳಿಯನ್ನು ಮಾಡಿದರು. ಪಾನ ನಿಷೇಧ ಮಾಡಲು ಅನೇಕ ಹೋರಾಟಗಳು ನಡೆದು ಅದನ್ನು ತಪ್ಪಿಸಲಿಕ್ಕೆ ಪ್ರಯತ್ನಪಟ್ಟರು. ನಮ್ಮ ಸರ್ಕಾರ ಕೂಡ ಆ ಬಗ್ಗೆ ಸ್ವಲ್ಪ ಯೋಚನೆ ಮಾಡಿತು. ಕೆಲವು ಕಾಲ ಮಧ್ಯಪಾನ ನಿಷೇಧ ಜಾರಿಗೆ ತಂದರು. ಆದರೆ ಅದರಿಂದ ಸರ್ಕಾರಕ್ಕೆ ಆದಾಯ ಕಡಿಮೆಯಾಗುತ್ತದೆ, ಜನರು ಕಳ್ಳಭಟ್ಟಿ ಸಾರಾಯಿ ಮಧ್ಯಸೇವನೆ ಮಾಡಿ ಆರೋಗ್ಯ ಕೆಡಿಸಿಕೊಳ್ಳುತ್ತಾರೆ. ಅದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆಂದು ಪುನಃ ಜಾರಿಗೆ ತಂದರು. ಅದರಿಂದ ೧೯೮೧–೮೨ರಲ್ಲಿ ಸುಮಾರು ೧೩೦ ಕೋಟಿ ರೂಪಾಯಿಗಳು ನಮ್ಮ ಸರ್ಕಾರಕ್ಕೆ ಆದಾಯ ಬಂದಿದೆ. ೧೩೦ ಕೋಟಿ ರೂಪಾಯಿಗಳು ಸರ್ಕಾರಕ್ಕೆ ಆದಾಯ ಬರಬೇಕಾದರೆ ಈ ಆದಾಯ ಬರುವಂತಹ ಮಧ್ಯವನ್ನು ತಯಾರು ಮಾಡತಕ್ಕಂತಹ ಕಾರ್ಮಿಕ ವರ್ಗ ಏನಿದೆ ಅವರ ಬಗ್ಗೆ ಸರ್ಕಾರ ಏನು ಗಮನ

ಹರಿಸಿದೆ ಎನ್ನುವುದನ್ನು ನಾವು ನೋಡಬೇಕು. ೧೩೦ ಕೋಟಿ ರೂಪಾಯಿಗಳ ಈ ಬಾಬಿನಿಂದ ಸರ್ಕಾರಕ್ಕೆ ಆದಾಯ ಬರುತ್ತಿದೆ. ಆದಾಯ ಬರತಕ್ಕಂತಹ ಈ ಒಂದು ಬಾಬಿನಲ್ಲಿ ಹಲವಾರು ರೀತಿಯಲ್ಲಿ ಕೆಲಸ ಮಾಡತಕ್ಕಂತಹವರಿಗೆ ಮಾರಾಟ ಮಾಡತಕ್ಕವರಿಗೆ, ಮದ್ಯವನ್ನು ತಯಾರು ಮಾಡತಕ್ಕವರಿಗೆ, ಅದನ್ನು ಸಾಗಿಸತಕ್ಕವರಿಗೆ ನಾನಾ ರೀತಿಯಲ್ಲಿ ಕೆಲಸ ಮಾಡತಕ್ಕವರು ಏನು ಇದ್ದಾರೆ, ಅವರ ಬಗ್ಗೆ ಯಾವ ರೀತಿಯ ಅನುಕೂಲಗಳನ್ನು ಒದಗಿಸಿಕೊಡಲು ಸರ್ಕಾರ ಪ್ರಯತ್ನಪಟ್ಟಿಲ್ಲ. ಮದ್ಯವನ್ನು ಹರಾಜಿನ ಮೂಲಕ ಮಾರಾಟವಾಗುತ್ತದೆ ವರ್ಷಕ್ಕೊಂದು ದಿನ ಹರಾಜು ಮಾಡುತ್ತಾರೆ. ದೊಡ್ಡ ದೊಡ್ಡ ಗುತ್ತೇದಾರರು ಗುತ್ತಿಗೆ ಪಡೆಯುತ್ತಾರೆ. ಗುತ್ತಿಗೆ ಪಡೆಯತಕ್ಕಂತಹ ಜನ ಇದರಲ್ಲಿ ಕೆಲಸ ಮಾಡತಕ್ಕಂತಹವರಿಗೆ ಯಾವರೀತಿಯ ಅನುಕೂಲಗಳನ್ನು ಇದುವರೆಗೆ ಒದಗಿಸಿಲ್ಲ. ಅವರು ೨೦ ವರ್ಷಗಳು ಕೆಲಸ ಮಾಡಿದರೂ ಅವರಿಗೆ ಯಾವುದೇ ಕಾನೂನು ಇಲ್ಲ ಇವತ್ತೆ ಕೆಲಸದಿಂದ ಬೇಡವೆಂದರೂ ಅವರನ್ನು ಕೇಳುವವರು ಯಾರು ಇಲ್ಲ. ಅವರಿಗೆ ಯಾರು ದಿಕ್ಕೇ ಇಲ್ಲ, ಅವರಿಗೆ ಏನಾದರೂ ತೊಂದರೆಯಾದರೆ ಪರಿಹಾರವಿಲ್ಲ. ಸಾರಾಯಿ ಎಲ್ಲರಿಗೂ ಗೊತ್ತಿರತಕ್ಕ ವಿಚಾರ.

ಅಧ್ಯಕ್ಷರು.—ಎಲ್ಲರಿಗೂ ಗೊತ್ತಿಲ್ಲ.

ಶ್ರೀ ಪಂಪಾಪತಿ.—ಸಾರಾಯಿ ಕುಡಿದವರು ಎಷ್ಟು ತೊಂದರೆ ಮಾಡುತ್ತಾರೆಂಬುದು ಎಲ್ಲರಿಗೂ ಗೊತ್ತಿದೆ. ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಹೆಂಡದ ಅಂಗಡಿಯಲ್ಲಿ ಕುಳಿತು ವ್ಯಾಪಾರ ಮಾಡತಕ್ಕಂತಹವರು ಕುಡಿದವರನ್ನೆಲ್ಲಾ ಸಮಾಧಾನಪಡಿಸಿಕೊಂಡು ಇರಬೇಕಾದರೆ ಎಷ್ಟು ಕಷ್ಟವಾಗುತ್ತದೆ, ಕುಡಿದ ಅಮಲಿನಲ್ಲಿ ಬಾಟಲಿ ಹೊಡೆದು ಮಾರುವವರ ಹೊಟ್ಟೆಗೆ ಇಟ್ಟಿದ್ದು ಉಂಟು.

ಶ್ರೀ ಬಿ. ಭಾಸ್ಕರಶೆಟ್ಟಿ.—ಶುರುವಿಗೆ ಅಲ್ಲಿ ಕೆಲಸ ಮಾಡತಕ್ಕ ನೌಕರರು ಕುಡಿಯುತ್ತಾರೆ.

ಶ್ರೀ ಪಂಪಾಪತಿ.—ಅಲ್ಲಿ ಕೆಲಸ ಮಾಡತಕ್ಕ ನೌಕರರು ಕುಡಿಯುವುದಿಲ್ಲ. ಬೆಂಗಳೂರಿನಲ್ಲಿ ೪ ಜನ ಪೋಲೀಸ್‌ನವರು ಮತ್ತು ದಫೇದಾರ್ ಕುಡಿದು ಹಣ ಕೊಡದೆ ಬರುತ್ತಿದ್ದಾಗ ಹಣ ಕೊಡಿ ಎಂದು ಕೇಳಿದ ನೌಕರನಿಗೆ ಬೆನ್ನಿಗೆ ರೈಸರ್ ಹಾಕಿದ್ದಾರೆ. ಆ ರೈಸರ್ ಏನಾದರೂ ಹೊಟ್ಟೆಗೆ ಬಿದ್ದಿದ್ದರೆ ಅವನ ಕತೆ ಮುಗಿಯುತ್ತಿತ್ತು. ರೈಸರ್ ಹಾಕುವ ಜೊತೆಗೆ ಚೆನ್ನಾಗಿ ಹೊಡೆದಿದ್ದಾರೆ ಅವನು ಸತ್ತುಹೋದರೆ ಆತನ ಹೆಂಡತಿ ಮಕ್ಕಳ ಗತಿಯೇನು ? ಸತ್ತವನ ಹೆಂಡತಿ ಮಕ್ಕಳಿಗೆ ಪರಿಹಾರ ಕೊಡುವವರು ಯಾರು? ಗುತ್ತೇದಾರರನ್ನು ಕೇಳಿದರೆ ನಮಗೆ ಸಂಬಂಧವಿಲ್ಲವೆಂದು ಹೇಳುತ್ತಾರೆ. ಸರ್ಕಾರದವರು ಪರಿಹಾರ ಕೊಡುವುದಕ್ಕೆ ನಮಗೆ ಸಂಬಂಧವಿಲ್ಲವೆಂದು ಹೇಳುತ್ತಾರೆ ಆದಾಯ ಮಾತ್ರ ಸರ್ಕಾರಕ್ಕೆ ಬರುತ್ತದೆ, ಗುತ್ತೇದಾರರಿಗೂ ಬರುತ್ತದೆ. ಸಾರಾಯಿ ಹೆಂಡ ಗುತ್ತೇದಾರರು ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ. ಅವರು ಸರ್ಕಾರವನ್ನೇ ಅಲ್ಲಾಡಿಸುವ ಶಕ್ತಿಯನ್ನು ಪಡೆದುಕೊಂಡಿದ್ದಾರೆ. ಅಲ್ಲಿ ಕೆಲಸ ಮಾಡತಕ್ಕಂತಹ ನೌಕರರಿಗೆ ಯಾವುದೇ ವಿಧವಾದ ಅನುಕೂಲಗಳನ್ನು ಒದಗಿಸುವುದಕ್ಕೆ ನಮ್ಮ ಸರ್ಕಾರ ಪ್ರಯತ್ನಪಟ್ಟಿಲ್ಲ. ಗುತ್ತಿಗೆ ಪಡೆಯುತಕ್ಕ ಗುತ್ತೇದಾರರಿಂದ ಪರಿಹಾರ ಹಣವನ್ನು ಕೊಡಿಸುವುದಕ್ಕೆ ಯೋಚನೆ ಮಾಡಿಲ್ಲ ಇದನ್ನು ಮೊದಲು ಮಾಡಬೇಕು. ಹೆಂಡ ಇಳಿಸತಕ್ಕಂತಹವರು ಅವರು ಇಚಲುಮರ, ತೆಂಗಿನಮರ, ತಾಳೆಮರಗಳನ್ನು ಹತ್ತಬೇಕಾಗುತ್ತದೆ. ಹೆಂಡವನ್ನು ಈ ಮರಗಳಿಂದ ಇಳಿಸುತ್ತಾರೆ ಇದು ಎಲ್ಲರಿಗೂ ಕೂಡ ಗೊತ್ತಿರತಕ್ಕ ವಿಚಾರ. ಇಳಿಸುವ ಹೆಂಡ ಕಡಿಮೆಯಾಗಿರುವುದರಿಂದ, ಮಾಡುವ ಹೆಂಡ ಜಾಸ್ತಿಯಾಗಿದೆ. ಹೆಂಡ ಇಳಿಸತಕ್ಕವರಿಗೆ ಕನಿಷ್ಟ ಕೂಲಿ ಗೊತ್ತು ಮಾಡಬೇಕು. ಹೆಂಡ ಮಾಡತಕ್ಕಂತಹದ್ದು ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಜಾಸ್ತಿಯಾಗಿದೆ.

ಅಧ್ಯಕ್ಷರು.—ಹೆಂಡ ಮಾಡುವುದು ಇದೆಯೇ ?

ಶ್ರೀ ಪಂಪಾಪತಿ.—ಇವತ್ತು ಹೆಂಡವನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು.—ಮಾಡುವುದಿಲ್ಲವೆಂದು ಕಾಣುತ್ತದೆ.

ಶ್ರೀ ಪಂಪಾಪತಿ.—ಪೌಡರ್ ಹಾಕಿ ಕಲಸುತ್ತಾರೆ, ಇದಕ್ಕೆ ಕಳ್ಳಭಟ್ಟಿ ಎಂದು ಹೆಸರು ಇಲ್ಲ ಇದು ಒಂದೇ ಭಟ್ಟಿ.

೬–೩೦ ಪಿ. ಎಂ.

ಸ್ವಾಮಿ, ಈಗ ಕಳ್ಳಭಟ್ಟಿ ಎಂದು ಎರಡು ಹೆಸರುಗಳಿಲ್ಲ. ಎಲ್ಲಾ ಒಂದೇ ಭಟ್ಟಿ. ಮರದಿಂದ ಹೆಂಡ ಇಳಿಸುವುದು ಕಡಿಮೆಯಾದಂತೆ ಕುಡಿಯುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಈ ಕಾರಣದಿಂದ ಇಳಿಸಿದಂಥ ಸ್ವಲ್ಪವೇ ಹೆಂಡವನ್ನು ತೆಗೆದುಕೊಂಡು ಬಂದು ಒಂದು ತೊಟ್ಟಿಗೆ ಹಾಕಿ ಅದಕ್ಕೆ ಮತ್ತಷ್ಟು ನೀರು ಬೆರೆಸುತ್ತಾರೆ. ಅನಂತರ ಅದರ ಮೇಲೆ ಕ್ಲೋರಲ್ ಹೈಡ್ರಸ್ ಎಂಬ ಪೌಡರ್ ಹಾಕುತ್ತಾರೆ, ಸಕ್ಕರೆ ಮತ್ತು ಸ್ಯಾಕ್ರಿನ್ ಹಾಕುತ್ತಾರೆ. ನೊರೆ ಬರಲಿ ಎಂದು ಅಂಟುವಾಳದ ಕಾಯಿಗಳನ್ನು ಹಾಕುತ್ತಾರೆ. ಒಂದು ರೀತಿಯ ಪೇಸ್ಟ್ ಸಹ ಹಾಕುತ್ತಾರೆ. ಈ ರೀತಿಯಿಂದ ಒಂದು ತೊಟ್ಟಿಯಲ್ಲಿ ಹೆಂಡವನ್ನು ತಯಾರಿಸಿ ಅದನ್ನು ಸುಮಾರು ೨ ಸಾವಿರ ಬಾಟಲ್‌ಗಳಿಗೆ ಹಾಕುತ್ತಾರೆ. ಇದನ್ನು ಜನರು ಕೊಂಡು ಕುಡಿಯುತ್ತಾರೆ. ಈ ರೀತಿಯಿಂದ ನಡೆಯುತ್ತಿಲ್ಲವೆಂದು ಸರ್ಕಾರದವರು ಹೇಳಿದರೆ ನಾನು ನನ್ನ ಈ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಒಳ್ಳೆಯ ಹೆಂಡ ಕೊಟ್ಟರೆ ಜನರು ಕುಡಿಯುವುದಿಲ್ಲ. ಅದಕ್ಕೆ ಪೌಡರು ಹಾಕಿ ಕಲಸಿ ಕೊಡಬೇಕು. ಇದರಿಂದ ಜಾಸ್ತಿ ನಿಷೆಯಾಗುತ್ತದೆಂದು ಪೌಡರ್ ಹಾಕಿದ್ದನ್ನೇ ಕೇಳಿ ಪಡೆಯುತ್ತಾರೆ. ಆದರೆ ತಾವು ಇದನ್ನು ಒಪ್ಪುವುದಿಲ್ಲ. ಒಳ್ಳೆಯ ಹೆಂಡವನ್ನೇ ಕೊಡುತ್ತೇವೆಂದು ತಾವು ಹೇಳುತ್ತೀರಿ. ಈ ರೀತಿಯಿಂದ ಹೆಂಡ ತಯಾರಿಸುವುದನ್ನು ತಡೆಯಲು ಸರ್ಕಾರಕ್ಕೆ ಸಾಧ್ಯವಿಲ್ಲವೇ ? ಎರಡು–ಮೂರು ಜಿಲ್ಲೆಗಳಿಗೆ ಒಂದರಂತೆ ಸುಮಾರು ೧೧ ಗುಪ್ತದಳವನ್ನು ತಾವು ಇಟ್ಟುಕೊಂಡಿದ್ದೀರಿ. ಆದ್ದರಿಂದ ಇವರ ಮೂಲಕ ಏತಕ್ಕೆ ಪತ್ತೆ ಮಾಡಿಸಬಾರದು. ಈಗ ಬೆಂಗಳೂರಿನಲ್ಲಿ ಮಾತ್ರವಲ್ಲ, ಎಲ್ಲ ಕಡೆಯೂ ಇದೇರೀತಿ ತಯಾರು ಮಾಡುತ್ತಾರೆ. ಗುಪ್ತದಳದ ಕರ್ತವ್ಯ ಕೇವಲ ಕಳ್ಳಭಟ್ಟಿ ತಯಾರು ಮಾಡುವವರನ್ನು ಹಿಡಿಯುವುದಿಲ್ಲ, ಈ ರೀತಿ ಪೌಡರ್ ಹಾಕಿ ಹೆಂಡ ತಯಾರು ಮಾಡುವವರನ್ನು ಸಹ ಹಿಡಿಯಬೇಕು.

ಅಧ್ಯಕ್ಷರು.—ಇದರ ಮೇಲಿನ ಚರ್ಚೆ ಮತ್ತು ಉತ್ತರ ನಾಳೆಗೇ ಮುಗಿಯಬೇಕಾಗಿರುವುದರಿಂದ ೭ ಗಂಟೆಯವರೆಗೂ ಕೂರೋಣ.

ಮಾನ್ಯ ಸದಸ್ಯರು.—ಆಗಬಹುದು.

ಶ್ರೀ ಪಂಪಾಪತಿ.—ಕಳ್ಳಭಟ್ಟಿ ಕುಡಿಯುವುದರಿಂದ ಸಾಕಷ್ಟು ಅನಾಹುತಗಳಾಗುತ್ತಿವೆ. ಇದನ್ನು ಕುಡಿಯುವುದರಿಂದ ಜನರ ಆರೋಗ್ಯ ಕೆಡುತ್ತದೆ. ಆದ್ದರಿಂದ ಇದನ್ನು ತಡೆಯುವುದಕ್ಕೆ ತಾವು ಪ್ರಯತ್ನ ಮಾಡಿ ಇಲ್ಲದಿದ್ದರೆ ನನ್ನ ಜೊತೆಯಲ್ಲಿ ಬನ್ನಿ, ತೋರಿಸುತ್ತೇನೆ. ಕೇವಲ ಇಲ್ಲಿ ಆಪಾದನೆ ಮಾಡಬೇಕೆನ್ನುವ ದೃಷ್ಟಿಯಿಂದ ನಾನು ಮಾಡುವುದಿಲ್ಲ. ಇದರ ಜೊತೆಗೆ ಈಚಲ ಮರಗಳಿಂದ ಹೆಂಡ ಇಳಿಸುವ ಜನರಿಗೆ ರಕ್ಷಣೆ ಇಲ್ಲವಾಗಿದೆ. ಈ ಜನರು ಒಂದು ದಿನಕ್ಕೆ ೩೦ ಮರಗಳನ್ನಾದರೂ ಹತ್ತಿ ಇಳಿಯಬೇಕಾಗುತ್ತದೆ. ಈ ಮುಳ್ಳಿನ ಮರಗಳನ್ನು ಹತ್ತಿ ಇಳಿಯುವಾಗ ಬಹಳ ಎಚ್ಚರದಿಂದ ಇರಬೇಕಾಗುತ್ತದೆ, ಏಕೆಂದರೆ, ಕೆಲವು ಸಲ ಹಾವು, ಚೇಳು ಮುಂತಾದ ವಿಷ ಜಂತುಗಳು ಕಚ್ಚಿದರೆ ಸಾಯಬೇಕಾಗುತ್ತದೆ ಇಲ್ಲವೇ ಕೈಕಾಲು ಮುರಿದುಕೊಳ್ಳಬೇಕಾಗುತ್ತದೆ. ಈ ರೀತಿ ಆದರೆ ಇದಕ್ಕೆ ಯಾರು ಹೊಣೆ ? ಇದಕ್ಕೆ ಗುತ್ತಿಗೆದಾರರು ಜವಾಬ್ದಾರಿ ಅಲ್ಲ, ಸರ್ಕಾರ ಜವಾಬ್ದಾರಿ ಅಲ್ಲ ಎಂದರೆ ಕೇವಲ ಹಣ ಮಾಡುವುದಕ್ಕೆ ಮಾತ್ರ ಗುತ್ತಿಗೆದಾರರು ಮತ್ತು ಸರ್ಕಾರ ಜವಾಬ್ದಾರಿಯೇ ? ಇಂತಹ ಕೆಲಸ ಮಾಡುವವರಿಗೆ ಏನಾದರು ತೊಂದರೆಯಾದರೆ ಅದನ್ನು ನಿವಾರಣೆ ಮಾಡಲು ಸರ್ಕಾರ ಯಾವುದೇ ಕಾನೂನನ್ನು ಜಾರಿಗೆ ತರಲಿಲ್ಲ. ನಾವಿರುವುದೇ ಬಡವರಿಗಾಗಿ, ಹಿಂದುಳಿದ ವರ್ಗದವರಿಗಾಗಿ ಎಂದು ಈ ಸರ್ಕಾರದವರು ಹೇಳಿಕೊಳ್ಳುತ್ತಾರೆ. ಆದರೆ ಈ ಜನರ ಕಷ್ಟವನ್ನು ಸರ್ಕಾರ ನೋಡುತ್ತಿಲ್ಲ. ಇವರ ಮಕ್ಕಳಿಗೆ ವಿದ್ಯಾಭ್ಯಾಸ ಎಂಬುದೇ ಇಲ್ಲ. ಏಕೆಂದರೆ, ಇವರು ಒಂದು ಕಡೆ ಕೆಲಸ ಮಾಡುವಂತಿಲ್ಲ. ಗುತ್ತಿಗೆದಾದರರು ಅರಸೀಕೆರೆಯಲ್ಲಿ ಕೆಲಸ ಮಾಡು ಎಂದರೆ ಅಲ್ಲಿಗೆ ಹೋಗಬೇಕು, ಮುಂದೆ ಹಾಸನದಲ್ಲಿ ಮಾಡು ಎಂದರೆ ಅಲ್ಲಿಗೆ ಹೋಗಬೇಕು. ಇಂತಹ ಜನರಿಗೆ ಏನಾದರು ಸೌಕರ್ಯ ಒದಗಿಸುವುದು ಸರ್ಕಾರದ ಕರ್ತವ್ಯವಲ್ಲವೇ ? ಇದು ಒಂದರಿಂದಲೇ ಸರ್ಕಾರಕ್ಕೆ ವರ್ಷಕ್ಕೆ ೧೩೦ ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಆದ್ದರಿಂದ ಈ ಜನರಿಗೆ ಸರ್ಕಾರ ಕಿಂಚಿತ್ ಆದರೂ ಸಹಾಯ ಮಾಡಬೇಕು. ಇವರಿಗೂ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಮಾಡಬೇಕು. ಮರ ಹತ್ತಿದಾಗ ಬಿದ್ದು ಕೈಕಾಲು ಮುರಿದರೆ ಇರಲು ಒಂದು ಮನೆ ಕೂಡ ಇವರಿಗೆ ಇಲ್ಲ. ಆದರಿಂದ ಇಂತಹವರಿಗೆ ಸಹಾಯ ಮಾಡಿದರೆ ನಿಮಗೆ ತೊಂದರೆ ಏನೂ ಆಗುವುದಿಲ್ಲ. ಇವರಿಗೂ ಏನಾದರು ಸಹಾಯ ಮಾಡಿ. ಅದು ಬಿಟ್ಟು

ಸತ್ತವನು ಸತ್ತ, ಅವನ ಕಥೆ ಯಾರೂ ಕೇಳುವುದಿಲ್ಲವೆಂದು ಹೇಳಿದರೆ ಹೇಗೆ? ಈಗ ಕೇರಳಾದಲ್ಲಿ ಹೆಂಡ ಇಳಿಸುವವರಿಗೆ ಸಂಬಂಧಪಟ್ಟಂತೆ ಕ್ಷೇಮಾಭಿವೃದ್ಧಿ ಕಾಯಿದೆ ಎಂದು ತಂದಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಇಲ್ಲಿಯೂ ಸಹ ಕಾಯಿದೆ ತಂದಿದ್ದೇವೆ. ಆದರೆ ಅದನ್ನು ಜಾರಿಗೆ ತರುವುದರಲ್ಲಿ ತಡವಾಗಿದೆ. ಈ ಜನರ ಸಲುವಾಗಿ ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ಆಶಾಕಿರಣ ಎಂಬ ಯೋಜನೆಯನ್ನು ಸಹ ರೂಪಿಸಿದ್ದಾರೆ.

ಶ್ರೀ ಪಂಪಾಪತಿ.—ಇಲ್ಲಿ ಇಲ್ಲಿಯವರೆಗೆ ತಾವು ಮಾಡಿದ ಕಾಯಿದೆ ಜಾರಿಗೆ ಬರಲಿಲ್ಲ.

ಶ್ರೀ ಜಿ. ಕೆ. ತಕ್ಕೇದ್.—ಮಾನ್ಯ ಸದಸ್ಯರು ಪೌಡರ್ ಮಿಶ್ರಣ ಮಾಡಿ ಹೆಂಡ ತಯಾರು ಮಾಡುತ್ತಾರೆಂದು ಹೇಳಿದರು. ನಮ್ಮ ಕಡೆ ಇದನ್ನು ಸೇಂದಿ ಎಂದು ಹೇಳುತ್ತಾರೆ. ಈಗ ಬೆಳಗಾಂ ಜಿಲ್ಲೆಯ ಸೌಂದತ್ತಿಯಲ್ಲಿ ಒಂದು ಈಚಲ ಮರ ಕೂಡ ಇಲ್ಲ. ಅರಭಾವಿ ಹಾಗೂ ಗೋಕಾಕ್‌ನಲ್ಲಿ ೫೦–೬೦ ಮರಗಳು ಇರಬಹುದು. ಆದಕಾರಣ ಈ ಮರಗಳಿಂದ ಹೆಂಡ ಇಳಿಸುವ ಉದ್ಯೋಗ ಈಗ ನಶಿಸಿ ಹೋಗುತ್ತಿದೆ. ಈ ಕಾರಣದಿಂದ ಇವರುಗಳಿಗೆ ಬೇರೆ ಕೆಲಸವನ್ನಾದರೂ ಕಲ್ಪಿಸಿ ಕೊಡಿ. ಈ ಮರಗಳೇ ಇಲ್ಲದಿರುವುದರಿಂದ ಹೆಂಡ ಇಳಿಸುವ ಪ್ರಶ್ನೆ ಕೂಡ ಬರುವುದಿಲ್ಲ ಮತ್ತು ಹಾವು ಚೇಳು ಕಡಿಯುವ ಪ್ರಶ್ನೆ ಕೂಡ ಬರುವುದಿಲ್ಲ. ಈಗ ಪೌಡರ್ ಮೂಲಕ ಹೆಂಡ ತಯಾರು ಮಾಡಿ ಅದನ್ನು ಮಾರಾಟ ಮಾಡುವ ಮೂಲಕ ಕೋಟ್ಯಾಂತರ ರೂಪಾಯಿಗಳನ್ನು ಗುತ್ತಿಗೆದಾರರು ಸಂಪಾದನೆ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರೇ ಹೇಳುತ್ತಿರುವುದರಿಂದ ಮರ ಹತ್ತಿ ಹೆಂಡ ಇಳಿಸುವ ಉದ್ಯೋಗ ನಶಿಸಿ ಹೋಗಿದೆ. ಆದ್ದರಿಂದ ಇವರುಗಳಿಗೆ ಬೇರೆ ಉದ್ಯೋಗ ಕೊಡಿ.

ಶ್ರೀ ಪಂಪಾಪತಿ—ಸ್ವಲ್ಪವೇ ಮರಗಳಿದ್ದರೂ ಸಹ ಈ ಜನರು ಮಾಡುವ ಕೆಲಸ ಮಾಡಲೇಬೇಕು. ಹೆಂಡ ಇಳಿಸಲೇ ಬೇಕು. ಏಕೆಂದರೆ ಬರೀ ನೀರು ಮತ್ತು ಪೌಡರ್‌ನಿಂದಲೇ ಹೆಂಡ ತಯಾರು ಮಾಡುವುದಿಲ್ಲ. ಅದಕ್ಕೆ ಸ್ವಲ್ಪವಾದರೂ ಹೆಂಡ ಹಾಕುತ್ತಾರೆ. ಈ ಈಚಲು ಮರಗಳನ್ನು ಹತ್ತುವವರನ್ನು ಮಾತ್ರ ಸರ್ಕಾರ ನೋಡಬಾರದು, ಏಕೆಂದರೆ, ಕೆಲವು ಸಲ ತೆಂಗಿನ ಮರ ಹತ್ತಿ ಕೆಳಗೆ ಬೀಳುವವರೂ ಸಹ ಇದ್ದಾರೆ. ಆದ್ದರಿಂದ ಇಂತಹವರಿಗೂ ಏನಾದರು ಪರಿಹಾರ ಕೊಡಬೇಕಾಗುತ್ತದೆ.

ಶ್ರೀ ಜಿ.ಕೆ. ತಕ್ಕೇದ್.—ಈಗ ಬೆಳಗಾಂನಲ್ಲಿ ೩೦ ಲಕ್ಷದವರೆಗೆ ಜನಸಂಖ್ಯೆ ಇದೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಎಂದರೆ ನೇರವಾಗಿ ಈಚಲು ಮರದಿಂದಲೇ ಸೇಂದಿಯನ್ನು ತಗೆಯುತ್ತಿದ್ದಾರೆ ಅಂತ ಹೇಳುತ್ತಾರೆ, ನಾನು ಹೇಳುವುದೇನೆಂದರೆ ಅವಕ್ಕೆ ಪೌಡರ್ ಮತ್ತು ನೀರು ಸೇರಿಸಿ ಸೇಂದಿ ಮಾಡಿ ಕೊಡುತ್ತಾರೆಂದು ನಾನು ಹೇಳುತ್ತೇನೆ.

ಶ್ರೀ ಪಂಪಾಪತಿ.—ಅದೇನೇ ಇರಲಿ. ಅದು ಅವರ ಅಭಿಪ್ರಾಯ ಇರಬಹುದು. ಒಟ್ಟಿನಲ್ಲಿ ಹೇಳುವುದಾದರೆ ಈ ಮರ ಹತ್ತಿ ಇಳಿಯುತಕ್ಕಂಥಾ ಜನ ಏನು ಇದ್ದಾರೆ ಅವರಿಗೆ ಅನುಕೂಲ ಮಾಡಿಕೊಡಬೇಕು, ನಿಮ್ಮ ಕಡೆಯೂ ಇದ್ದಾರೆ, ನಮ್ಮ ಕಡೆಯೂ ಇದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸೇಂದಿ ಮರ ಇದೆ, ಅರಸೀಕೆರೆಯಲ್ಲಿ ಸೇಂದಿ ಮರ ಇದೆ ಅದು ತೆಂಗಿನ ಮರವೇ ಇರಲಿ ಹಿಚಲು ಮರವೇ ಇರಲಿ ಈ ಮರ ಹತ್ತಿ ಇಳಿಯುವ ಜನಕ್ಕೆ ತಾವು ಅನುಕೂಲ ಮಾಡಿಕೊಡಬೇಕು, ಅವರ ಬಗ್ಗೆ ತಾವು ವಿಶೇಷವಾದ ಗಮನ ಕೊಟ್ಟು ಅವರಿಗೆ ಶೀಘ್ರವಾದ ಪರಿಹಾರ ಕೊಡುವ ಹಾಗೆ ತಾವು ವಿಶೇಷ ಗಮನ ಕೊಡಬೇಕು. ಅವರ ಮಕ್ಕಳಿಗೆ ತಾವು ವಿದ್ಯಾಭ್ಯಾಸದ ಅನುಕೂಲತೆ ಮಾಡಿಕೊಡಬೇಕು, ಆರೋಗ್ಯದ ಬಗ್ಗೆ, ವೈದ್ಯಕೀಯದ ಬಗ್ಗೆ ಬೇಕಾದ ಸವಲತ್ತುಗಳನ್ನು ಮಾಡಿಕೊಡಬೇಕು. ಇವರಿಂದ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿಕೊಂಡು ಅನುಕೂಲ ಮಾಡಿಕೊಡದೇ ಇರುವುದು ಸರಿಯೇ? ಆದುದರಿಂದ ಅವರಿಗೆ ಈ ಕಂಟ್ರಾಕ್ಟ್ ಕೊಡುವಾಗ ಈ ಒಂದು ಅನುಕೂಲತೆಯನ್ನು ಈ ಜನರಿಗೆ ಮಾಡಿಕೊಡಬೇಕೆನ್ನುವ ಒಂದು ಕಂಡೀಷನ್ ಹಾಕಿ.

ಶ್ರೀ ವೈ. ರಾಮಕೃಷ್ಣ—ಅದರ ಬಗ್ಗೆ ಮಾಡಿದ್ದೇವಲ್ಲಾ.

ಶ್ರೀ ಪಂಪಾಪತಿ.—ನಿಮ್ಮ ಕಂಡೀಷನ್‌ನಲ್ಲಿ ಅದನ್ನು ಸೇರಿಸಿದ್ದೀರಾ?

ಶ್ರೀ ವೈ. ರಾಮಕೃಷ್ಣ.—ಅದಕ್ಕೇನೇ ಬೇರೆ ಎಂದು ಆಕ್ಟ್ ಮಾಡಿದ್ದೇವಲ್ಲಾ, ಅದರಲ್ಲೇ ಎಲ್ಲಾ ಬರುತ್ತದೆ.

ಶ್ರೀ ಪಂಪಾಪತಿ.—ನೀವು ಅದರಲ್ಲಿ ೨೫ ಕಂಡೀಷನ್ಸ್ ಹಾಕಿರಬಹುದು. ಅವರು ಕೊಡುತ್ತಾ ಇದ್ದಾರಾ ಇಲ್ಲ ಅವರಿಗೆ ವೈಯಕ್ತಿಕೀಯ ಸೌಲಭ್ಯವಾಗಲಿ ಯಾವ ಸೌಲಭ್ಯವುಗಳ್ಳಿ ಕೊಡುತ್ತಾ ಇಲ್ಲ, ಏನಾದರೂ ಅನಾಹುತವಾದರೆ ಪರಿಹಾರ ಕೊಡುತ್ತಾರಾ ಎಂದರೆ ಅದೂ ಇಲ್ಲ. ನಿಮ್ಮ ಒಂದು ಕಂಡೀಷನ್‌ನಲ್ಲಿ ಅವರಿಗೆ ಈ ರೀತಿಯಾದಂಥಾ ಪರಿಹಾರ ಕೊಡಬೇಕೆಂದು ಹಾಕಿದ್ದೀರಾ? ಅವರು ಬರೀ ವ್ಯಾಪಾರ ಮಾಡಿಕೊಳ್ಳುವುದಕ್ಕೆ ತಮಗೇನು ಕಂಡೀಷನ್ ಬೇಕೋ ಅದನ್ನು ಹಾಕುತ್ತೀರಿ. ಆದರೆ ಅವರ ಅನುಕೂಲದ ಬಗ್ಗೆ, ಅವರ ಭದ್ರತೆ ಬಗ್ಗೆ ಯಾವ ಕಂಡೀಷನ್ನೂ ಇಲ್ಲ. ಯಾವ ಕಂಟ್ರಾಕ್ಟರ್ ದಾರರ ಹತ್ತಿರ ಇವರು ಕೆಲಸ ಮಾಡುತ್ತಾರೋ ಮೂರನೇ ವರ್ಷ ಇನ್ನೊಬ್ಬ ಕಂಟ್ರಾಕ್ಟರ್ ಹೊಸಬ ಬಂದರೆ ಅವನು ಬೇಕಾದರೆ ಇಟ್ಟುಕೊಳ್ಳಬಹುದು ಬೇಡದೇ ಹೋದರೆ ತೆಗೆದುಬಿಡಬಹುದು. ಅವರಿಗೆ ಕೆಲಸದ ಭದ್ರತೆ ಇಲ್ಲ. ಇದನ್ನು ತಾವು ಆಕ್ಟ್‌ನಲ್ಲಿ ಸೇರಿಸಿ. ಅವರಿಗೆ ಕೊಡುವಾಗ ಈ ಬಗ್ಗೆ ಒಂದು ಕಂಡೀಷನ್ ಹಾಕಿ ಕೊಟ್ಟರೆ ಯಾರೇ ಗುತ್ತಿಗೆದಾರರು ಬರಲಿ ಕೆಲಸ ಮಾಡುವವರು ಇವರು ತಾನೇ ಆದುದರಿಂದ ಇವರನ್ನೇ ತೆಗೆದುಕೊಳ್ಳುವ ಹಾಗೆ ಇವರಿಗೇ ಕೆಲಸ ಕೊಡುವ ಹಾಗೆ ಮಾಡಬೇಕು. ತಮಗೆ ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಮುಖ್ಯವಾಗಿ ತರಬೇಕಾಗಿದೆ. ಅದೇನೆಂದರೆ ಬೆಂಗಳೂರಿನಲ್ಲೇ ಈ ಜನ ೧೫೦ ಜನರು ಕೆಲಸ ಇಲ್ಲದೇ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಹೇಳಿದ್ದಕ್ಕೆ ಇದನ್ನು ಸರಿಪಡಿಸೋಣ ಎಂದು ಹೇಳಿದ್ದಾರೆ. ಇವರಿಂದ ಕೋಟ್ಯಾಂತರ ರೂಪಾಯಿ ಗುತ್ತಿಗೆದಾರರು ಲಾಭ ಮಾಡಿಕೊಂಡಿರುವುದಲ್ಲದೆ ಸರ್ಕಾರಕ್ಕೂ ಕೂಡ ಕೋಟ್ಯಾಂತರ ರೂಪಾಯಿ ಹಣ ಬರುತ್ತದೆ. ಆದರೆ ಈ ಕೆಲಸ ಮಾಡತಕ್ಕಂಥಾ ಜನರಿಗೆ ಯಾವುದೇ ಒಂದು ಸವಲತ್ತು ಗಳನ್ನೂ ಕೊಡುತ್ತಾ ಇಲ್ಲ. ಮರದಿಂದ ಹೆಂಡ ಇಳಿಸತಕ್ಕಂಥಾವರು ದಿನಕೂಲಿ ಮೇಲೆ ೫ ರೂಪಾಯಿ ನಲ್ಲಿ ಕೆಲಸ ಮಾಡುತ್ತಾರೆ. ಇದರಲ್ಲಿ ಹೆಣ್ಣು ಮಕ್ಕಳೂ ಕೂಡ ಕೆಲಸ ಮಾಡುತ್ತಾರೆ. ನಿದ್ರೆಯೂ ಇಲ್ಲದೆ ರಾತ್ರಿಯೆಲ್ಲಾ ಕೆಲಸ ಮಾಡುತ್ತಾರೆ. ರಾತ್ರಿಯೆಲ್ಲಾ ಅದಕ್ಕೆ ಹೆಂಡ ತುಂಬಿ ಮಾರನೇ ದಿವಸ ಲಾರಿಗಳಲ್ಲಿ ಎಲ್ಲಾ ಕಡೆಯೂ ಕಳುಹಿಸಿಕೊಡುವುದಕ್ಕಾಗಿ ಅವರುಗಳು ರಾತ್ರಿಯೆಲ್ಲಾ ಕೆಲಸ ಮಾಡಬೇಕಾಗುತ್ತದೆ. ಅವರಿಗೆ ಕೊಡತಕ್ಕಂಥಾ ಸಂಬಳದ ವ್ಯವಸ್ಥೆ ನೋಡಿದರೆ ಸರಿಯಾಗಿಲ್ಲ ಜೊತೆಗೆ ಏನಾದರೂ ಖಾಯಿಲೆ ಬಂದರೆ ಅದಕ್ಕೆ ಸರಿಯಾದಂಥ ವೈದ್ಯಕೀಯ ಸವಲತ್ತುಗಳು ಇಲ್ಲ. ಆದುದರಿಂದ ಇವರಿಗೆ ಅನುಕೂಲತೆಯನ್ನು ಒದಗಿಸಿಕೊಡುವುದರ ಬಗ್ಗೆ ಬಹುದೊಡ್ಡ ಪಾತ್ರ ಗುತ್ತಿಗೆದಾರರದ್ದೂ ಇದೆ ಜೊತೆಗೆ ಸರ್ಕಾರದ್ದೂ ಇದೆ. ಪ್ರತಿ ವರ್ಷವೂ ಇದರಿಂದ ಸುಮಾರು ೧೫೦ ಕೋಟಿ ರೂಪಾಯಿ ಆದಾಯ ಬರತಕ್ಕಂಥಾ ಈ ಕೈಗಾರಿಕೆಯಲ್ಲಿ ಕೆಲಸ ಮಾಡತಕ್ಕಂಥಾ ಈ ಜನರಿಗೆ ತಾವೇಕೆ ಒಂದು ಹೆಚ್ಚಿನ ಕಾಳಜಿಯನ್ನು ವಹಿಸಿ ಆ ಕಾರ್ಮಿಕರಿಗೆ ಅನುಕೂಲತೆಯನ್ನು ಮಾಡಿಕೊಡಬಾರದು, ಅವರಿಗೆ ತಾವು ಈಗಲಾದರೂ ಅನುಕೂಲತೆಯನ್ನು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಈವೊತ್ತಿನ ದಿವಸ ಹೆಂಡ ಏನು ಮಾರುತ್ತಾರೋ ಅದರ ಬಗ್ಗೆ ಸ್ವಲ್ಪ ಬದಲಾವಣೆ ಮಾಡಬೇಕಾಗಿದೆ. ೧೯೪೭ನೇ ಇಸವಿಯಲ್ಲಿ ಹೆಂಡ ಮಾರುವ ಒಂದು ಪದ್ಧತಿ ಏನು ಇತ್ತೋ ಅದೇ ಒಂದು ಪದ್ಧತಿ ಈಗಲೂ ಇದೆ. ಈವೊತ್ತಿನ ದಿವಸ ಹೆಂಡ ಕುಡಿಯತಕ್ಕಂಥಾ ಜನರಿಗೆ ಹೆಂಡ ಮಾರತಕ್ಕಂಥಾವರು ಅವರಿಗೆ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಸೌಕರ್ಯವನ್ನು ಮಾಡಿ ಕೊಡಬೇಕು. ಹೋಟಲ್‌ಗಳಲ್ಲಿ ಯಾವ ರೀತಿಯಾಗಿ ಒಂದೇ ಸ್ವಚ್ಛತೆ ಇದೆಯೋ ಅದೇ ರೀತಿಯಾಗಿ ಹೆಂಡ ಮಾರುವ ಸ್ಥಳವನ್ನೂ ಇಡಬೇಕೆಂದು ತಾವು ತಾಕೀತು ಮಾಡಬೇಕು. ಅವರನ್ನು ತಮ್ಮ ತಹಬಂದಿಗೆ ಈ ರೀತಿ ಹೆದರಿಸಿ ತರಬೇಕು. ನೀವು ಹಾಗೆ ಮಾಡದೇ ಹೋದರೆ ತೆಗೆದು ಹಾಕಿಬಿಡುತ್ತೇವೆ ಅಂತ ಹೆದರಿಸಿದರೆ ಆವಾಗ ಎಲ್ಲವೂ ಸರಿಬರುತ್ತದೆ. ಈ ಹೆಂಡ ಕುಡಿಯುವವರು ಒಳಗಡೆ ಅಂಗಡಿಯಿಂದ ತೆಗೆದುಕೊಂಡು ಈಚೆ ಬಂದು ನಿಂತುಕೊಂಡು ಕುಡಿಯುತ್ತಾ ಇರುವವರನ್ನು ನೋಡುತ್ತಾ ಇದ್ದೇವೆ; ರೈಲ್ವೇ ಸ್ಟೇಷನ್ ಬಳಿಯಲ್ಲಿ ಕೆಲವು ಹೆಂಡದ ಅಂಗಡಿಗಳಲ್ಲಿ ಈ ಜನರು ಯಾವ ರೀತಿಯಾಗಿ ಕುಡಿಯುತ್ತಾರೆ ಅನ್ನುವುದನ್ನು ನೋಡಿದ್ದೇವೆ. ತಾವು ಆ ಗುತ್ತಿಗೆದಾರರಿಗೆ ಹೇಳಬೇಕು. ನೀರು ಮತ್ತು ಪೌಡರ್ ಸೇರಿಸಿದ ಹೆಂಡವನ್ನು ಒಂದು ಬಾಟಲಿಗೆ ಎರಡು ರೂಪಾಯಿನಂತೆ ಮಾರುತ್ತಿದ್ದಾರೆ ಮೊದಲು ೮ ಆಣೆ ಇತ್ತು. ಆ ಮಾರಾಟ ಮಾಡುವ ಸ್ಥಳ ನೋಡಿದರೆ ಅಲ್ಲಿ ಕೂತುಕೊಂಡು ಕುಡಿಯುವುದಕ್ಕೆ ಸರಿಯಾಗಿ ಒಂದು ಸ್ಥಳ ಮಾಡಿಲ್ಲಾ. ಇದರಿಂದ ಅವರು ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡಿದರೂ ಸಹಿತ ಅವರಿಗೆ ಒಂದು ಅನುಕೂಲತೆಯನ್ನು ಏತಕ್ಕೆ ಮಾಡಿ ಕೊಡಬಾರದು ಇದರ ಬಗ್ಗೆ

ಸರ್ಕಾರದವರು ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು. ಈವೊತ್ತು ಸಾರಾಯಿ ಕುಡಿಯುವವರು ಸಾರಾಯಿ ಮಾರತಕ್ಕಂಥಾ ಜಾಗದಲ್ಲಿ ಹೋಗಿ ಅಲ್ಲಿಂದ ತೆಗೆದುಕೊಂಡು ಹೊರಗೆ ಬಂದು ಕುಡಿಯಬೇಕು. ಇಷ್ಟು ಆದಾಯ ಈ ಇಲಾಖೆಗೆ ಬಂದರೂ ಕೂಡ, ಕುಡಿಯುವುದು ಅಪಾಯ ಎಂದು ತಿಳಿದಿದ್ದರೂ ಕೂಡ ಅವರಿಗೆ ಕುಡಿಯಲು ಒಂದು ಸ್ವಚ್ಛವಾದ ಜಾಗ ಇಲ್ಲ. ಕೆಲವರು ಇದರಿಂದ ತಮ್ಮ ಆರೋಗ್ಯ ವನ್ನು ಕೆಡಿಸಿಕೊಂಡು ಎಷ್ಟೋ ಜನರು ಆಸ್ಪತ್ರೆಗಳನ್ನು ಸೇರಿದ್ದಾರೆ. ತಾವು ದೊಡ್ಡ ದೊಡ್ಡ ಆಸ್ಪತ್ರೆ ಗಳನ್ನು ಕಟ್ಟುವುದಕ್ಕೆ ಮಾತ್ರ ಹಣ ಕೊಡುತ್ತೀರಿ. ಅದರ ಬದಲಾಗಿ ಆರೋಗ್ಯ ಕೆಡದೇ ಇರುವ ಹಾಗೆ ಮುನ್ನೆಚ್ಚರಿಕೆಯ ಕ್ರಮ ತೆಗೆದುಕೊಂಡು ಸರಿಯಾಗಿ ಚಿಕಿತ್ಸೆ ಮಾಡುವುದಾದರೆ ಆಸ್ಪತ್ರೆಯ ಅವಶ್ಯಕತೆಯೇ ಇರುವುದಿಲ್ಲ. ಜನರೂ ಕೂಡ ಆರೋಗ್ಯವಂತರಾಗಿ ಕೆಲಸ ಮಾಡುವುದಕ್ಕೆ ಸಾಧ್ಯ. ಆದುದರಿಂದ ನಾನು ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಬೆಂಗಳೂರಿನಲ್ಲಿ ಈಗ ಸುಮಾರು ೧೫೦ ಜನರನ್ನು ಏನು ಕೆಲಸದಿಂದ ತೆಗೆದು ಹಾಕಿದ್ದಾರೆ ಅವರನ್ನು ಪುನಃ ತೆಗೆದುಕೊಳ್ಳು ವಂತೆ ತಾವು ಮಾಡಬೇಕು ಎಂದು ಹೇಳುತ್ತೇನೆ. ಈ ಮಾಲೀಕರುಗಳು ಸಂಘಟನೆ ಮಾಡಿಕೊಂಡು ಇವರಿಗೆ ಏನು ತೊಂದರೆ ಮಾಡುತ್ತಿದ್ದಾರೆ ಎಂದರೆ ಅವರಿಗೆ ಅವಶ್ಯಕವಾಗಿ ಕೊಡಬೇಕಾದಂಥಾ ಸೌಲಭ್ಯ ವನ್ನೂ ಸಹ ಕೊಡದೇ ತೊಂದರೆ ಕೊಡುತ್ತಿದ್ದಾರೆ. ಈ ಗುತ್ತಿಗೆದಾರರು ಇವರಿಂದ ಕೋಟ್ಯಾಂತರ ರೂಪಾಯಿ ಲಾಭ ಮಾಡಿಕೊಂಡಿರುವುದೂ ಅಲ್ಲದೆ ಇದರಿಂದ ಸರ್ಕಾರಕ್ಕೂ ಕೂಡ' ಕೋಟ್ಯಾಂತರ ರೂಪಾಯಿ ಬರುತ್ತದೆ. ಹೀಗಿರುವಾಗ ಈ ಜನರು ತಮಗೆ ಬೇಕಾದ ಸೌಲಭ್ಯವನ್ನು ಕೇಳುವುದರಲ್ಲಿ ತಪ್ಪೇನಿದೆ. ತಾವು ಇದನ್ನು ಗಮನಿಸಬೇಕು. ನಾನು ಮತ್ತೆ ಹೇಳಬೇಕಾಗಿದೆ ಈ ೧೫೦ ಜನರಿಗೆ ೨೭ ದಿವಸದಿಂದ ಕೆಲಸ ಇಲ್ಲಾ. ಇವರು ಈ ರೀತಿಯಾಗಿ ಒಂದು ಸಂಘಟನೆ ಮಾಡಿದ್ದಾರಲ್ಲಾ ಅನ್ನುವುದ ಕ್ಕೋಸ್ಕರವೇನೇ ಆ ಮಾಲೀಕರು ತೊಂದರೆ ಕೊಡುತ್ತಿದ್ದಾರೆ. ಇವರು ಸಂಘಟನೆ ಮಾಡಿಕೊಂಡಿರುವ ಹೊತ್ತಿಗೇನೇ ನಾನೂ ಸಹ ಇವರ ಬಗ್ಗೆ ಮಾತನಾಡುವುದಕ್ಕೆ ಒಂದು ಧೈರ್ಯವಾಗಿದೆ, ಇಲ್ಲದೇ ಹೋದರೆ ಮಾತನಾಡುವುದಕ್ಕಾಗುತ್ತಿರಲಿಲ್ಲಾ. ಇವರು ಈ ರೀತಿಯಾಗಿ ಸಂಘಟನೆ ಮಾಡಿಕೊಂಡ ಉದ್ದೇಶ ಇವರ ತೊಂದರೆ ಏನು ಇದೆ ಅದನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಮಾಡಿಕೊಂಡಿದ್ದಾರೆ ಇನ್ನೇನೂ ಬೇರೆ ಉದ್ದೇಶವಿಲ್ಲಾ. ತಾವು ಇದನ್ನು ಗಮನಿಸಬೇಕು. ತಮಗೆ ಹೇಳಬೇಕಾದರೆ ಬೆಂಗಳೂರು ದಕ್ಷಿಣ ಮತ್ತು ಉತ್ತರ ತಾಲ್ಲೂಕು ತೆಗೆದುಕೊಂಡರೆ ಒಂದು ತಿಂಗಳಿಗೆ ಒಂದು ಕೋಟಿ ೧೧ ಲಕ್ಷ ೧೧೧ ರೂಪಾಯಿ ಆದಾಯ ಬರುತ್ತದೆ. ಇಷ್ಟು ದುಡ್ಡನ್ನು ಈ ಗುತ್ತಿಗೆದಾರರು ಸರ್ಕಾರಕ್ಕೆ ಕಟ್ಟಿಕೊಂಡು ಇನ್ನು ಇದರ ಮೇಲೆ ಅವರು ಲಾಭವನ್ನು ಮಾಡಿ ಕೊಳ್ಳಬೇಕಾಗುತ್ತದೆ. ಖಂಡ್ಸಾನು ಆಗದಂತೆ ಲಾಭ ಬರುವ ಹಾಗೆ ಮಾಡಿಕೊಳ್ಳುತ್ತಾರೆ. ಹೆಚ್ಚು ಆದಾಯ ಬರತಕ್ಕಂಥಾ ಈ ಬಾಬಿನಲ್ಲಿ ಕೆಲಸಗಾರರಿಗೆ ಕನಿಷ್ಟ ಸೌಲಭ್ಯಗಳು ಏನು ಕೊಡಬೇಕೋ ಅದನ್ನು ಕೊಡಿ ಅಂತ ಕೇಳಿದರೆ ಅದನ್ನು ಕೊಡದೆ ತೊಂದರೆ ಕೊಟ್ಟಿದ್ದಾರೆ, ಅಂದರೆ ಅವರನ್ನು ಕೆಲಸದಿಂದ ತೆಗೆದಿದ್ದಾರೆ. ಆದುದರಿಂದ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ಇದನ್ನು ತಾವು ಗಮನಿಸಿ ಇದರ ಬಗ್ಗೆ ಒಂದು ಕಾಯಿದೆ ಯನ್ನಾದರೂ ತಂದು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ. ಹೆಂಡ ಇಳಿಸ ತಕ್ಕಂಥಾವರಿಗೆ ಮತ್ತು ಹೆಂಡ ಮಾರತಕ್ಕಂಥಾವರಿಗೆ ಅನೇಕ ಕಡೆಗಳಲ್ಲಿ ಕಡಿಮೆ ಕೂಲಿಯನ್ನು ಕೊಡು ತ್ತಿದ್ದಾರೆ. ಇದನ್ನು ಸರ್ಕಾರ ಗಮನಿಸಿ ಸರ್ಕಾರದವರು ದಿನಗೂಲಿ ಕೊಡುವುದರ ಬಗ್ಗೆ ಏನು ಒಂದು ಕಾನೂನು ಮಾಡಿದ್ದಾರೆ ಅದರಂತೆ ಕೊಡಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ಹೇಳು ತ್ತೇನೆ.

ಅಧ್ಯಕ್ಷರು.—ಕೂಲಿ ಇಷ್ಟು ಕೊಡಬೇಕೆಂದು ಮೊದಲೇ ನಿಗದಿ ಮಾಡಿದ್ದಾರಲ್ಲಾ.

ಶ್ರೀ ಪಂಪಾಪತಿ.—ಅವರು ನಿಗದಿಯಾದ ಕೂಲಿ ಕೊಡುತ್ತಾ ಇಲ್ಲ. ಅದಕ್ಕೆ ನಾನು ಈ ಮಾತನ್ನು ಹೇಳತ್ತಾ ಇರುವುದು. ಈ ಜನರ ಸಮಸ್ಯೆ ಬಗ್ಗೆ ಇವರು ಕಂಡು ಕೊರತೆಗಳ ಬಗ್ಗೆ ಒಂದು ಪಟ್ಟಿ ಮಾಡಿ ಮಾನ್ಯ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೇನೆ. ಈ ಬಗ್ಗೆ ತಾವೂ ಸಹ ಪರಿಶೀಲನೆ ಮಾಡಿ ಈ ಜನರಿಗೆ ಏನು ತೊಂದರೆಯಾಗಿದೆ ಅನ್ನುವುದನ್ನು ಗಮನಿಸಿ, ಅವರು ತೊಂದರೆ ಕೊಡುತ್ತಿ ದ್ದಾರೆ ಅದನ್ನು ತಡೆಯುವ ಹಾಗೆ ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ಈಗ ಬೆಂಗಳೂರಿನಲ್ಲಿ ಕೆಲಸದಿಂದ ೧೫೦ ಜನರನ್ನು ಏನು ತೆಗೆದಿದ್ದಾರೆ ಅವರನ್ನು ಮತ್ತೆ ತೆಗೆದುಕೊಳ್ಳುವುದಕ್ಕೆ ತಾವು ಪ್ರಯತ್ನ ಮಾಡಿ ಕೊಡಿಸಿಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳೂ ಸಹ ಹೇಳಿದ್ದಾರೆ. ನಾನು ಇನ್ನೊಮ್ಮೆ ಈ ಬಗ್ಗೆ ಒತ್ತಾಯ ಮಾಡುತ್ತೇನೆ. ದಯವಿಟ್ಟು ಆ ಗುತ್ತಿಗೆದಾರರನ್ನೂ ಕರೆಸಿ

ಅವರಿಗೆ ಹೇಳಿ ಇವರಿಗೆ ಮತ್ತೆ ಕೆಲಸವನ್ನು ಕೊಡುವ ಹಾಗೆ ತಾವು ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ರಾಜೂಗೌಡ (ಬಸ್ರೂರು).—ಮಾನ್ಯ ಸಭಾಧ್ಯಕ್ಷರೇ, ಈ ಸದನದ ಮುಂದೆ ಮಂಡಿಸಿರತಕ್ಕ ಎಲ್ಲಾ ಬೇಡಿಕೆಗಳನ್ನು ನಾನು ಪುಷ್ಟೀಕರಿಸುತ್ತಾ ಕೆಲವು ಸಲಹೆಗಳನ್ನು ಕೊಡಲು ಇಷ್ಟ ಪಡುತ್ತೇನೆ. ಮೊದಲನೆಯದಾಗಿ ನಾನು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ, ನಾನು ರೇಷ್ಮೆ ಕೈಗಾರಿಕೆಯ ಬಗ್ಗೆ ಒಂದೆರಡು ಮಾತನ್ನು ಹೇಳಲು ಬಯಸುತ್ತೇನೆ. ಈ ಕೈಗಾರಿಕೆ ಕರ್ನಾಟಕದಲ್ಲಿ ಸಾಕಷ್ಟು ಪ್ರಗತಿಯನ್ನು ಹೊಂದಿದೆ, ಇದಕ್ಕೆ ಅನೇಕ ಕಾರಣಗಳು ಇವೆಯೆಂದು ನಾವು ಹೇಳಬಹುದು. ನಮ್ಮ ಸರ್ಕಾರದವರು ಈ ಕೈಗಾರಿಕೆಗೆ ಹೆಚ್ಚಿನ ರೀತಿಯಲ್ಲಿ ಸಹಾಯವನ್ನು ಕೊಟ್ಟು ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಅದರಲ್ಲಿಯೂ ಇಲಾಖೆಯ ನಿರ್ದೇಶಕರು ಹಾಗೂ ಕಾರ್ಯದರ್ಶಿಯವರು ಬಹಳ ಶ್ರಮಿಸುತ್ತಿದ್ದಾರೆ. ಇಂಥ ಸರಳ ಸ್ವಭಾವದ ವ್ಯಕ್ತಿಗಳು ಈ ಇಲಾಖೆಗೆ ಬಂದಿರತಕ್ಕದ್ದು ನಮ್ಮ ಭಾಗ್ಯ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಇಂಥ ವಾತಾವರಣದಲ್ಲಿ ಕೈಗಾರಿಕೆಗಳನ್ನು ನಮ್ಮ ರಾಜ್ಯದಲ್ಲಿ ಸ್ಥಾಪಿಸುವಾಗ ಕೈಗಾರಿಕೆಗಳಿಗೆ ಬೇಕಾದಂಥ ಕೆಲಸಗಾರರನ್ನು, ಕಾರ್ಮಿಕರನ್ನು ತೆಗೆದುಕೊಳ್ಳುವಾಗ ಸ್ಥಳೀಯರನ್ನು ನೇಮಕ ಮಾಡುವ ವಿಚಾರದಲ್ಲಿ ಇವರು ಹಿಂದೆ ಬಿದ್ದಿದ್ದಾರೆ. ಸ್ಥಳೀಯರನ್ನು ನೇಮಕ ಮಾಡತಕ್ಕದ್ದು ಅವರ ಆದ್ಯ ಕರ್ತವ್ಯವಾಗಬೇಕಾಗಿತ್ತು. ಆದರೆ ಇದರ ಬಗ್ಗೆ ಪರಿಸ್ಥಿತಿಯೇ ಬೇರೆಯಾಗಿದೆ. ಸಾಮಾನ್ಯವಾಗಿ ಒಂದು ಸ್ಥಳದಲ್ಲಿ ಕೈಗಾರಿಕೆ ಬರುತ್ತದೆಂದರೆ, ಆ ಸ್ಥಳದ ಆರ್ಥಿಕ ಪರಿಸ್ಥಿತಿಯು ಬದಲಾವಣೆಯಾಗುವ ಸಂಭವ ಇರುತ್ತದೆ. ಈ ಕೈಗಾರಿಕೆಗಳಿಗೋಸ್ಕರ ತಮ್ಮ ಜಮೀನನ್ನು ಯಾರು ಕಳೆದುಕೊಂಡಿರುತ್ತಾರೆ ಅವರಿಗೆ ಸ್ಥಾನ ಪಲ್ಲಟವಾಗುತ್ತದೆನ್ನುವುದನ್ನು ನಾವು ಗಮನಿಸಬೇಕಾಗುತ್ತದೆ, ಕೆಲವರು ಜಮೀನನ್ನು ಕಳೆದುಕೊಂಡವರು ಬೇರೆ ಕಡೆಗೆ ವಲಸೆ ಹೋಗಿರುವಂಥ ನಿದರ್ಶನಗಳೂ ನಮ್ಮಲ್ಲಿವೆ. ನನ್ನ ಅಭಿಪ್ರಾಯದ ಪ್ರಕಾರ ಈ ಕೈಗಾರಿಕೆಗಳಿಗೆ ಯಾರು ಜಮೀನನ್ನು ಕೊಟ್ಟಿರುತ್ತಾರೋ ಅವರ ಮಕ್ಕಳಿಗೆ ಅವರ ಸಂಬಂಧಪಟ್ಟವರಿಗೆ ಉದ್ಯೋಗಗಳನ್ನು ಕೊಡುವ ವಿಚಾರದಲ್ಲಿ ಆದ್ಯತೆಯನ್ನು ಕೊಡಬೇಕು. ಇಂಥ ಒಂದು ಸಹಾಯ ಮಾಡುವ ಕಾರ್ಯದಲ್ಲಿ ತಮ್ಮ ಪ್ರಭಾವವನ್ನು ಬೀರಿ, ಕೈಗಾರಿಕೆಗಳಲ್ಲಿ ಯಾವ ರೀತಿಯ ತರಬೇತಿ ಹೊಂದಿದವರು ಬೇಕು ಎಂದು ತಿಳಿದುಕೊಂಡು ಅಂಥ ಅಭ್ಯರ್ಥಿಗಳ ಒಂದು ಪಟ್ಟಿಯನ್ನು ಮಾಡಿ ತರಬೇತಿಯನ್ನು ಕೊಡತಕ್ಕ ವ್ಯವಸ್ಥೆಯನ್ನೂ ಮಾಡಬೇಕು. ಹೀಗೆ ಮಾಡಿದರೆ ಕೆಲವರಿಗಾದರೂ ನಮ್ಮ ರಾಜ್ಯದವರಿಗೆ ಈ ಕೈಗಾರಿಕೆಗಳಲ್ಲಿ ಕೆಲಸವನ್ನು ಕೊಟ್ಟು ಉತ್ತೇಜನ ಮಾಡಿದಂತಾಗುತ್ತದೆ. ಬೇರೆ ಕಡೆಯಿಂದ ಬಂದಿರತಕ್ಕ ಕೈಗಾರಿಕೆಗಳಲ್ಲಿ ನಾವು ನೋಡಿದರೆ ಬಹುಶಃ ಗೇಟಿನಲ್ಲಿ ನಿಲ್ಲತಕ್ಕ ವಾಚ್‌ಮನ್‌ಗಳನ್ನು ಸಹ ತಮ್ಮ ಕಡೆಯಿಂದಲೇ ಕರೆದುಕೊಂಡು ಬಂದಂಥವರು ಇದ್ದಾರೆ. ಡ್ರೈವರ್ ಹುದ್ದೆಗಳಿಗೂ ಸಹ ತಮ್ಮವರನ್ನೇ ನೇಮಕ ಮಾಡಿಕೊಂಡು ನಮ್ಮ ರಾಜ್ಯದವರಿಗೆ ಯಾವ ಒಂದು ರೀತಿಯ ಅನುಕೂಲವನ್ನೂ ಮಾಡದೆ ಇರುವಂಥ ಜನರು ಇದ್ದಾರೆ. ನಮ್ಮ ಜಮೀನನ್ನು ತೆಗೆದುಕೊಂಡು, ನಮ್ಮ ನೀರನ್ನು ತೆಗೆದುಕೊಂಡು, ನಮ್ಮ ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡು ನಮ್ಮ ಜನರಿಗೆ ಕೆಲಸವನ್ನು ಏಕೆ ಕೊಡಬಾರದು ? ನಮ್ಮ ಕೈಗಾರಿಕೆಯ ಇಲಾಖೆಯ ನಿರ್ದೇಶಕರು ಈ ವಿಷಯದ ಬಗ್ಗೆ ಆಸಕ್ತಿಯನ್ನು ವಹಿಸಿಲ್ಲ ಎಂದು ನಾನು ಹೇಳಬೇಕು. ನಮ್ಮ ರಾಜ್ಯದಲ್ಲಿ ಬಂದು ಇಷ್ಟೊಂದು ನಮ್ಮ ಜನಗಳಿಂದ ಸಹಾಯವನ್ನು ಪಡೆದು ನಮ್ಮ ಜನಗಳಿಗೆ ಉದ್ಯೋಗ ಕೊಡತಕ್ಕ ವಿಷಯದಲ್ಲಿ ಏಕೆ ಆಲಸ್ಯ ಇದೆಯೋ ಗೊತ್ತಿಲ್ಲ. ಒಂದು ವ್ಯವಸ್ಥಿತವಾದ ರೀತಿಯಲ್ಲಿ ಕೈಗಾರಿಕೆಗಳು ಬೆಳೆದಾಗ ಆಯಾ ಪ್ರದೇಶದ ಆರ್ಥಿಕ ಪರಿಸ್ಥಿತಿಯು ಉತ್ತಮವಾಗುತ್ತದೆ. ಬೇರೆಕಡೆಯಿಂದ ಜನರು ಬಂದು ಇಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದಾಗ ಅವರು ಕನಿಷ್ಠಪಕ್ಷ ಎರಡನೆ ದರ್ಜೆಯ ನೌಕರಿಯನ್ನಾದರೂ ಸಹ ನಮ್ಮ ರಾಜ್ಯದವರಿಗೆ ಕೊಡತಕ್ಕ ಒಂದು ವ್ಯವಸ್ಥೆಯನ್ನು ತಾವು ಜಾರಿಗೆ ತರಬೇಕು. ಇದಕ್ಕೆ ಬೇಕಾದರೆ, ತಾವು ಒಂದು ನಿಬಂಧನೆಯನ್ನೂ ಏಕೆ ಮಾಡಬಾರದು ಎಂದು ನಾನು ತಮ್ಮನ್ನು ಕೇಳಬೇಕಾಗಿದೆ. ಇನ್ನು ಮುಂದೆಯಾದರೂ ಸರ್ಕಾರದವರು ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವವರಿಗೆ ಇಂಥ ನಿಬಂಧನೆಯನ್ನು ಹಾಕಿ ಅವರಿಗೆ ಯಾವ ರೀತಿಯ ಕೆಲಸಗಾರರು ಬೇಕು ಎಂದು ತಿಳಿದುಕೊಂಡು ಅಂಥವರನ್ನು ಇಲಾಖೆಯ ಮುಖಾಂತರವೇ ಕಳುಹಿಸತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕು ಎಂದು ಈ ಸಮಯದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೈಗಾರಿಕೆಗಳ ಪೂರಕ ಘಟಕಗಳ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳಬಯಸು ತ್ತೇನೆ. ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ನಡೆಸುವವರಿಗೆ ನಾವು ಅನೇಕ ರೀತಿಯ ಸವಲತ್ತುಗಳನ್ನು ನೀಡುತ್ತಿದ್ದೇವೆ. ಈ ಸವಲತ್ತುಗಳನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ನಮ್ಮ ಜನ ಮುಂದೆ ಬರುತ್ತಿಲ್ಲ. ಹೊರಗಡೆಯವರು ಬಂದು ಇಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮಾಡುತ್ತಾರೆ. ಇವತ್ತಿನದಿವಸ ೪೫ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಎಚ್.ಎಂ.ಟಿ.ಯು ಒಂದು ಹೊಸ ಯೋಜನೆ ಯನ್ನು ತೆಗೆದುಕೊಂಡಿದ್ದಾರೆ. ಇದಕ್ಕೆ ಬೇಕಾಗಿರತಕ್ಕ ಬಿಡಿ ಭಾಗಗಳನ್ನು ತಯಾರು ಮಾಡುವುದಕ್ಕೆ ಸಣ್ಣ ಸಣ್ಣ ಘಟಕಗಳನ್ನು ಸ್ಥಾಪನೆ ಮಾಡತಕ್ಕ ಕೆಲಸಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾಗಿದೆ. ಇದರಿಂದ ನಮ್ಮ ಜನರಿಗೆ ಉದ್ಯೋಗ ಕೊಡುವುದಲ್ಲದೆ ನಮ್ಮವರು ಮುಂದೆ ಬರುವುದಕ್ಕೆ ಒಂದು ಅವಕಾಶವನ್ನು ಈ ಪೂರಕ ಘಟಕಗಳ ಮೂಲಕ ಮಾಡಿಕೊಟ್ಟಂತಾಗುತ್ತದೆ, ಇದರಲ್ಲಿಯೂ ಅನೇಕ ರೀತಿಯ ಸಮಸ್ಯೆಗಳು ಉದ್ಭವವಾಗುತ್ತವೆ, ಒಂದೊಂದು ಸಂದರ್ಭದಲ್ಲಿ ಕಾರ್ಖಾನೆಯನ್ನು ಮುಚ್ಚು ವಂಥ ಸನ್ನಿವೇಶಗಳೂ ಬರಬಹುದು. ಅದರೂ ಸಹ ದೊಡ್ಡ ಕೈಗಾರಿಕೆಗಳಿಗೆ ಏನೇನು ರಾಮೆಟೀರಿಯಲ್ಸ್ ಬೇಕೋ ಮತ್ತು ಅದಕ್ಕೆ ಬೇಕಾಗಿರತಕ್ಕ ಬಿಡಿ ಭಾಗಗಳನ್ನು ಒದಗಿಸುವುದಕ್ಕೆ ಸಣ್ಣ ಅನ್ಸಿಲರಿ ಯುನಿಟ್ಸ್‌ಗೆ ತಾವು ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಮತ್ತು ನಮ್ಮ ಜನರ ಆರ್ಥಿಕ ಪರಿಸ್ಥಿತಿ ಯನ್ನು ಹೆಚ್ಚಿಸುವುದಕ್ಕೆ ತಮ್ಮಮೂಲಕ ಸಹಾಯಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದರ ಬಗ್ಗೆ ನಾನು ಒಂದು ಉದಾಹರಣೆಯನ್ನು ಕೊಡುವುದಾದರೆ, ಮೈಸೂರಿನಲ್ಲಿ ಎಚ್‌ಎಂಟಿಯ ಯುನಿಟ್‌ಗೆ ಒಂದು ಪೂರಕ ಘಟಕವನ್ನು ಮಾಡಲಾಗಿದೆ, ಅಲ್ಲಿ ಎಲ್-೧೭ ಲೇತನ್ನು ಅಂದರೆ ಅದಕ್ಕೆ ಬೇಕಾಗಿರತಕ್ಕ ಬಿಡಿ ಭಾಗವನ್ನು ತಯಾರು ಮಾಡುತ್ತಿದ್ದಾರೆ. ಈ ತಯಾರಿಕೆಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಇಲ್ಲಿ ಸ್ಥಳೀಯರೇ ಇಂಥ ಒಂದು ಪೂರಕ ಘಟಕವನ್ನು ಸ್ಥಾಪನೆ ಮಾಡಿದ್ದಾರೆ. ಇಂಥ ಒಂದು ಕೆಲಸವನ್ನು ಬೇರೆ ಕೈಗಾರಿಕೆಗಳಲ್ಲಿಯೂ ಮಾಡಿದರೆ ನಮ್ಮವರು ಇದರ ಲಾಭವನ್ನು ಪಡೆದು ಕೊಂಡು ಮುಂದೆ ಬರುವುದಕ್ಕೆ ಅನುಕೂಲವಾಗುತ್ತದೆ. ಹುಣಸೂರಿಗೆ ಮೀನಾಕ್ಷಿ ಟೆಕ್ಸ್‌ಟೈಲ್ಸ್ ಬಂತು ಇದನ್ನು ಹೊರಗಡೆಯವರು ಬಂದು ಪ್ರಾರಂಭಮಾಡಿದರು. ಇವರು ಬೇಕಾದಷ್ಟು ಲಾಭವನ್ನು ಸಂಪಾದನೆ ಮಾಡಿದ್ದಾರೆ, ಆದರೆ ಇದರಲ್ಲಿ ನಮ್ಮವರಿಗೆ ಉದ್ಯೋಗವನ್ನು ಯಾರಿಗೂ ಕೊಟ್ಟಿಲ್ಲ. ಈ ಕಾರ್ಖಾನೆಯವರು ತಮ್ಮ ಅಳಿಯನನ್ನು ಕರೆದುಕೊಂಡು ಬಂದು ಕೆಲಸವನ್ನು ಕೊಟ್ಟಿದ್ದಾರೆ, ಜೀಪ್ ಡ್ರೈವರ್ ಕೆಲಸಕ್ಕೂ ಕೂಡ ಇವರು ತಮ್ಮವರನ್ನೇ ಕರೆದುಕೊಂಡು ಬಂದಿದ್ದಾರೆ. ಆದ್ದರಿಂದ ಇವರಿಂದ ನಮ್ಮವರಿಗೆ ಹೆಚ್ಚಿನ ಸೌಲಭ್ಯ ದೊರೆಯುತ್ತಿಲ್ಲ ಎಂದು ನಾನು ಹೇಳಬೇಕಾಗಿದೆ. ನಮ್ಮಿಂದ ಇವರು ಭೂಮಿಯನ್ನು ಪಡೆದುಕೊಂಡು, ನೀರನ್ನು ಪಡೆದುಕೊಂಡು ಎಲ್ಲಾ ಸವಲತ್ತುಗಳನ್ನು ಪಡೆದುಕೊಂಡು ನಮ್ಮವರಿಗೆ ಪ್ರೋತ್ಸಾಹ ಕೊಡಲಿಲ್ಲ ಎಂದರೆ ಹೇಗೆ? ದಯಮಾಡಿ ರಾಜ್ಯದಲ್ಲಿ ಯಾವುದೊಂದು ಉದ್ಯಮ ಬಂದರೂ ಅವರು ಇಲಾಖೆಯಲ್ಲಿ ತರಬೇತಿ ಹೊಂದಿದವರ ಪಟ್ಟಿಯನ್ನು ಏನು ತಯಾರು ಮಾಡಿರುತ್ತಾರೆಯೋ ಅದರ ಪ್ರಕಾರ ನಮ್ಮವರಿಗೆ ಕೆಲಸ ಕೊಡಬೇಕು. ಮತ್ತು ನಮ್ಮ ಅನ್ಸಿಲರೀಸ್‌ಗಳು ತಯಾರು ಮಾಡಿದಂಥ ಬಿಡಿ ಭಾಗಗಳನ್ನು ತೆಗೆದುಕೊಳ್ಳಬೇಕು ಎನ್ನುವಂಥ ಒಂದು ನಿಬಂಧನೆಯನ್ನು ತಾವು ಹಾಕಬೇಕು ಮತ್ತು ಈದಿಸೆಯಲ್ಲಿ ತಮ್ಮ ಆದೇಶ ಸಂಬಂಧಪಟ್ಟವರಿಗೆ ಹೋಗಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ರೇಷ್ಮೆ ಕೈಗಾರಿಕೆಯ ಬಗ್ಗೆ ಎರಡು ಮಾತುಗಳನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕದಲ್ಲಿ ರೇಷ್ಮೆ ಕೈಗಾರಿಕೆ ಇಲ್ಲದಿದ್ದರೆ ನಮ್ಮ ಪರಿಸ್ಥಿತಿ ಏನಾಗುತ್ತಿತ್ತೋ ಎಂದು ನಾವು ಪ್ರಶ್ನೆ ಯನ್ನು ಹಾಕಿಕೊಂಡರೆ ಬಹುಶಃ ಇದರ ಸ್ಪಷ್ಟ ಚಿತ್ರವನ್ನು ನಾವು ಎಂದೋ ಕಾಣಬಹುದಾಗಿತ್ತು, ರಾಜ್ಯದಲ್ಲಿರತಕ್ಕ ಸುಮಾರು ೨೦ ಲಕ್ಷ ಜನ ಈ ಒಂದು ಕಸುಬಿನಲ್ಲಿ ತೊಡಗಿದ್ದಾರೆ. ಅದರಲ್ಲಿಯೂ ಹರಿಜನರು ಗಿರಿಜನರು ಮತ್ತು ಹಿಂದುಳಿದವರು ಮತ್ತು ನಿರುದ್ಯೋಗಿಗಳು ಹೆಚ್ಚಿನ ರೀತಿಯಲ್ಲಿ ಉದ್ಯೋಗವಿಲ್ಲದೆ ವಲಸೆ ಹೋಗುತ್ತಿದ್ದುದು ಈ ಕಸುಬಿನಿಂದ ನಿಂತು ಹೋಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಗ್ರಾಮಮಟ್ಟದಲ್ಲಿ ನಮ್ಮ ಜನರ ಆರ್ಥಿಕ ಪರಿಸ್ಥಿತಿ ಈ ಕಸುಬಿನಿಂದ ಮೇಲಾಗಿದೆ ಅನೇಕ ಜಿಲ್ಲೆಗಳು ಮಳೆ ಇಲ್ಲದೆ ಬರಗಾಲಕ್ಕೆ ತುತ್ತಾಗುತ್ತಿದ್ದುವು ಇದರಿಂದ ಸ್ವಲ್ಪಮಟ್ಟಿಗೆ ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೆ ಅನುಕೂಲವಾಗಿದೆ. ಇನ್ನು ಮುಂದೆ ಹೋಗಿ ನಾನು ಹೇಳುವುದಾದರೆ,

ಹಳ್ಳಿಗಾಡಿನಲ್ಲಿ ಈ ಕಸುಬನ್ನು ಬಿಟ್ಟರೆ ಅದಕ್ಕೆ ಪರ್ಯಾಯ, ಅಥವಾ ಸರಿಸಮವಾದ ಕಸುಬು ಮತ್ತೊಂದು ಇಲ್ಲ. ಇದಕ್ಕೆ ರೂತುಮಾನಗಳ ಅಡ್ಡಿಯಾಗಲೀ, ಅತಿವೃಷ್ಟಿ, ಅನಾವೃಷ್ಟಿ ಅಥವಾ ಅಕಾಲವೃಷ್ಟಿಯು, ಇವೆಲ್ಲವನ್ನು ಎದುರಿಸತಕ್ಕ ಒಂದು ಶಕ್ತಿ ಇದೆ. ರೇಷ್ಮೆ ಕೃಷಿ, ಈಗ ಒಳ್ಳೆಯ ಕೈಗಾರಿಕೆಯಾಗಿದೆ. There should be sufficient edcouragement where there is scope for Sericulture. ನೂರಕ್ಕೆ ನೂರು ಈ ಮಾತು ಸತ್ಯ. ಎಷ್ಟು ತೊಂದರೆಗಳು ಬಂದರೂ ಸಹ ಹಿಪ್ಪುನೇರಳೆಯ ಬೇಸಾಯಕ್ಕೆ ಅಡ್ಡಿಯಾಗುವುದಿಲ್ಲ ಎಲ್ಲಾ ತೊಂದಗೆಗಳನ್ನು ತಡೆದು ಕೊಳ್ಳತಕ್ಕ ಶಕ್ತಿ ಇದಕ್ಕೆ ಇದೆಯೆನ್ನುವ ಮಾತನ್ನು ನಮ್ಮ ತಜ್ಞರು ಹೇಳಿದ್ದಾರೆ. ಇದು ಬಂಡವಾಳ ಪ್ರಧಾನವಾದ ಕೈಗಾರಿಕೆಯಲ್ಲ. ಎಲ್ಲರೂ ಇದರಲ್ಲಿ ಪಾಲುಗೊಂಡು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಮಾಡಿಕೊಳ್ಳಬಹುದು.

ಅದ್ಯಕ್ಷರು.—ಮಾನ್ಯ ಸದಸ್ಯರು ನಾಳೆಯ ದಿವಸ ತಮ್ಮ ಭಾಷಣವನ್ನು ಮುಂದುವರಿಸಬಹುದು, ಈಗ ಸಭೆ ಎದ್ದು ನಾಳೆ ಬೆಳ್ಳಿಗ್ಗೆ ೯ ಗಂಟೆಗೆ ಸೇರುತ್ತದೆ.

The House adjourned at Seven of the Clock to meet again at Nine of the Clock on Wednesday, the 28th July, 1982.